ಕೆ.ಎಸ್.ನರಸಿಂಹಸ್ವಾಮಿ ರವರ ಕವನಗಳಲ್ಲಿ ದಾಂಪತ್ಯ ಬದುಕಿನ ಚಿತ್ರಣ

ಈ ನಿಂಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ
ಎಂ.ಫಿಲ್. (ಕನ್ನಡ) ಪದವಿಗಾಗಿ ಅರ್ಪಿಸಲಾಗಿದೆ.

ಸಂಶೋಧನಾ ವಿದ್ಯಾರ್ಥಿ

ದೀಪಾ.ಎಂ

ರಿ.ನಂ.181201030030

ಮಾರ್ಗದರ್ಶಕರು

ಡಾ॥ ಬಿ.ಟಿ. ನೇತ್ರಾವತಿ

ಹ ಪ್ರಾಧ್ಯಾಪಕರು

ಥಮ ದರ್ಜೆ ಕಾಲೇಜು

ಚನ್ನಪಟ್ಟಣ

1431-1435

ಮಾನ್ಯತಾ ಸಂಸ್ಥೆ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)
ಕರ್ನಾಟಕ ಸಂಘ, ಮಂಡ್ಯ

8K0.9
DEP K

ಸಾಹಿತ್ಯ ಅಧ್ಯಯನದ ವಿಭಾಗ
ಕನ್ನಡ ವಿಶ್ವವಿದ್ಯಾಲಯ-ಹಂಪಿ
ವಿದ್ಯಾರಣ್ಯ-583276
2018--19

435

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬.

1435

ಸಿರಿಗನ್ನಡ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ.ಹಂಪಿ

ಕೆ.ಎಸ್.ನರಸಿಂಹಸ್ವಾಮಿ ರವರ ಕವನಗಳಲ್ಲಿ ದಾಂಪತ್ಯ ಬದುಕಿನ ಚಿತ್ರಣ

ಈ ನಿಂಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ
ಎಂ.ಫಿಲ್. (ಕನ್ನಡ) ಪದವಿಗಾಗಿ ಅರ್ಪಿಸಲಾಗಿದೆ.

ಸಂಶೋಧನಾ ವಿದ್ಯಾರ್ಥಿ

ದೀಪಾ.ಎಂ

ರಿ.ನಂ.181201030030

ಮಾರ್ಗದರ್ಶಕರು

ಡಾ॥ ಬಿ.ಟಿ. ನೇತ್ರಾವತಿ
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಚನ್ನಪಟ್ಟಣ

ಮಾನ್ಯತಾ ಸಂಸ್ಥೆ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
(ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದಿದೆ)
ಕರ್ನಾಟಕ ಸಂಘ, ಮಂಡ್ಯ

ಸಾಹಿತ್ಯ ಅಧ್ಯಯನದ ವಿಭಾಗ
ಕನ್ನಡ ವಿಶ್ವವಿದ್ಯಾಲಯ-ಹಂಪಿ
ವಿದ್ಯಾರಣ್ಯ-583276
2018-19

ದೃಢೀಕರಣ ಪತ್ರ

"ಕೆ.ಎಸ್. ನರಸಿಂಹಸ್ವಾಮಿಯವರ ಕವನಗಳಲ್ಲಿ ದಾಂಪತ್ಯ ಬದುಕಿನ ಚಿತ್ರಣ" ಎಂಬ ವಿಷಯದ ಮೇಲೆ ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ (ಕನ್ನಡ) ಪದವಿಗೆ ವಿದ್ಯಾರ್ಥಿಯಾದ ದೀಪ. ಎಂ ಅವರು ನನ್ನ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆಯಲ್ಲಿ ಬರೆದು ಒಪ್ಪಿಸಿರುತ್ತಾರೆಂದು ಹಾಗೂ ಈ ವಿಷಯದ ಬಗ್ಗೆ ಬೇರೆ ಯಾರಿಗೂ ನಾನು ಮಾರ್ಗದರ್ಶನ ಮಾಡಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

B. T. Ne...

ಮಾರ್ಗದರ್ಶಕರ ಸಹಿ
ಡಾ. ಬಿ.ಟಿ. ನೇತ್ರಾವತಿ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಚನ್ನಪಟ್ಟಣ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಚನ್ನಪಟ್ಟಣ – 562160

ದಿನಾಂಕ: 05-11-2019
ಸ್ಥಳ: ಚನ್ನಪಟ್ಟಣ

141593

8K0-9
DEP K

ಪ್ರಮಾಣ ಪತ್ರ

"ಕೆ.ಎಸ್.ನರಸಿಂಹಸ್ವಾಮಿ ರವರ ಕವನಗಳಲ್ಲಿ ದಾಂಪತ್ಯ ಬದುಕಿನ ಚಿತ್ರಣ" ವಿಷಯದ ಮೇಲೆ ಈ ನಿಬಂಧವನ್ನು **ಡಾ. ಬಿ.ಟಿ. ನೇತ್ರಾವತಿ** ಅವರ ಮಾರ್ಗದರ್ಶನದಲ್ಲಿ ನನ್ನ ಸಂಶೋಧನೆಯ ಫಲವಾಗಿ ರಚಿಸಲ್ಪಟ್ಟು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ (ಕನ್ನಡ) ಪದವಿಗೆ ಅರ್ಪಿಸುತ್ತಿದ್ದೇನೆ. (ರಿ.ಜಿ.ನಂ: 181201030030) ಈ ನಿಬಂಧನೆಯನ್ನು ಹಿಂದಿನ ವರ್ಷಗಳಲ್ಲಿ ಯಾರೂ ಇಲ್ಲಿಯವರೆಗೆ ಯಾವುದೇ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿಲ್ಲವೆಂದು ನಾನು ಇಲ್ಲಿ ಪ್ರಮಾಣೀಕರಿಸುತ್ತಿದ್ದೇನೆ.

Deepa.m

ದೀಪಾ.ಎಂ

ಎಂ.ಫಿಲ್ ವಿದ್ಯಾರ್ಥಿ

(ರಿ.ಜಿ.ನಂ: 181201030030)

ದಿನಾಂಕ: 11-11-2019

ಸ್ಥಳ: ಮಂಡ್ಯ

ಕೆ.ಎಸ್.ನರಸಿಂಹಸ್ವಾಮಿ ಅವರ ಕವನಗಳಲ್ಲಿ ದಾಂಪತ್ಯ ಬದುಕಿನ ಚಿತ್ರಣ

ಪರಿವಿಡಿ

ಅಧ್ಯಾಯ-೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕಾವ್ಯವನ್ನು ಕಟ್ಟುವುದು ಒಂದು ಸೃಜನಾತ್ಮಕ ಕಲೆ. ಅದು ಕನ್ನಡ ಸಾಹಿತ್ಯದಲ್ಲಿ ನಿತ್ಯ ನಿರಂತರವಾಗಿ ನಡೆಯುತ್ತಾ ಬಂದಿದೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕಾವ್ಯಗಳ ರಚನೆಯಲ್ಲಿ ಛಂದಸ್ಸಿನ ನಿಯಮಗಳ ಪಾಲನೆ ಕಟ್ಟುನಿಟ್ಟಾಗಿತ್ತು. ಪದಗಳ ರಚನೆ, ಪ್ರಾಸ ಇತರೆ ಎಲ್ಲವೂ ಸೇರಿ ಜನ ಸಾಮಾನ್ಯರಿಗೆ ಸುಲಭವಾಗಿ ನಿಲುಕದಾಗಿದ್ದವು.

ಆಧುನಿಕ ಸಾಹಿತ್ಯ ಸಂದರ್ಭ ಇಂತಹ ಸಂಪ್ರದಾಯ ಬದ್ಧ ಕಟ್ಟುಪಾಡುಗಳಿಂದ ಹೊರಬಂದು ಹೊಸ ಬದಲಾವಣೆಯೊಂದಿಗೆ ಕಾಣಿಸಿಕೊಂಡಿತು. ಅದರ ಪ್ರಕಾರದಲ್ಲಿ ವೈವಿಧ್ಯತೆ ಉಂಟಾಯಿತು. 'ಕಾವ್ಯ' ಕವಿಗಳ ಅಭಿವ್ಯಕ್ತಿಯ ಪ್ರಬಲ ಮಾಧ್ಯಮವಾಯಿತು. ಪಾಶ್ಚಾತ್ಯ ಪ್ರಭಾವ ಮತ್ತು ದೇಶೀಯ ಸತ್ವವನ್ನು ತನ್ನದಾಗಿಸಿಕೊಂಡ ಕವಿಗಳು ಕಾವ್ಯ ಸೃಷ್ಟಿಯಲ್ಲಿ ತೊಡಗಿದರು. ಕಾವ್ಯದ ವಸ್ತುವಿನಲ್ಲಿ ವೈವಿಧ್ಯತೆ ಕಾಣಿಸಿಕೊಂಡು ಜೀವಂತಿಕೆಯನ್ನು ಪಡೆದುಕೊಂಡಿತು. ಓದುಗರ ಮೆಚ್ಚುಗೆಗೂ ಪಾತ್ರವಾಯಿತು. ಹೀಗೆ ಹುಟ್ಟಿಕೊಂಡ ಸಾಹಿತ್ಯವನ್ನು ಧ್ಯೇಯ-ಧೋರಣೆಗಳಿಗನುಗುಣವಾಗಿ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಎಂದು ವಿಭಾಗ ಮಾಡಿಕೊಂಡೆವು. ಬಿ.ಎಂ.ಶ್ರೀಕಂಠಯ್ಯ ಅವರ ೧೯೨೧ರಲ್ಲಿ ಪ್ರಕಟವಾದ 'ಇಂಗ್ಲೀಷ್ ಗೀತೆಗಳು' ಕವನ ಸಂಕಲನದಿಂದ ಆರಂಭಗೊಂಡ ಕಾವ್ಯ ಪರಂಪರೆ ಕುವೆಂಪು, ದ.ರಾ.ಬೇಂದ್ರೆ, ಕೆ.ಎಸ್.ನರಸಿಂಹಸ್ವಾಮಿ, ಚನ್ನವೀರ ಕಣವಿ, ವಿ.ಕೃ.ಗೋಕಾಕ್. ತಾ.ರಾ.ಸುಬ್ಬರಾವ್, ಕುಮಾರ ವೆಂಕಣ್ಣ, ಗೋಪಾಲ ಕೃಷ್ಣ ಅಡಿಗರು, ಸಿದ್ದಲಿಂಗಯ್ಯ, ಹೆಚ್.ಗೋವಿಂದಯ್ಯ, ಮ.ನ.ಜವರಯ್ಯ ಮುಂತಾದ ಇಂದಿನವರೆಗಿನ ಕವಿಗಳು ಅಂದಿನಿಂದ ಕಾವ್ಯ ಚಳುವಳಿಗೆ ಸ್ಪಂದನೆ ನೀಡುತ್ತಾ ವಿಪುಲವಾದ ಕಾವ್ಯಕೃಷಿಗೆ ಕಾರಣರಾಗಿದ್ದಾರೆ. ಕೆ.ಎಸ್. ನರಸಿಂಹಸ್ವಾಮಿ ಅವರು ನವೋದಯ ಮತ್ತು ನವ್ಯ ಕಾಲಘಟ್ಟದಲ್ಲಿ ಸಾಹಿತ್ಯಕೃಷಿ ಮಾಡುತ್ತಾ ಯಾವುದೇ ಚಳುವಳಿ, ತತ್ವ, ಚಿಂತನೆ, ವಾದಗಳಿಗೆ ಅಂಟಿಕೊಳ್ಳದೆ ತಮ್ಮ ಅನುಭವಕ್ಕೆ ಬಂದ, ಕಾವ್ಯವಾಗಬಲ್ಲ, ಕಾವ್ಯವಾಗಬಯಸಿದ ಎಲ್ಲವನ್ನು ವಸ್ತುವಾಗಿಸಿಕೊಂಡರು ಎನ್ನಬಹುದು.

ಕೆ.ಎಸ್.ನ ಅವರ ಕಾವ್ಯ ವಿಷಯಗಳು ವಿಸ್ತಾರವಾದವು. ವಸ್ತು ಮತ್ತು ವಿಚಾರಗಳಲ್ಲಿ ವೈವಿಧ್ಯತೆ ಹೊಂದಿವೆ, ಬದುಕಿನಲ್ಲಿ ಬೇಕಾದ ಬಹುಮುಖ್ಯ ವಿಚಾರಗಳನ್ನು ತಮ್ಮ ಕಾವ್ಯದ ವಸ್ತುವಾಗಿಸಿಕೊಂಡಿದ್ದಾರೆ. ಇವರ ಸಾಹಿತ್ಯದಲ್ಲಿ ಶೃಂಗಾರ ಅತ್ಯಂತ ಮೋಹಕವಾದ ರಸದಂತೆ ವ್ಯಕ್ತವಾಗಿದೆ. ಹಾಗಾಗಿ ಡಿ.ಎಲ್. ನರಸಿಂಹಚಾರ್ಯರು ಅವರ 'ಮೈಸೂರು ಮಲ್ಲಿಗೆ' ಕವನಗಳ ಕುರಿತು "ಕಸ್ತೂರಿಯ ನೆಲದಲ್ಲಿ ಕಾಮನಬಿಲ್ಲನ್ನು ಬಿತ್ತಿ ಬೆಳೆಸಿದ ಹೂದೋಟ"[1] ಎಂದು ಪ್ರಶಂಸಿಸಿದ್ದಾರೆ.

ಜೊತೆಗೆ ಮೈಸೂರು ಮಲ್ಲಿಗೆಯನ್ನು "ತಂಗಾಳಿಗೊಡ್ಡಿದ ನರಸಿಂಹಸ್ವಾಮಿಯವರ ಪ್ರತಿಭೆ ಅಪ್ಸರೆಯಂತೆ. ಈ ಲಾವಣ್ಯವು ಮಣ್ಣು ನೆಲದಿಂದ ಬಂದುದಲ್ಲ ಎನಿಸಿಬಿಟ್ಟಿದೆ" ಎಂದು ಕವಿವರ್ಯ ದ.ರಾ.ಬೇಂದ್ರೆಯವರು ಪ್ರಶಂಸಿಸಿದ್ದಾರೆ.[2] ಇದಲ್ಲದೆ ಅವರ ಇತರ ಕವನ ಸಂಕಲನಗಳು ಬಹಳ ಪ್ರಸಿದ್ಧಿಯಾದವುಗಳಾಗಿವೆ.

ಪಾಂಡಿತ್ಯ ಪ್ರತಿಭೆಯಿಂದ ಮತ್ತು ಸೃಜನಾತ್ಮಕತೆಯಿಂದ ಕೂಡಿದ ಅವರ ಕಾವ್ಯಗಳಲ್ಲಿ ಪ್ರಕೃತಿ, ಕಾಲ, ನಾಡು-ನುಡಿ, ವ್ಯಕ್ತಿ ಚಿತ್ರಣ, ಭೂಮಿ, ಋತು, ಸಂಸ್ಕೃತಿ, ಸಂಪ್ರದಾಯ, ಬದುಕು-ಸಾವು ಪ್ರೀತಿ, ಪ್ರೇಮ, ದಾಂಪತ್ಯಕ್ಕೆ ಸಂಬಂಧಿಸಿದ ವಿಚಾರಗಳು ವ್ಯಕ್ತವಾಗಿವೆ. ಕೆ.ಎಸ್.ನ ಅವರ ಕವನದ ವಸ್ತುಗಳಲ್ಲಿ ನನ್ನನ್ನು ಸೆಳೆದದ್ದು ದಾಂಪತ್ಯಕ್ಕೆ ಸಂಬಂಧಿಸಿದ ಮತ್ತು ನಾಡು-ನುಡಿಗೆ ಸಂಬಂಧಿಸಿದ ಕವನಗಳು. ಈ ಹಿಂದೆ ಇದ್ದ ದಾಂಪತ್ಯ ಜೀವನಕ್ಕೂ, ಪ್ರಸ್ತುತ ಸಂದರ್ಭದಲ್ಲಿ ಇರುವ ದಾಂಪತ್ಯ ಜೀವನಕ್ಕೂ ತುಂಬಾ ವ್ಯತ್ಯಾಸವಿದೆ. ಹಿಂದೆ ದಾಂಪತ್ಯ ಎಂದರೆ ಏಳು ಜನ್ಮದ ಋಣಾನುಬಂಧ, ಬಿಡಿಸಲಾಗದ ಗಂಟು ಎಂದು ಭಾವಿಸಿದ್ದರು. ಹಾಗಾಗಿ ಒಂದು ಬಾರಿ ವಿವಾಹವಾದರೆ ಏನೇ ತೊಂದರೆಗಳು ಎದುರಾದರು ಇಬ್ಬರೂ ಅದನ್ನು ಎದುರಿಸುತ್ತಿದ್ದರು. ಅವರಿಬ್ಬರೂ ಸಮಸ್ಯೆಯನ್ನು ಎದುರಿಸುವಲ್ಲಿ ಸೋಲುತ್ತಿದ್ದರೇ ವಿನಃ ತಮ್ಮ ಸಂಬಂಧವನ್ನು ಕಳೆದುಕೊಳ್ಳುತ್ತಿರಲಿಲ್ಲ. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ದಾಂಪತ್ಯ ಜೀವನಕ್ಕೆ ಇದ್ದಂತಹ ಮಹತ್ವ ಕಡಿಮೆಯಾಗಿದೆ. ನಾಗರಿಕತೆಯ ಹೆಸರಿನಲ್ಲಿ ಆ ಸಂಬಂಧಕ್ಕೆ ಬೆಲೆ ಇಲ್ಲದಂತಾಗಿದೆ. ಒಬ್ಬರಿಗೊಬ್ಬರು ತಮ್ಮ ನಡುವೆ ಪ್ರೀತಿ, ವಿಶ್ವಾಸ, ನಂಬಿಕೆ ಎಂಬ ಸೇತುವೆಯನ್ನು ಕಟ್ಟಿಕೊಳ್ಳುವುದರಲ್ಲಿ ವಿಫಲರಾಗುತ್ತಿದ್ದಾರೆ. ಇಂದು ಪ್ರೀತಿ ಮಧ್ಯೆ ಹಣ ಎಂಬ ವಸ್ತು ತಲೆದೋರಿ ಅದರ ಮುಂದೆ ಪ್ರೀತಿ ಸೋಲುತ್ತಿದೆ.

ಹಾಗಾಗಿ ಪ್ರಸ್ತುತ ಸಂದರ್ಭದಲ್ಲಿ ಜನರು ನಾಗರೀಕತೆ, ವಿಜ್ಞಾನ, ತಂತ್ರಜ್ಞಾನದಲ್ಲಿ ಪ್ರಗತಿ ಹೊಂದುತ್ತಾ ತಾಳ್ಮೆ, ವಿಶ್ವಾಸ, ಪ್ರೀತಿಯನ್ನು ಪಡೆಯುವಲ್ಲಿ ಮಾತ್ರ ಪ್ರಗತಿ ಹೊಂದದೆ ಸ್ವಾರ್ಥಿಗಳಾಗಿ

ಭ್ರಷ್ಟರಾಗುತ್ತಿದ್ದಾರೆ. ಇಂತಹ ಸಂದರ್ಭಕ್ಕೆ ಕೆ.ಎಸ್.ನ ಅವರ ಕವನಗಳಲ್ಲಿ ಚಿತ್ರಿಸಿರುವ ದಾಂಪತ್ಯ, ಸಂಬಂಧಗಳು, ಪ್ರೀತಿಯೆಂದರೇನು? ಮಾತೃ ತತ್ವ ಇವೆಲ್ಲದುರ ಬಗ್ಗೆ ಓದುಗರಿಗೆ ತಿಳಿಸಿಕೊಡುತ್ತವೆ. ನಮ್ಮ ಪ್ರತಿಷ್ಠೆಗಳಿಗಿಂತ ಪ್ರೀತಿ ಮೇಲು ಎಂಬ ತತ್ವ ಸಾರುತ್ತವೆ. ಹಾಗಾಗಿ ದಾಂಪತ್ಯ ಬದುಕಿಗೆ ಸಂಬಂಧಿಸಿದ ಕವನಗಳನ್ನು ವಿಶ್ಲೇಷಣೆ ಮಾಡುವುದು ನನ್ನ ಉದ್ದೇಶವಾಗಿದೆ.

"ಕೆ.ಎಸ್.ನ. ಅವರ ಕವನಗಳಲ್ಲಿ ದಾಂಪತ್ಯ ಬದುಕಿನ ಚಿತ್ರಣ" ಎಂಬ ನಿಬಂದವು ಮುಖ್ಯವಾಗಿ ಆಧುನಿಕ ಕನ್ನಡ ಕಾವ್ಯದ ಹುಟ್ಟು ಮತ್ತು ಬೆಳವಣಿಗೆ. ಕೆ.ಎಸ್.ನ ಅವರ ಬದುಕು- ಬರಹ, ಕೆ.ಎಸ್.ನ. ರವರ ಕಾವ್ಯ ಚಿಂತನೆ, ಕಲೆಗಾರಿಕೆ ಕುರಿತು ವಿಷಯ ವ್ಯಾಪ್ತಿಯನ್ನು ಹೊಂದಿದೆ.

ಮೊದಲ ಅಧ್ಯಾಯವು :- ಈ ನಿಬಂಧದ ವಿಷಯದ ಅಧ್ಯಯನದ ಉದ್ದೇಶ, ವ್ಯಾಪ್ತಿಗೆ ಒಳಪಟ್ಟಿದ್ದು ಇದರಲ್ಲಿ ಈ ನಿಬಂಧದ ಸಾರವನ್ನು ಸಂಕ್ಷಿಪ್ತವಾಗಿ ಹಿಡಿದಿಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ :- ಆಧುನಿಕ ಕನ್ನಡ ಕಾವ್ಯದ ಹುಟ್ಟಿಗೆ ಪ್ರೇರಣೆ ಪ್ರಭಾವ ಯಾವುದು? ಅದರ ಬೆಳವಣಿಗೆಯಲ್ಲಿ ಪಾಶ್ಚಾತ್ಯ ಸಾಹಿತ್ಯ ಮತ್ತು ಇಂಗ್ಲೀಷ್ ಶಿಕ್ಷಣದ ಪಾತ್ರ ಏನು? ಪರಂಪರೆಯಿಂದ ಹೊರಬಂದು ಹೇಗೆ ಹೊಸತನವನ್ನು ಮೈಗೂಡಿಸಿಕೊಂಡಿತು, ಧ್ಯೇಯ ಧೋರಣೆಗಳಿಗೆ ಅನುಗುಣವಾಗಿ ನಡೆದ ವಿಭಾಗ ಕ್ರಮ, ಆಯಾ ಕಾಲಘಟ್ಟಗಳಿಗೆ ಸಂಬಂಧಿಸಿದ ಪ್ರಮುಖ ಕವಿಗಳು ಇತ್ಯಾದಿ ಅಂಶಗಳು ಚರ್ಚೆಯ ವಿಷಯಗಳಾಗಿವೆ.

ಮೂರನೆಯ ಅಧ್ಯಾಯದಲ್ಲಿ :- ಕನ್ನಡ ಸಾಹಿತ್ಯ ಲೋಕದಲ್ಲಿ ಮಹತ್ತರ ಪಾತ್ರ ವಹಿಸಿರುವ, ಅಗಾಧ ಸೇವೆ ಸಲ್ಲಿಸಿರುವ ಕೆ.ಎಸ್.ನ. ಅವರ ಬದುಕನ್ನು ಕುರಿತಂತೆ ಅವರ ಹುಟ್ಟು, ಬೆಳೆವಣಿಗೆ, ವಿದ್ಯಾಭ್ಯಾಸ, ಕೃತಿಗಳು, ಸಂದ ಗೌರವ ಸನ್ಮಾನಗಳು, ಪಡೆದ ಪ್ರಶಸ್ತಿಗಳು, ಅವರಿಗಾದ ಸ್ಪೂರ್ತಿ, ಪ್ರೇರಣೆಗಳು ಮುಂತಾದ ಪ್ರಮುಖ ಅಂಶಗಳನ್ನು ಅನಾವರಣಗೊಳಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ:- ಕೆ.ಎಸ್.ನ ಅವರ ಕಾವ್ಯಗಳಲ್ಲಿ ದಾಂಪತ್ಯ ಬದುಕಿನ ಚಿತ್ರಣ ಅಧ್ಯಯನದ ಕೇಂದ್ರ ಭಾಗವಾಗಿದ್ದು, ಮೊದಲೇ ಹೇಳಿದಂತೆ ಅವರ ಕಾವ್ಯಗಳಲ್ಲಿ ಮುಖ್ಯವಾಗಿ, ಕಾವ್ಯ ಚಿಂತನೆಗೆ ಪ್ರೇರಣೆ, ಪ್ರಭಾವಗಳು, ದಾಂಪತ್ಯ ಪ್ರೇಮ, ದಾಂಪತ್ಯ ವಿರಹ, ದಾಂಪತ್ಯ ಸಮಸ್ಯೆಗಳು, ಮಾತೃ ಪ್ರೇಮ, ತವರಿನ ಬಾಂಧವ್ಯ (ತಂದೆ-ತಾಯಿ-ಮಗಳು) ಕನ್ನಡ ಭಾಷೆಯ ಪ್ರೇಮ ಕುರಿತು ಉಪ ಅಧ್ಯಾಯಗಳನ್ನಾಗಿ ಮಾಡಿಕೊಂಡು ವಿಶ್ಲೇಷಿಸಲಾಗಿದೆ. ದಾಂಪತ್ಯ ಬದುಕಿನಲ್ಲಿ ಪ್ರೇಮ ಎನ್ನುವುದು

ಅಮೂಲ್ಯವಾದ ಒಂದು ಅಂಶವಾಗಿದೆ. ಅಂತಹ ಪ್ರೇಮ ಕೆ.ಎಸ್.ನ. ಕವನಗಳಲ್ಲಿ ಹೇಗೆ ಬಿಂಬಿತವಾಗಿದೆ ಎಂಬುದನ್ನು ತಿಳಿಯಬಹುದು. ಜೊತೆಗೆ ಪತಿ ಮತ್ತು ಪತ್ನಿಯರು ದೂರವಿದ್ದಂತಹ ಸಂದರ್ಭದಲ್ಲಿ ಅವರನ್ನು ಅಗಲಿರಲಾರದ ವಿರಹವನ್ನು ಕವನಗಳಲ್ಲಿ ಕವಿ ಚಿತ್ರಿಸಿರುವುದನ್ನು ಕಾಣಬಹುದು. ಬದುಕು ಎಂದ ಮೇಲೆ ಅಲ್ಲಿ ವಿರಸಗಳು ಸಾಮಾನ್ಯವಾಗಿರುತ್ತದೆ. ಹಾಗಾಗಿ ದಾಂಪತ್ಯದಲ್ಲಿ ಬರುವ ಸಮಸ್ಯೆಗಳು ಹೇಗಿರುತ್ತವೆ ಎಂಬುದರ ಚಿತ್ರಣವನ್ನು ತಿಳಿಯಬಹುದು. ಕವಿ ಹೆಣ್ಣನ್ನು "ಗೃಹಲಕ್ಷ್ಮಿ"ಯಾಗಿ ತನ್ನ ಕವನದಲ್ಲಿ ಚಿತ್ರಿಸಿದ್ದಲ್ಲದೆ ತಾಯ್ತನ ಮತ್ತು ತಾಯಿಯು ಮಗುವಿನ ಮೇಲೆ ಹೊಂದಿರಬಹುದಾದ ಪ್ರೀತಿ ಎಂತಹುದು ಎಂಬುದನ್ನು ಮಾತೃಪ್ರೇಮದಲ್ಲಿ ಗಮನಿಸಬಹುದು. ತವರಿನ ಕುರಿತು ಹೆಣ್ಣು ಮಕ್ಕಳಿಗಿರುವ ಪ್ರೇಮ ಮತ್ತು ಮಗಳ ಮೇಲೆ ತವರಿನವರಿಗಿರುವ ಪ್ರೀತಿಯನ್ನು ಕವಿ ಹೇಗೆ ಚಿತ್ರಿಸಿದ್ದಾರೆಂದು ತಿಳಿಯಬಹುದು.

ಭವ್ಯ ಪರಂಪರೆ, ಇತಿಹಾಸ ಹೊಂದಿರುವ ಭಾರತ ದೇಶ ಸಂಸ್ಕೃತಿಯ ನೆಲೆವೀಡಾದ ಕನ್ನಡ ನಾಡು ನುಡಿಗಳನ್ನು ಕುರಿತು, ಪ್ರೀತಿ, ಉತ್ಕಟ ಅಭಿಮಾನ, ಗೌರವ, ಕಾಳಜಿ, ಆತಂಕ, ಅನುಸರಿಸಬೇಕಾದ ನಿಲುವು ಇತ್ಯಾದಿ ಅಂಶಗಳನ್ನು ಗುರುತಿಸಲಾಗಿದೆ. ಗತವೈಭವದಿಂದ ವಂಚಿತರಾಗುತ್ತಿರುವ ಪ್ರಸ್ತುತ ವ್ಯವಸ್ಥೆಗೆ ಸೂಕ್ಷ್ಮವಾಗಿ ಸ್ಪಂದಿಸಿರುವ ರೀತಿ, ಪ್ರತಿಯೊಬ್ಬ ಭಾರತೀಯನೂ, ಕನ್ನಡಿಗನೂ ಕೈಗೊಳ್ಳಬೇಕಾದ ಕಾರ್ಯಗಳು, ಕವಿಗಳು ಕನ್ನಡ ಮಾತೆಯನ್ನು ಕಡೆಗಣಿಸುತ್ತಿರುವುದಕ್ಕೆ ವಿಷಾದ, ಪ್ರಕೃತಿಯ ರಮಣೀಯತೆ, ಸಮೃದ್ಧಿ, ಇತಿಹಾಸ ದಿವ್ಯ ಪುರುಷರನ್ನು ಕಂಡ ನಾಡು, ಅದೆಲ್ಲವನ್ನು ಹಂತ ಹಂತವಾಗಿ ಕಳೆದುಕೊಳ್ಳುತ್ತಿರುವುದಕ್ಕೆ ಕೊರಗನ್ನು ವ್ಯಕ್ತಪಡಿಸಿದ್ದಾರೆ. ಇಂಥ ಅಂಶಗಳು ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತವೆ.

ಐದನೆಯ ಅಧ್ಯಾಯನದಲ್ಲಿ:- ಕೆ.ಎಸ್.ನ. ಅವರ ಕಾವ್ಯದಲ್ಲಿ ಬಳಸಿರುವ ಭಾಷೆ, ರೂಪಕ, ಅಲಂಕಾರಗಳು ಕಾವ್ಯ ರಚನಾ ರೀತಿ ಹೇಗಿದೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಅಡಿ ಟಿಪ್ಪಣಿಗಳು :-

೧. ಇಹದ ಪರಿಮಳದ ಹಾದಿ-ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ. ಪು.ಸಂ.೧೭. ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು-೨೦೦೦.

೨. ಇಹದ ಪರಿಮಳದ ಹಾದಿ-ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ. ಪು.ಸಂ.೧೭. ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು-೨೦೦೦.

ಅಧ್ಯಾಯ-೨

ಆಧುನಿಕ ಕನ್ನಡ ಕಾವ್ಯದ ಹುಟ್ಟು ಮತ್ತು ಬೆಳವಣಿಗೆ

ಭಾಷೆ ಒಂದು ಅಭಿವ್ಯಕ್ತಿ ಮಾಧ್ಯಮ. ಅದನ್ನು ಮನುಷ್ಯ ತನ್ನ ಬುದ್ಧಿಯ ಫಲದಿಂದ ಸೃಷ್ಟಿಸಿಕೊಂಡದ್ದಾಗಿದೆ. ಈ ರೀತಿಯಾಗಿ ಸೃಷ್ಟಿಸಿದ ಹಲವಾರು ಭಾಷೆಗಳಲ್ಲಿ ಕನ್ನಡ ಭಾಷೆಯು ಒಂದಾಗಿದೆ. ಕನ್ನಡ ಭಾಷೆಯು ಮಾನವನ ದಿನ ನಿತ್ಯದ ಸಂಭಾಷಣೆಗೆ ಸಾಧನವಾಗಿ ಅವನ ಭಾವನೆ ಆಲೋಚನೆಗಳ ಅಭಿವ್ಯಕ್ತಿಗೂ ಅಷ್ಟೇ ಸಹಕಾರಿಯಾಗಿದೆ. ಅಂತೆಯೇ ಕನ್ನಡ ಸಾಹಿತ್ಯವು ತನ್ನದೇ ಆದ ಹುಟ್ಟು ಬೆಳೆವಣಿಗೆಯನ್ನು ಹೊಂದಿದೆ. ಕನ್ನಡ ಸಾಹಿತ್ಯವನ್ನು ಅಧ್ಯಯನದ ಅನುಕೂಲಕ್ಕಾಗಿ ಪ್ರಾಚೀನ ಕನ್ನಡ ಸಾಹಿತ್ಯ, ನಡುಗನ್ನಡ ಸಾಹಿತ್ಯ, ಆಧುನಿಕ ಕನ್ನಡ ಸಾಹಿತ್ಯ ಎಂದು ವಿಭಾಗ ಮಾಡಿಕೊಳ್ಳಲಾಗಿದೆ. ಅದರಲ್ಲಿ ಪ್ರಾಚೀನ ಕನ್ನಡ ಸಾಹಿತ್ಯವು ದೀರ್ಘ ಇತಿಹಾಸವನ್ನು ಹೊಂದಿರುವ ಹಾಗೇಯೇ ಆಧುನಿಕ ಕನ್ನಡ ಸಾಹಿತ್ಯವು ತನ್ನದೇ ಆದ ಇತಿಹಾಸವನ್ನು ಹೊಂದಿದೆ. ಅದು ಕಾಲ, ದೇಶ, ಪರಿಸರ ಪರಿಸ್ಥಿತಿಗಳಿಗೆ ಅನುಗುಣವಾಗಿ ಬದಲಾಗುತ್ತಾ, ರೂಪುಗೊಳ್ಳುತ್ತಾ ಬಂದಿದೆ. ಪ್ರಾಚೀನ ಕನ್ನಡ ಸಾಹಿತ್ಯದ ಮೇಲೆ ಸಂಸ್ಕೃತದ ಪ್ರಭಾವ ದಟ್ಟವಾಗಿದ್ದು ಕನ್ನಡ ಸಾಹಿತ್ಯಕ್ಕೆ ಪೋಷಕವಾಗಿ, ಪ್ರೇರಕವಾಗಿ ಇದೆ. ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತ ಪದಗಳ ಮೆರವಣಿಗೆಯನ್ನು ಗಮನಿಸಿದರೆ ಅವು ನಮ್ಮನ್ನು ಮಂತ್ರ ಮುಗ್ಧರನ್ನಾಗಿ ಮಾಡುತ್ತಾ ಸಂಸ್ಕೃತದ ಪ್ರಭಾವವನ್ನು ತಿಳಿಸುತ್ತದೆ. ಹಾಗೆಯೇ ಹೊಸಗನ್ನಡ ಸಾಹಿತ್ಯದ ಮೇಲೆ ಪಾಶ್ಚಾತ್ಯ ಸಾಹಿತ್ಯ ಅದರಲ್ಲಿಯೂ ಮುಖ್ಯವಾಗಿ ಇಂಗ್ಲೀಷ್ ಸಾಹಿತ್ಯದ ಪ್ರಭಾವ ಅಗಾಧವಾದುದು. ತನ್ನದೇ ಆದ ಪ್ರಾಚೀನ ಗತಿಯಲ್ಲಿ ಸಾಗಿದ್ದ ಸಾಹಿತ್ಯ ಪರಂಪರೆ ಹೊಸ ಸಾಹಿತ್ಯದ ಪ್ರಭಾವವನ್ನು ತನ್ನೊಂದಿಗೆ ಸೇರಿಸಿಕೊಂಡು ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುವ ಪ್ರಯತ್ನ ನಡೆಸಿತು ಎನ್ನಬಹುದು.

೧೯೨೧ ರಲ್ಲಿ ಪ್ರೊ.ಬಿ.ಎಂ.ಶ್ರೀ.ಅವರ "ಇಂಗ್ಲೀಷ್ ಗೀತೆಗಳು" ಪ್ರಕಟವಾಯಿತು. ಇಲ್ಲಿಗೆ ಅಧುನಿಕ ಸಾಹಿತ್ಯದ ಹೆದ್ದಾರಿ ತೆರೆಯಿತು ಎನ್ನಬಹುದು. ಈ ಹೊತ್ತಿಗಾಗಲೇ ಆಧುನಿಕ ಸಾಹಿತ್ಯದ ಅರುಣೋದಯವು ಮುದ್ದಣನ "ರಾಮಾಶ್ವಮೇಧ', ಎಂ.ಎಸ್.ಪುಟ್ಟಣ್ಣನವರ ಕಾದಂಬರಿ 'ಮಾಡಿದ್ದುಣ್ಣೋ ಮಹರಾಯ' ಉತ್ತರ ಕನ್ನಡ ಜಿಲ್ಲೆಯಲ್ಲಿ ರಚಿತವಾದುದೆಂದು ಹೇಳಲಾದ 'ಇಗ್ಗಪ್ಪ ಹೆಗ್ಗಡೆ ಪ್ರಹಸನ' ಮೊದಲಾದ ಕೃತಿಗಳಲ್ಲಿ ಕಂಡಿತ್ತು. ಆದರೆ 'ಇಂಗ್ಲೀಷ್ ಗೀತೆಗಳ' ಮನೋಧರ್ಮ, ಅದರ ಪ್ರಯೋಗಶೀಲತ್ವ, ಇವನ್ನು ಪರಿಗಣಿಸಿದಾಗ ಆಧುನಿಕ ಕನ್ನಡ ಸಾಹಿತ್ಯ ಈ ಕೃತಿಯಲ್ಲಿ ತನ್ನ ಉದಯವನ್ನು ಸಾರಿ ಹೇಳಿತು.[೧]

೧೯ನೇ ಶತಮಾನದ ಉತ್ತರಾರ್ಧದಲ್ಲಿಯೇ 'ಆಧುನಿಕ ಕನ್ನಡ ಸಾಹಿತ್ಯ' ಆರಂಭವಾಗಿ ೨೦ನೇ ಶತಮಾನದಲ್ಲಿ ಹುಲುಸಾಗಿ ಸಾಗಿತು. ಅಂದಿನ ವಸಾಹತುಶಾಹಿ ಸಂಸ್ಕೃತಿಯ ಪರಿಣಾಮದ ಫಲದಿಂದ ಪ್ರವೇಶವಾದ ಶಿಕ್ಷಣ ಪದ್ಧತಿ, ಮುದ್ರಣ, ಆಡಳಿತ ವ್ಯವಹಾರ, ಹೊಸ ಶಿಕ್ಷಣ ಪದ್ಧತಿ, ಹೊಸ ವಿಚಾರ ಸರಣಿ, ವಿಜ್ಞಾನ, ತಂತ್ರಜ್ಞಾನ, ಇಂಗ್ಲೀಷ್ ಸಾಹಿತ್ಯ, ಕೈಗಾರಿಕೀರಣ, ಸಂಸ್ಕೃತೀಕರಣ, ಅಂದಿನ ಆಂಗ್ಲ ಕ್ರೈಸ್ತ ಮಿಶನರಿಗಳು, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಸಾಮಾಜಿಕವಾಗಿ ಉಂಟು ಮಾಡಿದ ಎಚ್ಚರ; ಇವೆಲ್ಲವೂ ಭಾರತೀಯರ ಬದುಕಿನಲ್ಲಿ ಬದಲಾವಣೆಯನ್ನು ತಂದವು. ವ್ಯಕ್ತಿಯ ಸಮಷ್ಠಿ ಬದುಕಿನಲ್ಲಿ ಹೊಸ ದೃಷ್ಟಿ-ಧೋರಣೆ, ಸ್ವಾತಂತ್ರ್ಯ ಪ್ರಜ್ಞೆ, ರಾಷ್ಟ್ರೀಯ ಮನೋಧರ್ಮ, ಸಾಂಸ್ಕೃತಿಕ ಪುನರುಜ್ಜೀವನ, ವೈಜ್ಞಾನಿಕ ಮನೋಭಾವನೆ, ಪ್ರಾದೇಶಿಕ ಮತ್ತು ಭಾರತೀಯ ಭಾವೈಕ್ಯತೆ, ಪ್ರಜಾಪ್ರಭುತ್ವದ ಆಸ್ಥೆ, ವಿಶ್ವಪ್ರಜ್ಞೆ, ಸರ್ವೋದಯ, ಸಮಾನತೆ ಮತ್ತು ಸೋದರತ್ವ, ಮಾನವೀಯ ಪ್ರೇಮ, ಜಾತ್ಯಾತೀತ ಮನೋಧರ್ಮ, ದೇಶಾಭಿಮಾನ ಇನ್ನು ಮೊದಲಾದ ಹೊಸ ಆಶೋತ್ತರಗಳು ಕಾಣಿಸಿಕೊಳ್ಳುವ ಮೂಲಕ ಆಧುನಿಕ ಕನ್ನಡ ಸಾಹಿತ್ಯದ ಉದಯಕ್ಕೆ ಭದ್ರ ಬುನಾದಿಯಾದವು. ಇದರ ಪರಿಣಾಮವಾಗಿ ಸಾಹಿತ್ಯವು ದೈವ ಕೇಂದ್ರದಿಂದ ಮನುಷ್ಯ ಕೇಂದ್ರದೆಡೆಗೆ ನಡೆಯಿತು. ಮನುಷ್ಯ ಮತ್ತು ದೇವರ ಸಂಬಂಧ ಮಾತ್ರವಲ್ಲದೆ ಇತರ ಸಂಬಂಧಗಳು ಅಷ್ಟೇ ಮೌಲ್ಯಯುತವಾದವು ಎಂಬುದನ್ನು ಮನಗಂಡು ಅವನ ಭಾವನೆಗಳು, ಆಸೆಗಳು, ಕನಸುಗಳು ಎಲ್ಲಾ ಕಾವ್ಯದ ವಸ್ತುವಾದವು.

ಇಂಗ್ಲೀಷ್ ವಿದ್ಯಾಭ್ಯಾಸ ಕ್ರಮದಿಂದ ಹೊಸ ವಿಷಯಗಳ ಅಧ್ಯಯನ ಸಾಧ್ಯವಾಯಿತು. ಚಾರಿತ್ರಿಕ ಪ್ರಜ್ಞೆ, ಸ್ವಾತಂತ್ರ್ಯದ ಬಯಕೆ, ದೇಶಪ್ರೇಮ, ಪ್ರಜಾಪ್ರಭುತ್ವ ಶ್ರದ್ಧೆ, ಇವು ಜನಮನದಲ್ಲಿ ಬೇರೂರಿದವು. ಅನೇಕರು ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಸಮಾಜದಲ್ಲಿನ ಅನಿಷ್ಟ ಪದ್ಧತಿಗಳನ್ನು ಖಂಡಿಸಲು ಮತ್ತು ಪಶ್ನಿಸಲು ಸಾಧ್ಯವಾಯಿತು. ಈಶ್ವರಚಂದ್ರ ವಿದ್ಯಾಸಾಗರ, ದೇವೇಂದ್ರನಾಥ ಠಾಗೂರ, ವಿವೇಕಾನಂದ, ರಾಮತೀರ್ಥ, ದಯಾನಂದ ಸರಸ್ವತಿ ಮೊದಲಾದವರ ಪ್ರಭಾವ ಸಾಹಿತ್ಯದ ಮೇಲಾಯಿತು. ಭಾರತೀಯ ಇತಿಹಾಸ, ತತ್ವಚಿಂತನೆ, ಸಾಹಿತ್ಯ ಇವನ್ನು ಪಾಶ್ಚಾತ್ಯರು ಮೆಚ್ಚಿದ್ದು ಇಲ್ಲಿಯವರಿಗೆ ಅವುಗಳಲ್ಲಿ ಗೌರವವನ್ನು, ಆಸಕ್ತಿಯನ್ನು ಉಂಟುಮಾಡಿದವು. ಪಾಶ್ಚಾತ್ಯರ ಅಧ್ಯಯನ ವಿಧಾನ ಮಾರ್ಗದರ್ಶನವಾಯಿತು. ಅಂದಿನ ವಿದ್ಯಾರ್ಥಿಗಳು ಛಾಸರ್‌ನ ಕವನಗಳು, ಷೇಕ್ಸ್‌ಪಿಯರ್‌ನ ನಾಟಕಗಳು, ಪ್ಲೇಟೋನ ಸಂಭಾಷಣೆಗಳ ಅನುವಾದ, ಮಿಲ್ಟನ್, ವರ್ಡ್ಸ್‌ವರ್ತ್, ಶೆಲ್ಲಿ, ಕೀಟ್ಸ್, ಬ್ರೌನಿಂಗ್, ಟೆನಿಸನ್, ಆರ್ನಾಲ್ಡ್ ಮೊದಲಾದವರ ಕವನಗಳು. ಜೇನ್‌ಆಸ್ಟೀನ್, ಸ್ಕಾಟ್, ಥ್ಯಾಕರೆ ಮೊದಲಾದವರ ಕಾದಂಬರಿಗಳನ್ನು ಅಭ್ಯಾಸ ಮಾಡುತ್ತಿದ್ದರು. ಇಂಗ್ಲೀಷ್ ಸಾಹಿತ್ಯ, ಇಂಗ್ಲೆಂಡಿನ ಚರಿತ್ರೆ ಇವುಗಳ

ಅಧ್ಯಯನದಿಂದ ಎಲ್ಲವನ್ನು ಪ್ರಶ್ನಿಸುವ, ವಿಶ್ಲೇಷಿಸುವ ಮನೋಧರ್ಮದ ಪರಿಚಯವಾಯಿತು. ಸಾಹಿತ್ಯ-ಜೀವನಗಳ ಸಂಬಂಧ ಎಷ್ಟು ವ್ಯಾಪಕವಾದುದು, ನಿಕಟವಾದುದು, ಹೇಗೆ ಸಾಹಿತ್ಯ ಸಮಾಜದ ಮತ್ತು ವ್ಯಕ್ತಿಯ ಜೀವನದ ಎಲ್ಲ ಸಂವೇದನಗೆಳಿಗೆ ಸ್ಪಂದಿಸುತ್ತದೆ ಎಂಬುದರ ದರ್ಶನವಾಯಿತು.

ವಚನಗಳಲ್ಲಿ, ದಾಸಸಾಹಿತ್ಯದಲ್ಲಿ, ಭಾವಗೀತೆಯ ಅಂಶ ಕನ್ನಡದಲ್ಲಿ ಪ್ರಕಟವಾಗಿತ್ತು. ಆದರೆ ಇಂಗ್ಲೀಷ್ ಭಾಷೆಯ ಭಾವಗೀತೆಯ ಸಂಪತ್ತು ರೋಮಾಂಚನಗೊಳಿಸುವಂತಹದ್ದು ಮನುಷ್ಯನ ಅತಿ ಸೂಕ್ಷ್ಮ ಭಾವನೆಗಳು, ಕನಸುಗಳು, ನೋವು-ನಿರಾಸೆಗಳು ಎಲ್ಲವೂ ಅಭಿವ್ಯಕ್ತಿಗೊಂಡು ಆ ಕಾವ್ಯದ ಅಭ್ಯಾಸ ಕನ್ನಡಿಗನ ಪಾಲಿಗೊಂದು ವಿಶಿಷ್ಟ ಅನುಭವವಾಯಿತು[3].

ರೊಮ್ಯಾಂಟಿಕ್ ಕವಿಗಳು ನಿಸರ್ಗದಲ್ಲಿ ಜೀವಂತವಾದ ಜಗತ್ತನ್ನು ಕಂಡರು. ಪಾಶ್ಚಾತ್ಯ ಕಾವ್ಯದಲ್ಲಿ ನಿಸರ್ಗ ಒಂದು ಜೀವಂತ ಶಕ್ತಿ, ಚೆಲುವಿನ ತವರು, ಮಿತ್ರ, ಗುರು ಎಲ್ಲ ಆಗಿದೆ. ನಿಸರ್ಗದೊಡಗಿನ ಈ ಒಡನಾಟ, ನಿಸರ್ಗದ ಸ್ವರೂಪ-ವ್ಯಾಪಾರಗಳಲ್ಲಿ ಈ ಬೆರಗು ಭಾರತೀಯ ಲೇಖಕನಿಗೆ ಹೊಸದು. ಆಧುನಿಕ ಕನ್ನಡ ಸಾಹಿತ್ಯದ ಹುಟ್ಟಿಗೆ ಪಾಶ್ಚಾತ್ಯ ಪ್ರಭಾವ ಮಾತ್ರವಲ್ಲದೆ ದೇಶಿಯ ಪ್ರಭಾವಗಳೂ ಕೂಡಾ ಪರಿಣಾಮಕಾರಿ ಪಾತ್ರ ವಹಿಸಿವೆ. ಭಾರತದ ಸ್ವಾತಂತ್ರ್ಯ ಹೋರಾಟ ನಮ್ಮ ನಾಡು, ನುಡಿ, ಸಂಸ್ಕೃತಿಗಳಲ್ಲಿ ಅಭಿಮಾನವನ್ನು ಮೂಡಿಸಿತ್ತು. ಜನಭಾಷೆಯ ಬಳಕೆ ಅವಶ್ಯಕವಾಯಿತು. ಸ್ವಾತಂತ್ರ್ಯದ ಹೋರಾಟ ದೇಶಪ್ರೇಮ ಗೀತೆಗಳ ರಚನೆಗೆ ಪ್ರೋತ್ಸಾಹ ಕೊಟ್ಟಿತು. ಪಾಶ್ಚಾತ್ಯ ವಿದ್ವಾಂಸರು ಭಾರತದ ಚರಿತ್ರೆ, ತತ್ವಶಾಸ್ತ್ರ, ಇತಿಹಾಸಗಳಲ್ಲಿ ವಿಶಿಷ್ಟ ಆಸಕ್ತಿವಹಿಸಿ, ಸಂಶೋಧನೆ ನಡೆಸಿದರು. ಅವರ ಕೃತಿಗಳು ಕನ್ನಡಿಗರಿಗೆ ತಮ್ಮ ಸಾಂಸ್ಕೃತಿಕ ಸಂಪತ್ತನ್ನು ಅಧ್ಯಯನ ಮಾಡಲು ದಾರಿ ದೀಪಗಳಾಗಿವೆ. ಹೀಗೆ ಪಾಶ್ಚಾತ್ಯ ಮತ್ತು ದೇಶಿಯ ಪ್ರೇರಣೆ ಪ್ರಭಾವಕ್ಕೊಳಗಾಗಿ ಒಂದು ಸ್ಪಷ್ಟ ರೂಪ ಪಡೆದ ಆಧುನಿಕ ಕನ್ನಡ ಸಾಹಿತ್ಯವನ್ನು ಮುಖ್ಯ ಪ್ರವೃತ್ತಿಗಳಿಗೆ ಅನುಗುಣವಾಗಿ, ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ ಮತ್ತು ದಲಿತ ಸಾಹಿತ್ಯವೆಂದು ಸಾಮಾನ್ಯವಾಗಿ ವಿಂಗಡಿಸಲಾಗಿದೆ.

ನವೋದಯ ಕಾಲಘಟ್ಟದ ಆರಂಭವನ್ನು ವಿದ್ಯುಕ್ತವಾಗಿ ಉದ್ಘಾಟಿಸಿದ ಕೃತಿಯೆಂದರೆ, ಬಿ.ಎಂ.ಶ್ರೀ ಅವರ 'ಇಂಗ್ಲೀಷ್ ಗೀತೆಗಳು, ಇದರಲ್ಲಿ ಇಂಗ್ಲೀಷ್ ರೋಮ್ಯಾಂಟಿಕ್ ಸಂಪ್ರದಾಯದ ಕವಿಗಳಾದ ವರ್ಡ್ಸ್‌ವರ್ತ್, ಶೆಲ್ಲಿ, ಬರ್ನ್ಸ್, ಬ್ರೌನಿಂಗ್, ಟೆನಿಸನ್, ಸ್ಕಾಟ್, ಬೈರನ್ ಹಾಗೂ ಷೇಕ್ಸ್‌ಪಿಯರ್ ಮುಂತಾದವರ ಕವನಗಳು ಸೇರಿವೆ. ಅದೇ ಸಮಯಕ್ಕೆ ಗೋವಿಂದ ಪೈ, ಡಿ.ವಿ.ಗುಂಡಪ್ಪ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ದ.ರಾ.ಬೇಂದ್ರೆ, ಕೆ.ವಿ.ಪುಟ್ಟಪ್ಪ, ಪು.ತಿ.ನರಸಿಂಹಾಚಾರ್, ವಿ.ಸೀತಾರಾಮಯ್ಯ,

ಕೆ.ಎಸ್.ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ, ಚೆನ್ನವೀರಕಣವಿ, ಜಿ.ಎಸ್.ಶಿವರುದ್ರಪ್ಪ, ಜಿ.ಪಿ.ರಾಜರತ್ನಂ, ತೀ.ನಂ.ಶ್ರೀಕಂಠಯ್ಯ, ವಿ.ಕೃ.ಗೋಕಾಕ್ ಇನ್ನೂ ಮುಂತಾದ ಹಲವಾರು ಪ್ರತಿಭಾವಂತ ಕವಿಗಳ ಪಡೆ ಕಾವ್ಯ ಪ್ರಕಾರದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿದ್ದಾರೆ. ಆಶಾವಾದಿತನ, ಜೀವನೋತ್ಸಾಹ, ಪ್ರಕೃತಿಪ್ರೇಮ, ಆಧ್ಯಾತ್ಮಿಕತೆ, ಆದರ್ಶವಾದ ಮನೋವೃತ್ತಿ ಮತ್ತು ಕನಸುಗಾರಿಕೆ ಮುಂತಾದ ಧೋರಣೆಗಳನ್ನು ಈ ಸಾಹಿತ್ಯ ಹೊಂದಿದೆ.

ಮನುಷ್ಯನ ಭಾವನೆಗಳು, ಆಸೆಗಳು, ಕನಸುಗಳು, ಪ್ರಕೃತಿಯಲ್ಲಿಯ ಬೆರಗು, ಕುತೂಹಲ, ಊಹೆ ಮನುಷ್ಯ- ಮನುಷ್ಯರ ಸಂಬಂಧ, ಸಮಾಜದಲ್ಲಿ ಮನುಷ್ಯ, ಕುಟುಂಬದಲ್ಲಿ ಮನುಷ್ಯ, ಸ್ನೇಹ, ಪ್ರೀತಿ, ದ್ವೇಷ ಹೀಗೆ ಎಲ್ಲವೂ ಇದರ ವಸ್ತುವಾಗಿದ್ದು "ಇಹಲೋಕದ ಬಾಳು ಪರಲೋಕಕ್ಕೆ ದಾರಿ ಮಾತ್ರವಲ್ಲ, ಈ ಲೋಕದ ಬಾಳಿನಲ್ಲೇ ಇದಕ್ಕೆ ತೀವ್ರ ಆಸಕ್ತಿ" ಎಂಬ ಮೌಲ್ಯಗಳಿಗೆ ಒತ್ತು ನೀಡಿತು.

೧೯೪೫ರ ಸುಮಾರಿಗೆ ಅಖಿಲ ಭಾರತದಲ್ಲಿ ಹೊಸದೊಂದು ಗಾಳಿ ಬೀಸಲಾರಂಭಿಸಿತ್ತು. ಈ ಗಾಳಿಯಲ್ಲಿ ಉಸಿರಾಡಿ ಇದರಿಂದ ಚೇತನ ಪಡೆದವರು ತಮ್ಮನ್ನು 'ಪ್ರಗತಿಶೀಲರು' ಎಂದು ಕರೆದುಕೊಂಡರು. ಈ ಕಾಲದ ಸಾಹಿತಿಗಳು "ಸಾಹಿತ್ಯ ವಾಸ್ತವಿಕತೆಗೆ ಮುಸುಕನ್ನು ಹಾಕಬಾರದು, ಅದು ಸಾಮಾಜಿಕ ಕ್ರಾಂತಿಯ ಆಯುಧವಾಗಬೇಕು ಎಂಬ ತಮ್ಮ ದೃಷ್ಟಿಗೆ ಅನುಗುಣವಾಗಿ ಸಣ್ಣ ಕಥೆಗಳನ್ನು ಕಾದಂಬರಿಗಳನ್ನು ಬರೆದರು". ಅ.ನ.ಕೃ, ತಾ.ರಾ.ಸುಬ್ಬರಾವ್, ಕುಮಾರವೆಂಕಣ್ಣ, ಅರ್ಚಕವೆಂಕಟೇಶ್, ಬಸವರಾಜಕಟ್ಟೀಮನಿ, ನಿರಂಜನ, ಅನಂತನಾರಾಯಣ ಮೊದಲಾದವರು ಪ್ರಗತಿಶೀಲ ತತ್ವಗಳಿಗನುಗುಣವಾಗಿ ಬರೆದರು. ಕ್ರಾಂತಿಯಿಂದ ಮಾತ್ರ ಶಾಂತಿ ಸ್ಥಾಪಿಸಲು ಸಾಧ್ಯ ಎಂಬುದನ್ನು ನಂಬಿದ ಈ ಸಾಹಿತ್ಯ ಧರ್ಮ, ಜಾತಿ ಹಾಗೂ ದೇವರುಗಳ ಹೆಸರಿನಲ್ಲಿ ನಡೆಯುವ ಶೋಷಣೆಯನ್ನು ಧಿಕ್ಕರಿಸಿತ್ತು. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಶೋಷಣೆಗೆ ಒಳಗಾಗಿರುವ ಸ್ತ್ರೀ ಸಮಾಜದ ಏಳ್ಗೆಯನ್ನು ಬಯಸಿತ್ತು. ಹೀಗೆ ಅನೇಕ ಧ್ಯೇಯ ಧೋರಣೆಗಳನ್ನೊಳಗೊಂಡ ಪ್ರಗತಿಶೀಲ ಸಾಹಿತ್ಯ, ಕಾವ್ಯ ಪ್ರಕಾರಕ್ಕೆ ಗಮನ ಕೊಡದಿದ್ದರೂ, ಕಾದಂಬರಿ, ಸಣ್ಣಕಥೆ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ನಡೆಸಿದ್ದಾರೆ.

ನವ್ಯ ಸಾಹಿತ್ಯ ಆಧುನಿಕ ಕನ್ನಡ ಸಾಹಿತ್ಯದ ಒಂದು ಬಹುಮುಖ್ಯ ಸಾಹಿತ್ಯ ಪಂಥ. ೧೯೫೦ರ ನಂತರವೇ ಕನ್ನಡ ಸಾಹಿತ್ಯದಲ್ಲಿ 'ನವ್ಯತೆ' ಕಾಣಿಸಿಕೊಳ್ಳಲು ಆರಂಭವಾದದ್ದು, ನವ್ಯ ಸಾಹಿತ್ಯದ ಮೇಲೆ ಪಾಶ್ಚಿಮಾತ್ಯರ ಸಂಕೇತವಾದ ಮತ್ತು ಪ್ರತಿಮಾವಾದ, ಅಸ್ತಿತ್ವವಾದ, ಅಸಂಗತವಾದ, ಮನೋವಿಶ್ಲೇಷಣಾತ್ಮಕ ವಿಧಾನ ಇವುಗಳ ಪ್ರೇರಣೆ ಮತ್ತು ಪ್ರಭಾವ ಉಂಟಾಗಿದೆ, "ಕನ್ನಡ ನವ್ಯ

ಸಾಹಿತ್ಯದ ಹರಿಕಾರ" ಎಂದು ಹೆಸರು ಪಡೆದ ಕವಿ ಎಂ.ಗೋಪಾಲಕೃಷ್ಣ ಅಡಿಗರು ೧೯೫೨ರಲ್ಲಿ ತಮ್ಮ 'ನಡೆದು ಬಂದ ದಾರಿ' ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ ನವ್ಯ ಕಾವ್ಯದ ಅನಿವಾರ್ಯತೆಯನ್ನು ಕುರಿತು ಹೇಳಿದ್ದಾರೆ.

ನವ್ಯ ಸಾಹಿತ್ಯ ಮನುಷ್ಯನ ಆತ್ಮನಿಷ್ಠತೆ, ಮಾನಸಿಕ ಸಂಘರ್ಷ, ಭಯ, ಭೀಭತ್ಸತೆ, ದ್ವಂದ್ವತೆ, ಸಿನುಕುತನ, ಏಕಾಂಗಿತನ, ನಿರಾಸೆ, ಪರಕೀಯತೆ ಇನ್ನೂ ಮುಂತಾದ ಸಂಕೀರ್ಣತೆಗಳ ಮುಖವಾಣಿಯಾಯಿತು. ವಾಸ್ತವದ ತೀವ್ರ ಹಂಬಲದ ಮೂಲಕ ನಾಸ್ತಿಕತೆಗೆ ಹೆಚ್ಚು ಒತ್ತು ಕೊಟ್ಟಿತ್ತು.

ಭಾಷೆಯ ಸೂಕ್ಷ್ಮತೆ, ಕಲಾತ್ಮಕತೆ, ವ್ಯಂಗ್ಯ ಧ್ವನಿ ಸಂಕೇತಗಳನ್ನು ಬಳಸಿ, ಆ ಮೂಲಕ ಬದುಕಿನ ಸಂಕೀರ್ಣಾನುಭವಗಳನ್ನು ಶೋಧಿಸುವ ಪ್ರಯತ್ನ ಮಾಡಿದರು. ಗೋಪಾಲಕೃಷ್ಣ ಅಡಿಗರ 'ಕೃಷ್ಣನ ಕೊಳಲು' 'ಹಿಮಗಿರಿಯ ಕಂದರ' ಮುಖ್ಯವಾದವು. ಬಿ.ಸಿ.ರಾಮಚಂದ್ರಶರ್ಮರ 'ಏಳು ಸುತ್ತಿನ ಕೋಟೆ' 'ಹೇಸರಗತ್ತೆ' ಮೊದಲಾದ ನವ್ಯ ಕಾವ್ಯ ಸಂಕಲನಗಳನ್ನು ಪ್ರಕಟಿಸಿದರು. ಲೈಂಗಿಕ ವಿಷಯಗಳನ್ನು ಕಾವ್ಯ ವಸ್ತುವನ್ನಾಗಿ ಪ್ರಯೋಗಿಸಿದ ವೈಶಿಷ್ಟ್ಯ ಶರ್ಮರದು, ಗಂಗಾಧರ ಚಿತ್ತಾಲ, ಶಂಕರಮೊಕಾಶಿಪುಣೇಕರ, ಸು.ರಂ.ಎಕ್ಕುಂಡಿ. ಪಿ.ಲಂಕೇಶ್, ಯು.ಆರ್.ಅನಂತಮೂರ್ತಿ, ಶ್ರೀಕೃಷ್ಣ ಆಲನಹಳ್ಳಿ ಮುಂತಾದವರು ನವ್ಯ ಕಾವ್ಯದ ಪ್ರಮುಖ ಕವಿಗಳಾಗಿದ್ದಾರೆ.

ದಲಿತ ಬಂಡಾಯ ಸಾಹಿತ್ಯವು ಒಂದು ಚಳುವಳಿಯಾಗಿ ಆರಂಭವಾದದ್ದು ೧೯೭೦ರ ಉತ್ತರಾರ್ಧದಲ್ಲಿ ದಲಿತ ಬಂಡಾಯ ಸಾಹಿತ್ಯಕ್ಕೆ ಮಾರ್ಕ್ಸ್‌ವಾದ, ಲೋಹಿಯಾವಾದ, ಅಂಬೇಡ್ಕರ್‌ವಾದ, ಹಾವನೂರರ ವರದಿ, ಬಸವಲಿಂಗಪ್ಪನವರ ಬೂಸಾ ಪ್ರಕರಣ, ಜಾತಿವಿನಾಶ ಸಮ್ಮೇಳನ ಮುಂತಾದ ಸಾಹಿತ್ಯೇತರ ಅಂಶಗಳು ಮತ್ತು ತೆಲುಗಿನ ದಿಗಂಬರ ಕಾವ್ಯ, ಮರಾಠಿ ದಲಿತ ಸಾಹಿತ್ಯ ಚಳುವಳಿ ಮತ್ತು ಆಫ್ರಿಕಾದ ಕಪ್ಪು ಸಾಹಿತ್ಯ ಚಳುವಳಿ ಮುಂತಾದ ಅಂಶಗಳು ಪ್ರಭಾವ ಬೀರಿದವು.

ದಲಿತ ಬಂಡಾಯ ಸಾಹಿತ್ಯದಲ್ಲಿ ಜನಪ್ರಿಯವಾದ ಸಾಹಿತ್ಯ ಪ್ರಕಾರಗಳೆಂದರೆ, ಕಥೆ ಮತ್ತು ಕಾವ್ಯ ೧೯೭೫ರಲ್ಲಿ ಪ್ರಕಟವಾದ ಸಿದ್ದಲಿಂಗಯ್ಯನವರ 'ಹೊಲೆಮಾದಿಗರ ಹಾಡು' ಹೊಸ ಬಗೆಯ ಭಾಷೆ, ರೊಚ್ಚು, ಆವೇಶಗಳೊಂದಿಗೆ ಪ್ರಕಟವಾಗಿ ಕನ್ನಡ ಕಾವ್ಯ ಲೋಕವನ್ನೇ ಅಲ್ಲಾಡಿಸಿತ್ತು. ಹೆಚ್ ಗೋವಿಂದಯ್ಯ, ಇಂದೂಧರ ಹೊನ್ನಾಪುರ, ಚನ್ನಣ್ಣ ವಾಲೀಕಾರ, ಮ.ನ.ಜವರಯ್ಯ ಮುಂತಾದವರು ಶ್ರೇಷ್ಠ ಕವಿಗಳಾಗಿದ್ದಾರೆ.

ಸ್ತ್ರೀ ಸಂವೇದನೆಯ ಹಿನ್ನೇಲೆಯಲ್ಲಿ ಮಹಿಳಾ ಸಾಹಿತ್ಯ ಕೂಡ ಗಮನಾರ್ಹ ಬೆಳವಣಿಗೆಯನ್ನು ಹೊಂದುತ್ತಿರುವುದನ್ನು ಗಮನಿಸಬಹುದು. ಮಹಿಳೆಯರ ಕಾವ್ಯದಲ್ಲಿಯೂ ಭಾವಗೀತಾತ್ಮಕತೆ, ಬದುಕಿನ ಪ್ರೀತಿ, ಹೃದಯದ ಕನಸುಗಳು, ಎಲ್ಲವುಗಳ ಮುಕ್ತ ಅಭಿವ್ಯಕ್ತಿಯನ್ನು ಕಾಣಬಹುದು. ಸ.ಉಷಾ. ಎಚ್.ಎಲ್.ಪುಷ್ಪ, ಸುಕನ್ಯಾ ಮಾರುತಿ, ಚಿ.ಸರ್ವಮಂಗಳ, ಎ.ಆರ್.ಕಮಲ. ಡಿ.ವಿಜಯಾ, ಮಾಲತಿಪಟ್ಟಣಶೆಟ್ಟಿ, ಭಾಗ್ಯ ಸುದರ್ಶನ, ಹೇಮಾ ಪಟ್ಟಣಶೆಟ್ಟಿ, ಪ್ರತಿಭಾನಂದ ಕುಮಾರ್, ಶಶಿಕಲಾ ವೀರಯ್ಯಸ್ವಾಮಿ ಮುಂತಾದ ಮಹಿಳಾ ಸಾಹಿತಿಗಳನ್ನು ಪ್ರಮುಖವಾಗಿ ಗುರುತಿಸಬಹುದು.

ಸಾಹಿತ್ಯದ ಉದ್ದೇಶ, ಧ್ಯೇಯ, ಧೋರಣೆಯ ಆಧಾರದ ಮೇಲೆ ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ–ದಲಿತ ಎಂದು ಗುರುತಿಸಲಾಗಿದ್ದು, ಅದರದೇ ಆದ ತತ್ವಚಿಂತನೆ, ವಿಚಾರಗಳನ್ನು ಒಳಗೊಂಡ ಕಾವ್ಯವನ್ನು ಅಂದಿನ ಕವಿಗಳು ರಚಿಸಿದ್ದಾರೆ. ಅಷ್ಟೇ ಅಲ್ಲ ಯಾವ ಒಂದು ತತ್ವ ಸಿದ್ಧಾಂತಕ್ಕೂ ಅಂಟಿಕೊಳ್ಳದ ಅನೇಕ ಕವಿಗಳು ತಾವು ಕಂಡು, ಪಡೆದ ಅನುಭವಗಳೆಲ್ಲವನ್ನು ಕಾವ್ಯವಾಗಿಸುತ್ತಲೇ ಇದ್ದಾರೆ, ಹೀಗೆ ಪಾಶ್ಚಾತ್ಯ ಪ್ರಭಾವ ಮತ್ತು ದೇಶಿಯ ಸಂವೇದನೆಯಿಂದ ಪ್ರೇರಣೆಗೊಂಡ ಆಧುನಿಕ ಕನ್ನಡ ಕಾವ್ಯ ಅಂದಿನಿಂದ ಮೊದಲುಗೊಂಡು ಇಂದಿನವರೆಗೂ ತನ್ನದೇ ಆದ ವಿಶಿಷ್ಟ ವಸ್ತು ವೈವಿಧ್ಯತೆಯಿಂದ ಕೂಡಿ ಬೆಳೆಯುತ್ತಲೇ, ನಿರಂತರ ಬದಲಾವಣೆಗೆ ಒಳಗಾಗುತ್ತಿದ್ದು ಹೊಸ ಸೃಷ್ಟಿ ಮತ್ತು ಚೈತನ್ಯಕ್ಕೆ ಕಾರಣವಾಗುತ್ತದೆ.

ಅಡಿ ಟಿಪ್ಪಣಿಗಳು

೧. ಹೊಸಗನ್ನಡ ಸಾಹಿತ್ಯ ಚರಿತ್ರೆ– ಎಲ್.ಎಸ್.ಶೇಷಗಿರಿರಾವ್ ಪು.ಸಂ.೦೯
ಅಂಕಿತ ಪ್ರಕಾಶನ ೨೦೧೫(ಪ್ರಿಂಟ್), ಬೆಂಗಳೂರು.

೨. ಹೊಸಗನ್ನಡ ಸಾಹಿತ್ಯ ಚರಿತ್ರೆ– ಎಲ್.ಎಸ್.ಶೇಷಗಿರಿರಾವ್ ಪು.ಸಂ.೬೫
ಅಂಕಿತ ಪ್ರಕಾಶನ –೨೦೧೫, ಬೆಂಗಳೂರು.

ಅಧ್ಯಾಯ- ೩

ಕೆ.ಎಸ್.ನರಸಿಂಹಸ್ವಾಮಿ ಅವರ ಬದುಕು- ಬರಹ

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭ ಅನನ್ಯವಾದುದು. ಆರೇಳು ದಶಕಗಳ ಅವಧಿಯಲ್ಲಿ ನವೋದಯ, ಪ್ರಗತಿಶೀಲ, ನವ್ಯ ಬಂಡಾಯ- ದಲಿತ ಚಳುವಳಿಗಳ ಮೂಲಕ ವೈವಿಧ್ಯತೆಯನ್ನೂ, ಬಹುಮುಖ ಶ್ರೀಮಂತಿಕೆಯನ್ನು ಪಡೆದುಕೊಂಡ ಆಧುನಿಕ ಕನ್ನಡ ಸಾಹಿತ್ಯ ಅನೇಕ ಪ್ರತಿಭಾವಂತ ಸಾಹಿತಿಗಳನ್ನು ಕನ್ನಡಕ್ಕೆ ಕೊಟ್ಟಿದೆ.

ಆಧುನಿಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವ ಅನೇಕ ಮಹತ್ವದ ಕವಿಗಳಲ್ಲಿ ಕೆ.ಎಸ್.ನರಸಿಂಹಸ್ವಾಮಿಯವರೂ ಒಬ್ಬರಾಗಿದ್ದಾರೆ. ಆಧುನಿಕ .ಕನ್ನಡ ಕಾವ್ಯವನ್ನು ಕುರಿತು ಮಾತನಾಡುವಾಗ ಕೆ.ಎಸ್.ನ ಅವರನ್ನು ಹೊರತುಪಡಿಸಿ ಚರ್ಚಿಸುವುದು ಸಾಧ್ಯವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ.

ಜನನ:- ತಮ್ಮ ವೈಯಕ್ತಿಕ ಬದುಕಿನಲ್ಲಿ ಹೇಗೋ ಹಾಗೆಯೇ ತಮ್ಮ ಕಾವ್ಯ ಜೀವನದಲ್ಲಿಯೂ 'ಮನೆಯಿಂದ ಮನಗೆ' ಸದಾ ಚಲಿಸುತ್ತಿದ್ದ ಶ್ರೇಷ್ಠ ಕವಿ,ಅನುವಾದಕ,ವಿಮರ್ಶಕರಾದ ಕೆ.ಎಸ್.ನರಸಿಂಹಸ್ವಾಮಿಯವರು ಕೆ.ಎಸ್.ನ ಎಂದೇ ಪ್ರಸಿದ್ಧರಾಗಿದ್ದಾರೆ. ಇವರು ಮಂಡ್ಯ ಜಿಲ್ಲೆಯ ಕೆ.ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿ ಎಂಬ ಗ್ರಾಮದಲ್ಲಿ ೨೬-೧-೧೯೧೫ರಲ್ಲಿ ಜನಿಸಿದರು. "ಕಿಕ್ಕೇರಿ ಸುಬ್ಬರಾವ್ ನರಸಿಂಹಸ್ವಾಮಿ" ಇವರ ಪೂರ್ಣ ಹೆಸರು. ಅವರ ತಂದೆ ಸುಬ್ಬರಾಯರು ಮತ್ತು ತಾಯಿ ನಾಗಮ್ಮರವರು. ಕೆ.ಎಸ್.ನ ಜನಿಸಿದ ಸ್ವಲ್ಪ ಕಾಲದಲ್ಲಿಯೇ ಸುಬ್ಬರಾಯರು ಕಿಕ್ಕೇರಿಯನ್ನು ಬಿಟ್ಟು ಮೈಸೂರಿಗೆ ಬಂದು ನೆಲೆಸಿದರು. ಅಲ್ಲದೆ ಸುಬ್ಬರಾಯರು ಸಂಗೀತ ಪ್ರೇಮಿಗಳು ಮತ್ತು ಪಿಟೀಲು ವಾದಕರು ಆಗಿದ್ದರು. ಪ್ರಸಿದ್ಧ ವಾಗ್ಗೇಯಕಾರರಾದ ವಾಸುದೇವಾಚಾರ್ಯರು ಇವರ ಹತ್ತಿರದ ಸ್ನೇಹಿತರಾಗಿದ್ದರು. ಇವರು ಸುಬ್ಬರಾಯರ ಮನೆಗೆ ಬಂದು ಸಂಗೀತ- ಸಾಹಿತ್ಯಗಳ ಬಗ್ಗೆ ಘಂಟೆಗಟ್ಟಲೆ ಮಾತನಾಡುತ್ತಿದ್ದರಂತೆ. ಈ ಎಲ್ಲಾ ಕಾರಣಗಳಿಂದ ಮನೆಯಲ್ಲಿ ಸದಾ ಸಂಗೀತದ ವಾತಾವರಣವಿದ್ದು ಕೆ.ಎಸ್.ನ ಅವರನ್ನು ತುಂಬಾ ಪ್ರಭಾವಿಸಿದೆ ಎನ್ನಬಹುದು.

ವಿದ್ಯಾಭ್ಯಾಸ:-ಕೆ.ಎಸ್.ನ.ರವರು ಮೈಸೂರಿನ ಮಹಾರಾಜ ಹೈಸ್ಕೂಲಿನಲ್ಲಿ ತಮ್ಮ ಶಿಕ್ಷಣವನ್ನು ಮುಗಿಸಿದರು. ಆನಂತರ ತಂದೆಯ ಇಚ್ಛೆಯಂತೆ ಎಂಜಿನಿಯರಿಂಗ್ ಶಿಕ್ಷಣವನ್ನು ಪಡೆಯಲು ವಿಜ್ಞಾನ ವಿಭಾಗವನ್ನು ಆಯ್ಕೆ ಮಾಡಿಕೊಂಡು, ಮೈಸೂರಿನ ಇಂಟರ್ಮಿಡಿಯೆಟ್ ಕಾಲೇಜಿನ "ಪ್ರಿ-ಎಂಜಿನಿಯರಿಂಗ್" ವಿಭಾಗಕ್ಕೆ ಸೇರಿಕೊಂಡರು.

ಅಲ್ಲಿನ ಪದವಿಪೂರ್ವ ಶಿಕ್ಷಣ ಮುಗಿದ ನಂತರ ಇವರಿಗೆ ಬೆಂಗಳೂರಿನ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶ ದೊರೆಯಿತು. ಆದರೆ ಆ ಕ್ಷೇತ್ರದಲ್ಲಿ ಆಸಕ್ತಿ ಇಲ್ಲದುದರಿಂದ ಕೆ.ಎಸ್.ನ ತಮ್ಮ ಶಿಕ್ಷಣ ಮಾರ್ಗವನ್ನು ಬದಲಿಸಿ ಬಿ.ಎ ಮಾಡಲು ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ೧೯೩೪ರಲ್ಲಿ ಸೇರಿದರು. ಈ ಕಾಲೇಜಿನಲ್ಲಿ ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದ ಬಿ.ಎಂ.ಶ್ರೀ, ಕೆ.ಎಸ್.ನ ಅವರಿಗೆ ಇಂಗ್ಲೀಷ್ ಕಾವ್ಯವನ್ನು ಪಾಠ ಮಾಡಿದ್ದರು ಹಾಗಾಗಿ ಬಿ.ಎಂ.ಶ್ರೀ ಅವರ ಪ್ರಭಾವ ಇವರ ಮೇಲಿದೆ. ಬೆಂಗಳೂರಿನಲ್ಲಿ ವಾರಾನ್ನವನ್ನು ಮಾಡುತ್ತಾ ಅತಿ ಕಷ್ಟದಿಂದ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಿದ್ದಾಗ ಜೂನಿಯರ್ ಬಿ.ಎ. ಮುಗಿಸುವ ಕಾಲಕ್ಕೆ ಅವರ ತಂದೆ ತೀರಿಕೊಂಡರು. ಪರಿಣಾಮತಃ ಕೆ.ಎಸ್.ನ ತಮ್ಮ ಪದವಿ ಶಿಕ್ಷಣವನ್ನು ಮುಂದುವರಿಸಲಾಗದೆ ಓದನ್ನು ಅರ್ಧಕ್ಕೆ ನಿಲ್ಲಿಸಿ ಮೈಸೂರಿಗೆ ಹಿಂದಿರುಗಿದರು. ತಮ್ಮ ಮೇಲೆ ಬಿದ್ದ ಸಂಸಾರದ ಜವಾಬ್ದಾರಿಯನ್ನು ನಿರ್ವಹಿಸಲು ತಮ್ಮ ತಂದೆ ಕೆಲಸ ಮಾಡುತ್ತಿದ್ದ ಒಂದು ಅಂಗಡಿಯಲ್ಲಿಯೇ ಅವರು ಲೆಕ್ಕ ಬರೆಯುವ ಕೆಲಸಕ್ಕೆ ಸೇರಿಕೊಂಡರು ಸ್ವಲ್ಪ ಕಾಲದ ನಂತರ ಅವರಿಗೆ ಸರ್ಕಾರಿ ನೌಕರಿಯೊಂದು ದೊರಕಿ ಅವರ ಆರ್ಥಿಕ ಪರಿಸ್ಥಿತಿ ಸ್ವಲ್ಪ ಸುಧಾರಿಸಿತು. ವರ್ಗಾವಣೆಯಾದ ಈ ಕೆಲಸದಲ್ಲಿಯೇ ಮುಂದುವರೆದ ಕೆ.ಎಸ್.ನ ಕೊನೆಯಲ್ಲಿ ಬೆಂಗಳೂರಿನ ಹೌಸಿಂಗ್ ಬೋರ್ಡ್ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ೧೯೭೦ರಲ್ಲಿ ನಿವೃತ್ತರಾದರು. ನಿವೃತ್ತಿಯ ನಂತರ ಎರಡು ವರ್ಷ ಕರ್ನಾಟಕ ಸಾಹಿತ್ಯ ಅಕಾಡೆಮಿಯಲ್ಲಿ (೧೯೭೨-೭೪) ಮತ್ತು ಅನಂತರ "ಯುವ ಕರ್ನಾಟಕ"ದ ಸಂಪಾದಕರಾಗಿ (೧೯೩೪-೭೬) ಕೆಲಸ ಮಾಡಿದರು.

೧೯೪೫ರಲ್ಲಿ ತಿಪಟೂರಿನಲ್ಲಿ ಶಿರಸ್ತೆದಾರರಾಗಿದ್ದ ನಾಡಿಗ ಭೀಮರಾಯರ ಒಬ್ಬಳೇ ಮಗಳಾದ ವೆಂಕಮ್ಮನವರನ್ನು ಕೆ.ಎಸ್.ನ ಮದುವೆಯಾದರು. ಅವರೊಡನೆ ತುಂಬು ಬಾಳನ್ನು ನಡೆಸಿದ ಕೆ.ಎಸ್.ನ ಅವರಿಗೆ ನಾಲ್ಕು ಗಂಡು ಮಕ್ಕಳು ಮತ್ತು ನಾಲ್ಕು ಹೆಣ್ಣು ಮಕ್ಕಳು. ಸರ್ಕಾರಿ ನೌಕರಿಯಿಂದ ನಿವೃತ್ತರಾದ ಮೇಲೆ ಮೊದಲು ಬೆಂಗಳೂರಿನ ಜಯನಗರದಲ್ಲಿ ಅನಂತರ ಬನಶಂಕರಿ ಬಡಾವಣೆಯಲ್ಲಿರುವ

“ಕಾವ್ಯಶ್ರೀ” ಎಂಬ ತಮ್ಮ ಸ್ವಂತ ಮನೆಯಲ್ಲಿ ವಾಸಿಸುತ್ತಿದ್ದ ಕೆ.ಎಸ್.ನ ೨೮–೧೨–೨೦೦೩ರಲ್ಲಿ ಇಹಲೋಕವನ್ನು ತ್ಯಜಿಸಿದರು.

೧೯೪೩ರಲ್ಲಿ ಪ್ರಕಟವಾದ ತಮ್ಮ ಮೊದಲ ಕವನ ಸಂಕಲನ ‘ಮೈಸೂರ ಮಲ್ಲಿಗೆ’ಯಿಂದ ಅಪಾರ ಜನಪ್ರಿಯತೆಯನ್ನು ಗಳಿಸಿದ ಕೆ.ಎಸ್.ನ ತಮ್ಮ ಕೊನೆಯ ದಿನಗಳವರೆಗೂ ಕಾವ್ಯ ಕ್ಷೇತ್ರದಲ್ಲಿ ಕ್ರಿಯಾಶೀಲರಾಗಿಯೇ ಇದ್ದರು, ಇವರು ಒಟ್ಟು ಹದಿನಾರು ಕವನ ಸಂಕಲನಗಳನ್ನು ರಚಿಸಿದರು. ಕಾವ್ಯ ಸೃಷ್ಟಿಯೇ ಅಲ್ಲದೆ ಅನುವಾದ, ವಿಮರ್ಶೆ, ಸಣ್ಣಕಥೆ, ಇತ್ಯಾದಿ ಪ್ರಕಾರಗಳಲ್ಲಿಯೂ, ಸಾಕಷ್ಟು ಕೆಲಸ ಮಾಡಿದ ಕೆ.ಎಸ್.ನ ಅವರ ಒಟ್ಟು ಕೃತಿಗಳ ಸಂಖ್ಯೆ ಮೂವತ್ತೈದು. ಇವರ ಸಮಗ್ರ ಕಾವ್ಯ “ಮಲ್ಲಿಗೆ ಮಾಲೆ” ಲಿಪಿ ಪ್ರಕಾಶನದಿಂದ ೨೦೦೪ರಲ್ಲಿ ಪ್ರಕಟವಾಯಿತು. ಇವರ ಅಭಿನಂದನಾ ಗ್ರಂಥ “ಚಂದನ” ಜಿ.ಎಸ್.ಶಿವರುದ್ರಪ್ಪನವರ ಸಂಪಾದಕತ್ವದಲ್ಲಿ ೧೯೭೫ರಲ್ಲಿ ಹೊರಬಂದಿತು. ಇವರ ಆಯ್ದ ಕವನಗಳು ಇಂಗ್ಲೀಷ್, ಹಿಂದಿ, ತೆಲುಗು, ಇತ್ಯಾದಿ ಭಾಷೆಗಳಿಗೆ ಅನುವಾದಗೊಂಡಿವೆ. ಮೈಸೂರ ಮಲ್ಲಿಗೆಯನ್ನು ಆದರಿಸಿದ ಒಂದು ಚಲನಚಿತ್ರ ಮತ್ತು ನಾಟಕ ಯಶಸ್ವಿಯಾಗಿವೆ.

<u>ಕೆ.ಎಸ್.ನ. ಅವರ ಕೃತಿಗಳು:–</u>

ಕಾವ್ಯ

ಕ್ರಸಂ	ಕವನ ಸಂಗ್ರಹಗಳು	ಮೊದಲ ಮುದ್ರಣ
೧	ಮೈಸೂರ ಮಲ್ಲಿಗೆ	೧೯೪೨
೨	ಐರಾವತ	೧೯೪೫
೩	ದೀಪದ ಮಲ್ಲಿ	೧೯೪೭
೪	ಉಂಗುರ	೧೯೪೯
೫	ಇರುವಂತಿಕೆ	೧೯೫೨
೬	ಶಿಲಾಲತೆ	೧೯೫೮
೭	ಮನೆಯಿಂದ ಮನೆಗೆ	೧೯೬೦
೮	ತೆರೆದ ಬಾಗಿಲು	೧೯೭೬
೯	ನವ ಪಲ್ಲವ	೧೯೮೩
೧೦	ಮಲ್ಲಿಗೆಯ ಮಾಲೆ (ಸಮಗ್ರ ಕಾವ್ಯ)	೧೯೮೬
೧೧	ದುಂಡುಮಲ್ಲಿಗೆ	೧೯೯೩
೧೨	ನವಿಲದನಿ	೧೯೯೯
೧೩	ಸಂಜೆಹಾಡು	೨೦೦೦

<u>ಗದ್ಯ</u>

<u>ಅನುವಾದಗಳು</u>

ಅನ್ಯ ಭಾಷೆಗೆ ಅನುವಾದಿತ ಕೃತಿಗಳು

1. Tr.P.Sreenivasa Rao & Sumateendra Nadig
   The Buddha Smile: Kavyalaya 1993.

2. Tr.Ramachandra Sharma, The Open Door; Sahitya Akademi, 2001.

ಪ್ರಶಸ್ತಿ –ಪುರಸ್ಕಾರಗಳು

೧. ೧೯೪೩ – ದೇವರಾಜ ಬಹದ್ದೂರ್ ಬಹುಮಾನ (ಮೈಸೂರ ಮಲ್ಲಿಗೆ)

೨. ೧೯೫೨ – ಮೈಸೂರು ರಾಜ್ಯದ ಸಂಸ್ಕೃತಿ ಪ್ರಸಾರ ಬಹುಮಾನ (ಶಿಲಾಲತೆ)

೩. ೧೯೫೮ –ದೆಹಲಿ ಕವಿ ಸಮ್ಮೇಳನದಲ್ಲಿ ಭಾಗವಹಿಸಿದ್ದು.

೪. ೧೯೬೫ –ಕಾರವಾರ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ "ಕಾವ್ಯ ಮಂಥನ" ಅಧ್ಯಕ್ಷತೆ.

೫. ೧೯೭೦ – ಬೆಂಗಳೂರು "ಸುವರ್ಣ ಮಹೋತ್ಸವ" ಕನ್ನಡ ಸಾಹಿತ್ಯ ಸಮ್ಮೇಳನ ಸನ್ಮಾನ.

೬. ೧೯೭೨ – 'ಚಂದನ' ಅಭಿನಂದನ ಗ್ರಂಥ ಸಮರ್ಪಣೆ (ಸಂ.ಜಿ.ಎಸ್.ಶಿವರುದ್ರಪ್ಪ)

೭. ೧೯೭೨ – ಕರ್ನಾಟಕ 'ರಾಜ್ಯೋತ್ಸವ ಪ್ರಶಸ್ತಿ'

೮. ೧೯೭೪ – ಗೌರವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ

೯. ೧೯೭೮ – ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (ತೆರೆದಬಾಗಿಲು)

೧೦. ೧೯೮೫ – ಗೌರವ ಫಿಲೋಷಿಪ್, ಕನ್ನಡ ಸಾಹಿತ್ಯ ಪರಿಷತ್ತು

೧೧. ೧೯೮೭ – ಕೇರಳದ 'ಕುಮಾರನ್ ಆಶಾನ್ ಪ್ರಶಸ್ತಿ

೧೨. ೧೯೯೦ – ಅಧ್ಯಕ್ಷತೆ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮೈಸೂರು

೧೩. ೧೯೯೨ – ರಾಷ್ಟ್ರೀಯ ಪ್ರಶಸ್ತಿ ಅತ್ಯುತ್ತಮ ಗೀತ ರಚನಕಾರ (ಮೈಸೂರ ಮಲ್ಲಿಗೆ)

೧೪. ೧೯೯೨ – ಗೌರವ ಡಿ.ಲಿಟ್. ಪ್ರಶಸ್ತಿ, ಬೆಂಗಳೂರು ವಿಶ್ವವಿದ್ಯಾನಿಲಯ

೧೫. ೧೯೯೬ – ಡಾ.ಮಾಸ್ತಿ ಸಾಹಿತ್ಯ ಪ್ರಶಸ್ತಿ

೧೬. ೧೯೯೭ – ಪಂಪ ಪ್ರಶಸ್ತಿ, ಕರ್ನಾಟಕ ಸರ್ಕಾರ

೧೭. ೧೯೯೯ – ಗೌರವ ಫಿಲೋಷಿಪ್, ಕೇಂದ್ರ ಸಾಹಿತ್ಯ ಅಕಾಡೆಮಿ

೧೮. ೨೦೦೦ – ಗೊರೂರು ಸಾಹಿತ್ಯ ಪ್ರಶಸ್ತಿ

ಕೆ.ಎಸ್.ನ. ಅವರ ಕೃತಿಗಳ ಬಗ್ಗೆ ವಿಮರ್ಶಾ ಕೃತಿಗಳು/ಲೇಖನಗಳು

೧. ಅಮೂರ.ಜಿ.ಎಸ್–ಕೆ.ಎಸ್.ನರಸಿಂಹಸ್ವಾಮಿ ಲೌಕಿಕ ಕಾವ್ಯ; 'ಕೊರಳು–ಕೊಳಲು' ಪ್ರಿಯದರ್ಶಿನಿ ಪ್ರಕಾಶನ. ೨೦೦೫

೨. ಕೀರ್ತಿನಾಥ ಕುರ್ತುಕೋಟಿ– 'ಕೆ.ಎಸ್.ನರಸಿಂಹಸ್ವಾಮಿ 'ನೂರು ನೂರು ಸ್ವರ; ಕನ್ನಡ ವಿ.ವಿ. ೧೯೯೮

೩. ಕೊಡ್ಲೆಕೆರೆ ಚಿಂತಾಮಣಿ, 'ಶೋಧನ ಪ್ರಧಾನ ಮಾದರಿ', ಅಂತರಂಗದ ಆಕಾಶ ಚಿತ್ರಮೂಲ ಪ್ರಕಾಶನ ೨೦೦೬

೪. ನರಹಳ್ಳಿ ಬಾಲಸುಬ್ರಹ್ಮಣ್ಯ– ಇಹದ ಪರಿಮಳದ ಹಾದಿ; ಲಿಪಿ ಪ್ರಕಾಶನ. ೧೯೯೫

೫. ವಿ. ಚಂದ್ರಶೇಖರ ನಂಗಲಿ ಅವರ 'ಕೆ.ಎಸ್.ನ ಕಾವ್ಯದಲ್ಲಿ ಪರಿಸರ ಮತ್ತು ಭೂಮಿತತ್ವ', ಸಂಕ್ರಮಣ, ೩೭೧ ೨೦೦೭

೬. ಡಿ.ಆರ್. ನಾಗರಾಜ್ ಅವರ ಕೆ.ಎಸ್.ನರಸಿಂಹಸ್ವಾಮಿಯವರ ಕಾವ್ಯದಲ್ಲಿ ಭೂಮಿ; ಶಕ್ತಿ ಶಾರದೆಯ ಮೇಳ; ಅಕ್ಷರ ಪ್ರಕಾಶನ. ೧೯೮೩

೭. ಸುಮತೀಂದ್ರನಾಡಿಗ ಅವರ ಮೌನದಾಚೆಯ ಮಾತು; ಸ್ವಪ್ನ ಬುಕ್ ಹೌಸ್. ೨೦೦೭

೮. ನಾಯಕ ಜಿ.ಪ್ರಶಾಂತ್, ಪ್ರೀತಿಯ ಬದುಕು', ನಮ್ಮ ಪ್ರಕಾಶನ. ೨೦೦೪

೯. ರಾಘವೇಂದ್ರರಾವ್ ಎಚ್.ಎಸ್., 'ನವಪಲ್ಲವ; ಒಂದು ಪರಿಚಯ', ನಿಲುವು; ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ. ೧೯೮೯

೧೦. ____'ಸಂಜೆಹಾಡು', 'ತರು ತಳೆದ ಪುಷ್ಪ', ಕ್ರೈಸ್ಟ್ ಕಾಲೇಜ್ ಕನ್ನಡ ಸಂಘ. ೨೦೦೪.

೧೧. 'ನಿಮ್ಮುಸಿರು ನನ್ನ ಕವಿತೆ', ಮುನ್ನುಡಿ ಮಲ್ಲಿಗೆ ಮಾಲೆ, ಲಿಪಿ ಪ್ರಕಾಶನ. ೨೦೦೪

೧೨. ರಾಮಚಂದ್ರನ್ ಸಿ.ಎನ್. "ಗಡಿಯಾರದಂಗಡಿಯ ಮುಂದೆ, ಒಂದು ವ್ಯಾಖ್ಯಾನ", ಗಾಂಧಿ ಬಜಾರ್ ಮೇ. ೨೦೦೭

೧೩. ರಾಮೇಗೌಡ ಕೆ.ಎಸ್. ನರಸಿಂಹಸ್ವಾಮಿ, ನವಕರ್ನಾಟಕ ೨೦೦೨

೧೪. (ಸಂ) ಶಿವರುದ್ರಪ್ಪ ಜಿ.ಎಸ್. ಚಂದನ, ಕೆ.ಎಸ್.ನ ಅಭಿನಂದನ ಸಮಿತಿ. ೧೯೭೨

ಈ ಸಂಕಲನದಲ್ಲಿ ಶಿವರುದ್ರಪ್ಪ ಜಿ.ಎಸ್. ಚಂದನ, ಕೆ.ಎಸ್.ನ. ಪು.ತಿ.ನ, ಜಿ.ಎಸ್.ಎಸ್. ಕಣವಿ. ಜಿ.ಎಸ್.ಸಿದ್ದಲಿಂಗಯ್ಯ, ಕುರ್ತುಕೋಟಿ ಇತ್ಯಾದಿ ವಿದ್ವಾಂಸರು ಬರೆದಿರುವ ೩೨ ಲೇಖನಗಳಿವೆ.

ಕೆ.ಎಸ್.ನ.ಅವರು ಆಧುನಿಕ ಕನ್ನಡ ಕಾವ್ಯ ಚರಿತ್ರೆಯ ನವೋದಯ, ನವ್ಯ, ನವ್ಯೋತ್ತರ ಈ ಎಲ್ಲ ಚಳುವಳಿಗಳಲ್ಲೂ ಹಾದು ಬಂದವರಾಗಿದ್ದಾರೆ. ಎಲ್ಲಾ ಮಾರ್ಗಗಳಿಂದಲೂ ಪಡೆಯಬಹುದಾದುದನ್ನು ಪಡೆದುಕೊಂಡಂಥವರು. ಸಾಹಿತ್ಯವೆಂಬುದು "ಬದುಕಿನ ಪ್ರತಿಬಿಂಬ" ಮತ್ತು ಬದುಕಿನ ಗತಿಬಿಂಬವೆಂದು ಜಿ.ಎಸ್.ಎಸ್ ಹೇಳಿರುವಂತೆ ಕೆ.ಎಸ್.ನ. ಅವರ ಕವನಗಳು ಅದರ ಎಲ್ಲ ಛಾಯೆಗಳ ಪ್ರತಿಧ್ವನಿ ಎಂದು ಹೇಳಬಹುದು. ಸಾಹಿತ್ಯದಲ್ಲಿ ಇಷ್ಟೆಲ್ಲಾ ಸಾಧನೆ ಮಾಡಿದ ಅವರು ಸಹೃದಯರ ಮನಸ್ಸಿನಲ್ಲಿ ಹಿಂದೆಯೂ, ಇಂದಿಗೂ, ಎಂದೆಂದಿಗೂ ಚಿರಸ್ಥಾಯಿಯಾಗಿ ಉಳಿಯುತ್ತಾರೆನ್ನಬಹುದು.

ಅಧ್ಯಾಯ–೪

ಕೆ.ಎಸ್.ನರಸಿಂಹಸ್ವಾಮಿ ಅವರ ಕಾವ್ಯಗಳಲ್ಲಿ ದಾಂಪತ್ಯ ಬದುಕಿನ ಚಿತ್ರಣ

೪.೧ ಕೆ.ಎಸ್.ನ. ಕಾವ್ಯ ಚಿಂತನೆಗೆಪ್ರೇರಣೆ ಮತ್ತು ಪ್ರಭಾವ

ಸಾಹಿತ್ಯ ರಚನೆ ಮಾಡುವ ಕವಿಗಳು ಇತರ ಸಾಮಾನ್ಯ ವ್ಯಕ್ತಿಗಳಿಗಳಿಂತ ಭಿನ್ನವಾಗಿರುತ್ತಾರೆ. ಅವರು ಸಾಹಿತ್ಯ ರಚನೆಯ ಕಾರ್ಯದಲ್ಲಿ ತೊಡಗಲು ಅವರು ಬೆಳೆದ ಕೌಟುಂಬಿಕ ವಾತಾವರಣ, ಸುತ್ತಮುತ್ತಲಿನ ಪರಿಸರ, ಅವರ ವಿಶೇಷ ವ್ಯಕ್ತಿತ್ವ, ಕೌಶಲ್ಯಗಳು ಹಾಗೂ ಹಿರಿಯ ಪ್ರಸಿದ್ಧ ಸಾಹಿತಿಗಳ ಪ್ರಭಾವವಿರುತ್ತದೆ. ಈ ಅಂಶಗಳನ್ನು ಅವರು ತಮ್ಮ ಸಾಹಿತ್ಯದಲ್ಲಿ ವ್ಯಕ್ತಪಡಿಸಿದ್ದಾರೆ.

ಕನ್ನಡ ನಾಡಿನ 'ಒಲವಿನ ಕವಿ' ಎಂದೇ ಪ್ರಸಿದ್ಧರಾಗಿರುವ ಕೆ.ಎಸ್.ನ ಜನಪ್ರೀತಿ ಹಾಗೂ ವಿಮರ್ಶಕಮನ್ನಣೆ ಎರಡನ್ನೂ ಗಳಿಸಿಕೊಂಡ ವಿಶಿಷ್ಟ ಪ್ರತಿಭೆಯ ಕವಿ. ಸುಮಾರು ಆರು ದಶಕಗಳಿಂದಲೂ ಕಾವ್ಯಕೃಷಿ ನಡೆಸುತ್ತಾ ಬಂದಿರುವ ಕೆ.ಎಸ್.ನ ಆಧುನಿಕ ಕನ್ನಡ ಕಾವ್ಯದ ಜೊತೆ ಜೊತೆಗೆ ಬೆಳೆದು ಬಂದವರು. ಇವರು ಸಾಹಿತ್ಯವನ್ನು ಮೊದಲಿಗೆ ಪ್ರೌಢಶಾಲೆಯಲ್ಲಿದ್ದಾಗಲೇ ಆರಂಭಿಸಿದರೆಂದು ಹೇಳಲಾಗುತ್ತದೆ.

"ಕೆ.ಎಸ್.ನ ಇಂಗ್ಲೀಷ್ ಕವಿತೆಯನ್ನು ಮೊದಲು ರಚಿಸಿದರೆಂದು ಹೇಳಲಾಗುತ್ತದೆ. ಕೆ.ಎಸ್.ನ ಅವರನ್ನು ಕನ್ನಡದಲ್ಲಿ ಕಾವ್ಯ ರಚನೆ ಮಾಡುವಂತೆ ಅವರ ಮೇಷ್ಟ್ರು ಪಟ್ಟಾಭಿರಾಮನ್ ಅವರು ಪ್ರೇರೇಪಿಸಿದರು. ಅವರು 'ಶ್ರೀ'ಯವರ ಇಂಗ್ಲೀಷ್ ಗೀತೆಗಳನ್ನು ಓದಲು ಕೆ.ಎಸ್.ನ ಅವರಿಗೆ ನೀಡಿದರು. ಇದು ಕೆ.ಎಸ್.ನ. ಅವರ ಕಾವ್ಯ ಜೀವನಕ್ಕೆ ಮಹತ್ವದ ಪ್ರಭಾವ ಬೀರಿದ ಕೃತಿ. ಅವರೇ ಹೇಳಿರುವಂತೆ "ಇಂಗ್ಲೀಷ್ ಕವಿತೆಯ ಗುಲಾಬಿ ತೋಟದಲ್ಲಿದ್ದ ನನ್ನನ್ನು ಕನ್ನಡಕ್ಕೆ ಬರುವಂತೆ ಮಾಡಿಕೊಂಡಿತು ಎಂದಿದ್ದಾರೆ"[೧].

ಕೆ.ಎಸ್.ನ. ಅವರ ಮೇಲೆ ಪ್ರಭಾವ ಬೀರಿದ ಮತ್ತೊಬ್ಬ ಕವಿ ಬರ್ನ್ಸ್. ಆಂಗ್ಲ ಕವಿಗಳಲ್ಲಿ ರಾಬರ್ಟ್ ಬರ್ನ್ಸ್ ಪ್ರಮುಖನಾದವನು, ಈತ ಸ್ಕಾಟ್ಲೆಂಡಿನವನು. ತನ್ನ ದೇಶದ ಜನಕ್ಕೆ ನಾಡು ನುಡಿ ಎಂದರೆ ಪ್ರೀತಿ ಹುಟ್ಟುವಂತೆ ಮಾಡಿ, ಜನಪದ ಗೀತೆಗಳ ಧಾಟಿಯನ್ನು ಹಿಡಿದು ನೂರಾರು ಗೀತೆಗಳನ್ನು, ಗೀತರತ್ನಗಳನ್ನು ರಚಿಸಿ ಯಶಃಕಾಯಕನಾಗಿದ್ದಾನೆ.

ಜನತೆಯೊಡನೆ ಒಂದಾಗುವ ತಮ್ಮ ಕಾವ್ಯ ಜನರನ್ನು ಮುಟ್ಟಬೇಕೆಂಬ ಹಂಬಲವನ್ನು ಕೆ.ಎಸ್.ನ. ಬರ್ನ್ಸ್ ಕವಿಯಿಂದ ಪಡೆದಿದ್ದಾರೆ.

ಕೆ.ಎಸ್.ನ.ರವರ ಕಾವ್ಯ ರಚನೆ ಆರಂಭದಲ್ಲಿ ಕುವೆಂಪು ಅವರ 'ಕೊಳಲು' (೧೯೩೦), 'ನವಿಲು' (೧೯೩೩), 'ಪಾಂಚಜನ್ಯ'(೧೯೩೩), ಬೇಂದ್ರೆಯವರ 'ಕೃಷ್ಣಕುಮಾರಿ' (೧೯೨೨), 'ಗರಿ'(೧೯೩೨), 'ಮೂರ್ತಿ ಮತ್ತು ಕಾಮಕಸ್ತೂರಿ' (೧೯೩೪), ಪು.ತಿ.ನ. ಅವರ 'ಹಣತೆ' (೧೯೩೩), ಮಾಸ್ತಿಯವರ 'ಭಿನ್ನಹ' (೧೯೨೨), 'ಅರುಣ' (೧೯೨೪), 'ತಾವರೆ' (೧೯೩೦), 'ಚೆಲುವು' (೧೯೩೧), ತೀ.ನಂ.ಶ್ರೀ ಅವರ 'ಒಲುಮೆ' (೧೯೩೨), ಡಿ.ವಿ.ಜಿ ಅವರ 'ನಿವೇದನ' (೧೯೨೪), ಗೋವಿಂದ ಪೈ ಅವರ 'ಗಿಳಿವಿಂಡು'(೧೯೩೦), ವೀ.ಸೀ ಅವರ 'ಗೀತಗಳು' (೧೯೨೧) ಪ್ರಕಟವಾಗಿದ್ದವು. ಹೀಗೆ ಹದಗೊಂಡ ಕನ್ನಡ ಕಾವ್ಯ ಸಂದರ್ಭದಲ್ಲಿ ಕೆ.ಎಸ್.ನ. ಕಾವ್ಯ ಕ್ಷೇತ್ರವನ್ನು ಪ್ರವೇಶಿಸಿದರು.

ಕೆ.ಎಸ್.ನ. ಅವರ ಮೊದಲ ಪ್ರಕಟಿತ ಕನ್ನಡ ಕವಿತೆ 'ಕಬ್ಬಿಗನ ಕೂಗು' ಇದು ೧೪ ಜನವರಿ ೧೯೩೩ರ 'ಪ್ರಬುದ್ಧ ಕರ್ನಾಟಕ' ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು. ಈ ಕವಿತೆ ಅವರ ಮೊದಲ ಸಂಗ್ರಹ 'ಮೈಸೂರ ಮಲ್ಲಿಗೆ' ಯಲ್ಲಿ ಸೇರಿಲ್ಲ. ಇತ್ತೀಚಿನ 'ನವಪಲ್ಲವ' (೧೯೮೩) ಸಂಕಲನದಲ್ಲಿ ಸೇರಿದೆ.

ಅನಂತರ ಮಧ್ಯಮ ವರ್ಗದ ತರುಣ-ತರುಣಿಯರ ನವಿರು ಪ್ರೇಮವನ್ನು ಅಭಿವ್ಯಕ್ತಿಗೊಳಿಸುವ ತೀ.ನಂ.ಶ್ರೀ ಅವರ 'ಒಲುಮೆ' ೧೯೩೧ ರಲ್ಲಿ ಪ್ರಕಟವಾಯಿತು. ಆ ಮಾದರಿಯಲ್ಲೆ ಬರೆದ ಕೆ.ಎಸ್.ನ ಅವರ 'ಮೈಸೂರ ಮಲ್ಲಿಗೆ' ೧೯೪೨ ರಲ್ಲಿ ಪ್ರಕಟವಾಯಿತು. ಆನಂತರದ ಆರು ದಶಕಗಳಲ್ಲಿ ಕೆ.ಎಸ್.ನ. ಒಟ್ಟು ಹದಿನಾರು ಕವನ ಸಂಕಲನಗಳನ್ನು ಹೊರತಂದರು.

ಒಟ್ಟಾರೆಯಾಗಿ ನೋಡಿದಾಗ ಅವರ ಕಾವ್ಯದಲ್ಲಿ ಸುಲಭವಾಗಿ ಹಾಗೂ ಕಾಲಾನುಕ್ರಮವಾಗಿ ಮೂರು ಘಟ್ಟಗಳನ್ನು ಗುರುತಿಸಬುಹುದು.

೧) **೧೯೪೨-೧೯೫೮:-** ದಾಂಪತ್ಯ, ಪ್ರಕೃತಿಯ ಚೆಲುವು, ತಾರುಣ್ಯದ ಸೊಗಸು-ಇವುಗಳನ್ನು ವಸ್ತುವಾಗುಳ್ಳ, ಗೇಯತೆಯೇ ಪ್ರಧಾನ ಗುಣವಾಗಿರುವ ಸರಳ 'ರಮ್ಯ ಕಾವ್ಯ' ಅಥವಾ 'ನವೋದಯ ಕಾವ್ಯ'. ಈ ಘಟ್ಟದಲ್ಲಿ ಸ್ಥೂಲವಾಗಿ ಅವರ ಮೊದಲ ಐದು ಕವನ ಸಂಕಲನಗಳು ಬರುತ್ತವೆ.

(ಮೈಸೂರ ಮಲ್ಲಿಗೆ, ಐರಾವತ, ದೀಪದ ಮಲ್ಲಿ, ಉಂಗುರ, ಇರುವಂತಿಗೆ)

೨) ೧೯೫೮-೧೯೬೩:- ಹುಟ್ಟು-ಸಾವು, ಕಾಲ, ದೇವರು ಇತ್ಯಾದಿ ಕಾಲದೇಶ ಬದ್ಧವಲ್ಲದ ಅಮೂರ್ತ ವಿಷಯ ಇತ್ಯಾದಿಗಳನ್ನು ವಸ್ತುವಾಗುಳ್ಳ, ಪ್ರತಿಮಾ ಬದ್ಧ ಹಾಗೂ ಕ್ಲಿಷ್ಟ 'ನವ್ಯ ಕಾವ್ಯ' ಘಟ್ಟದಲ್ಲಿ 'ಶಿಲಾಲತೆ, 'ಮನೆಯಿಂದ ಮನೆಗೆ' ಮತ್ತು 'ತೆರೆದ ಬಾಗಿಲು' ಸಂಕಲನಗಳು ಬರುತ್ತವೆ.

೩) ೧೯೬೩-೨೦೦೩:- ಈ ಘಟ್ಟದ ಕವನಗಳಲ್ಲಿ ಕವಿ ತಮ್ಮ ಎರಡನೆಯ ಘಟ್ಟದ ಉಗ್ರ ಪ್ರತಿಮಾಬದ್ಧತೆಯನ್ನು ತ್ಯಜಿಸಿ ತಮ್ಮ ಪ್ರಾರಂಭಿಕ ಕಾವ್ಯ ಸ್ವರೂಪಕ್ಕೆ ಮರಳಿದಂತೆ ತೋರುತ್ತಾರೆ.

ಆದರೆ ಇದು ಅರ್ಧ ಸತ್ಯಮಾತ್ರ, ಪುನರಾವರ್ತಿತ ಆಶಯಗಳ ನೆಲೆಗಳಲ್ಲಿಯೂ ಕವಿ ತಮ್ಮ ಹಿಂದಿನ ಸರಳ 'ಕಪ್ಪು-ಬಿಳುಪು' ದೃಷ್ಟಿಯನ್ನು ಮೀರಿ, ಮಾನವ ಸಂಬಂಧಗಳನ್ನು ಕುರಿತು ಪ್ರಬುದ್ಧವಾಗಿ ಚಿಂತಿಸಿರುವುದು ಕಂಡುಬರುತ್ತದೆ.

ಈ ಘಟ್ಟದ ಕವನ ಸಂಕಲನಗಳೆಂದರೆ ನವಪಲ್ಲವ, ದುಂಡು ಮಲ್ಲಿಗೆ, ನವಿಲ ದನಿ, ಸಂಜೆ ಹಾಡು, ಕೈಮರದ ನೆಳಲಲ್ಲಿ, ಎದೆತುಂಬ ನಕ್ಷತ್ರ, ಮೌನದಲಿ ಮಾತ ಹುಡುಕುತ ಮತ್ತು ದೀಪ ಸಾಲಿನ ನಡುವೆ.

ಈ ಬಗೆಯ ವರ್ಗೀಕರಣ ನಮಗೆ ಏನನ್ನು ದರ್ಶಿಸುತ್ತದೆಂದರೆ ಕವಿಯಾಗಿ ಕೆ.ಎಸ್.ನ.

ಅ) ಕುಟುಂಬ ಕೇಂದ್ರಿತ ಕಾವ್ಯದಿಂದ ಪ್ರಾರಂಭಿಸಿ ನಿಧಾನವಾಗಿ ಊರು, ಸಮುದಾಯ, ದೇಶ ಹಾಗೂ ವಿಶ್ವ ಹೀಗೆ ತಮ್ಮ ಕಾವ್ಯ ಪರಿಧಿಯನ್ನು ವಿಸ್ತರಿಸುತ್ತಾ ಹೋದರು. ಕೊನೆಗೆ ದೇವರು ಮತ್ತು ಮರ್ತ್ಯಲೋಕದ ಸಂಬಂಧವನ್ನು ಮೂರ್ತರೂಪದಲ್ಲಿ ಗುರುತಿಸಲು 'ತಂದೆ-ತಾಯಿ-ಮಗ' ಎಂಬ ಕುಟುಂಬದ ಚೌಕಟ್ಟನ್ನೇ ಬಳಸಿದರು.

ಆ) ಮೂರ್ತವಸ್ತು :-ವಿವರಗಳಿಂದ ಪ್ರಾರಂಭಿಸಿ, ಅನಂತರ ಅಮೂರ್ತ ವಿಚಾರಗಳತ್ತ ಲಕ್ಷ್ಯವನ್ನು ಹರಿಸಿ ಕೊನೆಗೆ ಇವೆರಡು ಲಕ್ಷಣಗಳನ್ನೂ ಬೆಸೆಯುವತ್ತ ಆಸಕ್ತರಾದರು. ಅವರೇ ಒಂದು ಸಂದರ್ಭದಲ್ಲಿ ಹೇಳಿರುವಂತೆ 'ಶಿಲಾಲತೆಯಲ್ಲಿ' ಅಲಂಕಾರ, ರೂಪಕಗಳನ್ನು ಕಟ್ಟಿಕೊಂಡು ಕುಣಿದಿದ್ದು ಸಾಕು. ಅದನ್ನು ಬಿಟ್ಟು ಬೇರೆ ಬರೆಯೋಣ ಅಂತ ಯೋಚನೆ ಮಾಡಿದೆ. ಸರಳತೆಯನ್ನಿಟ್ಟುಕೊಂಡು ಸಂಕೀರ್ಣವಾದುದನ್ನು ಹೇಳೋದು ಹೇಗೆ ಅಂತ ಯೋಚನೆ ಮಾಡ್ತಾನೆ ಹದಿನಾರು ವರ್ಷ

ಕಳೀತು" ಎಂದಿದ್ದಾರೆ. ಈ ಬಗೆಯ ವರ್ಗೀಕರಣವು ಸಾಧುವಾದರೂ ಅದಕ್ಕೆ ಅನೇಕ ತಿದ್ದುಪಡಿಗಳ ಆವಶ್ಯಕತೆಯಿದೆ.

ಅ) ಸುಮಾರು ಆರು ದಶಕಗಳ ತಮ್ಮ ಕಾವ್ಯ ಜೀವನದಲ್ಲಿ ಕೆ.ಎಸ್.ನ. ಬೆಳೆಯುತ್ತಾ ಬದಲಾಗುತ್ತಾ ಹೋದರು. ಕಳೆದ ಶತಮಾನದಲ್ಲಿ ಕನ್ನಡ ವಾಙ್ಮಯ ಲೋಕದಲ್ಲಿ ಕಾಲಕಾಲಕ್ಕೆ ಪ್ರಭಾವಿಯಾಗಿ ಮೂಡಿ ಬಂದ ಪ್ರಗತಿಶೀಲ, ನವ್ಯ, ಬಂಡಾಯ ಇತ್ಯಾದಿ ಎಲ್ಲಾ ಚಳುವಳಿಗಳಿಗೂ ಕೆ.ಎಸ್.ನ. ತಮ್ಮನ್ನು ಮುಕ್ತವಾಗಿ ತೆರೆದುಕೊಂಡಿದ್ದರು. ಆದರೆ ಯಾವ ಚಳುವಳಿಯೊಡನೆಯೂ ತಮ್ಮನ್ನು ಸಂಪೂರ್ಣವಾಗಿ ಗುರುತಿಸಿಕೊಳ್ಳಲಿಲ್ಲ. ಅವರ ಎರಡನೆಯ ಸಂಕಲನ ಐರಾವತದಲ್ಲಿಯೂ ಪ್ರಗತಿಶೀಲವೆನ್ನಬಹುದಾದ "ಕಾವಲುಗಾರ" ಕವನವಿದೆ. ಹಾಗೆಯೇ ಅವರ ಅತಿ 'ನವ್ಯ' ಶಿಲಾಲತೆಯಲ್ಲಿಯೂ ರಮ್ಯ-ಪ್ರೇಮ ಕವನಗಳಿವೆ.

ಆ) ಕೆ.ಎಸ್.ನ ಸದಾ ಪ್ರಯೋಗಶೀಲರಾಗಿ, ನೂತನ ಅಭಿವ್ಯಕ್ತಿ ಪ್ರಕಾರಗಳನ್ನು ಅರಸುತ್ತಲೇ ಇದ್ದ ಕವಿ. ಸರಿಸುಮಾರು ಅವರ ಪ್ರತಿಯೊಂದು ಕವನ ಸಂಕಲನವೂ ಹಿಂದಿನ ಸಂಕಲನಕ್ಕಿಂತ ಅಭಿವ್ಯಕ್ತಿ ಪ್ರಕಾರದಲ್ಲಿ ಭಿನ್ನವಾಗಿದೆ. ಕೆಲವು ಸಂಕಲನಗಳಲ್ಲಿ ಹಾಡುಗಳು ಪ್ರಧಾನವಾಗಿದ್ದರೆ, ಮತ್ತೆ ಕೆಲವು ಸಂಕಲನಗಳಲ್ಲಿ ಗೀತೆಗಳು: ಕೆಲವದರಲ್ಲಿ ಪ್ರತಿಮೆಗಳು ಒತ್ತಾಗಿ ಬಂದರೆ ಮತ್ತೆ ಕೆಲವದರ ಉಪಮೆ ರೂಪಕಗಳು. ಈ ನೆಲೆಯಲ್ಲಿ ಅವರ ಎಂಟನೆಯ ಸಂಕಲನ 'ತೆರೆದ ಬಾಗಿಲು' ಮತ್ತು ಹದಿಮೂರನೇಯ ಸಂಕಲನ "ಕೈಮರದ ನೆಳಲಲ್ಲಿ" ಗಮನೀಯವಾಗಿ ಕವಿಯ ನಿರಂತರ ಪ್ರಯೋಗಶೀಲತೆಯನ್ನು ದರ್ಶಿಸುತ್ತದೆ.

'ತೆರೆದ ಬಾಗಿಲು' ಸಂಕಲನದಲ್ಲಿ ಒಟ್ಟು ೧೬ ಕವನಗಳಿವೆ ಮತ್ತು ಇವುಗಳಲ್ಲಿ ಹತ್ತು 'ನಾಟಕೀಯ ಸ್ವಗತ'ಗಳು (ಅಥವಾ 'ಡ್ರಮಾಟಿಕ್ ಮಾನಲೋಗ್'ಗಳು) ಇವೆ. ಈ ನಾಟಕೀಯ ಸ್ವಗತಗಳ ನಿರೂಪಕರೂ ಒಬ್ಬರಿಗಿಂತ ಮತ್ತೊಬ್ಬರು ಭಿನ್ನ. "ತೆರೆದ ಬಾಗಿಲು" ಕವನದ ನಿರೂಪಕ ಹೆಂಡತಿಯು ತೌರಿಗೆ ಹೋಗಿರುವ ಗಂಡ ಮತ್ತು ಅವನ ಕೇಳುಗ ಹೆಂಡತಿಯ ಊರಿನ ಪರಿಚಿತನೊಬ್ಬ "ಅನುಮಾನ" ಕವನದ ನಿರೂಪಕ ಸಾಧಾರಣ ಗೃಹಸ್ಥ ಮತ್ತು ಅವನ ಕೇಳುಗ ಅವನ ಚಪ್ಪಲಿಯನ್ನು ಕದ್ದಿರಬಹುದಾದ ಕಳ್ಳ, "ಸಂಧ್ಯಾರಾಗ"ದ ನಿರೂಪಕ ನಿವೃತ್ತಿ ಹೊಂದಿದ ಉಚ್ಚ ಅಧಿಕಾರಿ ಮತ್ತು ಅವನ ಕೇಳುಗಳು ಅವನ ಪತ್ನಿ ಇತ್ಯಾದಿ. ಭಾಷಾ ಸ್ತರವೂ ದೈನಂದಿನ ಆಡು ಮಾತಿನ ಸಂಭಾಷಣೆಯ ಗತಿಯನ್ನೇ ದರ್ಶಿಸುತ್ತದೆ.

'ಕೈಮರದ ನೆಳಲಲ್ಲಿ' ಸಂಕಲನದಲ್ಲಿ ಅದೇ ಹೆಸರಿನ (ಮಾಸ್ತಿಯವರ ನವರಾತ್ರಿ ಕಥಾಗುಚ್ಛವನ್ನು ನೆನಪಿಗೆ ತರುವ) ಹತ್ತು ಕಥೆಗಳಿರುವ ದೀರ್ಘ ಕಥಾಗುಚ್ಛವಿದೆ. ಈ ಕಥೆಗಳ ನಿರೂಪಕರೆಲ್ಲರೂ ಪರಸ್ಪರ ಅಪರಿಚಿತರು ಮತ್ತು ಅವರು ಕೈಮರದ ಬಳಿ ಸಂಧಿಸಿ, ತಮ್ಮ ಅಥವಾ ತಮಗೆ ಗೊತ್ತಿರುವ ಇತರರ ಕಥೆಗಳನ್ನು ಹೇಳುತ್ತಾರೆ. ಈ ಕಥೆಗಳೆಲ್ಲವೂ ಬದುಕಿನ ಅತಾರ್ಕಿಕ ನೋವಿನ ಹಾಗೂ ಬದುಕಿನಲ್ಲಿ ಸಂಭವಿಸುವ ಆಕಸ್ಮಿಕಗಳ ಕಥನಗಳಾಗಿವೆ.

ಇ) ಕೊನೆಯದಾಗಿ ಕಾಲಾನುಸಾರಿ ವರ್ಗೀಕರಣ ಕವಿಯ ವಿಶ್ವ ದೃಷ್ಟಿಯನ್ನು ಮುಸುಕಾಗಿಸುತ್ತದೆ. ಒಂದು ನೆಲೆಯಲ್ಲಿ ಕೆ.ಎಸ್.ನ ಸದಾ ಹೊಸ ವಿಚಾರಗಳಿಗೆ ತಮ್ಮನ್ನು ತೆರೆದುಕೊಂಡು ಸಂಕಲನದಿಂದ ಸಂಕಲನಕ್ಕೆ ಬೆಳೆಯುತ್ತಾ ಹೋದ ಕವಿ. ಇನ್ನೊಂದು ನೆಲೆಯಲ್ಲಿ ಕಾಲಕಾಲಕ್ಕೆ ಅಭಿವ್ಯಕ್ತಿ ನಿಲುವುಗಳಿಗೆ ಯಾವಾಗಲು ಬದ್ಧರಾಗಿದ್ದ ಕವಿ ಎನ್ನಬಹುದು.

೪.೨. ದಾಂಪತ್ಯ ಪ್ರೇಮ

ಕೆ.ಎಸ್.ನರಸಿಂಹಸ್ವಾಮಿಯವರ ಮೊದಲ ಸಂಕಲನ 'ಮೈಸೂರ ಮಲ್ಲಿಗೆ' ಪ್ರಕಟವಾದದ್ದು ೧೯೪೨ರಲ್ಲಿ. ೨೪ ಕ್ಕೂ ಹೆಚ್ಚಿನ ಮರುಮುದ್ರಣವನ್ನು ಕಂಡಿದೆ. ಕನ್ನಡದ ಮತ್ತೆ ಯಾವ ಕವನ ಸಂಕಲನವೂ ಇಷ್ಟೊಂದು ಮರು ಮುದ್ರಣವನ್ನು ಕಂಡಿಲ್ಲ. ಕನ್ನಡದಲ್ಲಿ ಇದೊಂದು ದಾಖಲೆಯನ್ನಬಹುದು. ಕನ್ನಡ ಜನತೆ 'ಮೈಸೂರ ಮಲ್ಲಿಗೆ'ಯನ್ನು ಪ್ರೀತಿಯಿಂದ ಓದಿದ್ದಾರೆ, ಓದಿ ಸಂತೋಷಪಟ್ಟಿದ್ದಾರೆ. ಇಲ್ಲಿಯ ಕವಿತೆಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ರೂಢಿ ಮಾತುಗಳಲ್ಲಿ ಹೇಳುವುದಾದರೆ 'ಮೈಸೂರ ಮಲ್ಲಿಗೆ' ಕೆ.ಎಸ್.ನ ಅವರಿಗೆ ಬೆಳಗಾಗುವುದರಲ್ಲಿ ಪ್ರಸಿದ್ಧಿಯನ್ನು ತಂದು ಕೊಟ್ಟ ಕವನ ಸಂಕಲನ. "ಯಾವ ಕವಿತೆಗಳ ಮೂಲಕ ಜನ ತಮ್ಮ ಭಾವನೆಗಳನ್ನು ಹೇಳಲು ತೊಡಗುತ್ತಾರೋ ಅಂಥ ಕವಿತೆ ಬರೆದವನೇ ನಿಜವಾದ ಕವಿ. ನರಸಿಂಹಸ್ವಾಮಿ ತಮ್ಮ ಮೊದಲ ಸಂಕಲನವಾದ 'ಮೈಸೂರ ಮಲ್ಲಿಗೆ'ಯಲ್ಲೇ ಇದನ್ನು ಸಾಧಿಸಿಬಿಟ್ಟರು. ನಾಡಿನ ಅಂತಃಕರಣವನ್ನು ಅವರಂತೆ ಆರಂಭದಲ್ಲೇ ಸೂರೆಗೊಂಡ ಕವಿ ಯಾರಿದ್ದಾರೆ? ಜೀವ ಜಾಲಕ್ಕೆಲ್ಲ ಮರುಳು ಕವಿಸುವ ಪ್ರೀತಿಯ ಮಾಯೆಯೇ ವಸ್ತುವಾಗಿ ಅವರ ಕಾವ್ಯ ಹುಟ್ಟಿ ಬಂತು. ನವ ದಂಪತಿಗಳ ಪಿಸುಮಾತಿನಷ್ಟು ಸವಿಯಾದ ಅವರ 'ಮೈಸೂರ ಮಲ್ಲಿಗೆ'ಯನ್ನು ನಾಡಿಗೆ ನಾಡೇ ಸಡಗರದಿಂದ ಮುಡಿಗಿಟ್ಟುಕೊಂಡಿತ್ತು. 'ಮೈಸೂರ ಮಲ್ಲಿಗೆ' ಸಂಕಲನದಲ್ಲಿ ೪೫ ಕವಿತೆಗಳಿವೆ. ಇವೆಲ್ಲವನ್ನೂ ಕೆ.ಎಸ್.ನ ಅವರು ಬರೆದದ್ದು ೧೯೩೬-೧೯೪೨ರ ಅವಧಿಯಲ್ಲಿ ಪ್ರೇಮ ಗೀತೆಗಳ ಸಂಕಲನವೆಂದು ಪ್ರಸಿದ್ಧವಾಗಿರುವ 'ಮೈಸೂರ ಮಲ್ಲಿಗೆ' ಕವಿತೆಗಳನ್ನು ಕವಿ 'ದಾಂಪತ್ಯಗೀತೆ'ಗಳೆಂದು ಕರೆಯುತ್ತಾರೆ. ಈ ಸಂಕಲನದ ಮೂಲಕ ಅವರು 'ಪ್ರೇಮಕವಿ'ಎಂದು ಖ್ಯಾತರಾದರು.

ಕೆ.ಎಸ್.ನ ಅವರೆ ಹೇಳಿರುವಂತೆ "ನನ್ನ ಮದುವೆ ನಡೆದದ್ದು ೧೯೩೬ರಲ್ಲಿ. ಅದರ ಪೂರ್ವಾರ್ಧದಲ್ಲಿ 'ಮೈಸೂರ ಮಲ್ಲಿಗೆ' ಬಿಡುಗಡೆಯಾದದ್ದು ೧೯೪೨ರ ಜನವರಿ ತಿಂಗಳಲ್ಲಿ ನಡುವಣ ಆರು ವರ್ಷಗಳಲ್ಲಿ ನಾನು ಸುಮಾರು ಅರವತ್ತು ಕವನಗಳನ್ನು ಬರೆದಿದ್ದೆ. ಈ ಪದ್ಯಗಳನ್ನು ಬರೆದದ್ದು ನಾನು ಮಾವನ ಮನೆಯಲ್ಲಿದ್ದಾಗ ಮತ್ತು ಮೈಸೂರು ಪುರಸಭಾ ಕಛೇರಿಯಲ್ಲಿ ೨೫ರೂ ಸಂಬಳದ ಗುಮಾಸ್ತನಾಗಿದ್ದಾಗ. ಇವುಗಳನ್ನು ಪ್ರೇಮಗೀತೆ ಅನ್ನುವುದಕ್ಕಿಂತ ದಾಂಪತ್ಯ ಗೀತೆ ಎನ್ನುವುದು ಹೆಚ್ಚು ಸೂಕ್ತ ಎಂದಿದ್ದಾರ"[೨]. ಮದುವೆಗೆ ಮುನ್ನ ಕೆ.ಎಸ್.ನ ಪ್ರೇಮ ಕವಿತೆಗಳನ್ನು ಬರೆದಿಲ್ಲವೆಂದು ಅವರೇ

ಹೇಳಿದ್ದಾರೆ. ಕೆಲವು ಪ್ರಕೃತಿ ಗೀತೆಗಳನ್ನು ಬರೆದಿದ್ದರಂತೆ. 'ನವಿಲೂರಿನೊಳಗೆಲ್ಲ ನೀನೆ ಬಲು ಚೆಲುವೆ – ಅವರು ಬರೆದ ಮೊದಲ ಪ್ರೇಮ ಕವಿತೆ.

ಶಿರಸ್ತೇದಾರರಾಗಿದ್ದ ಅವರ ಮಾವ ತಿಪಟೂರು, ಚಿತ್ರದುರ್ಗ, ಅರಸೀಕೆರೆಗಳಲ್ಲಿದ್ದರು. ಇಲ್ಲಿನ ಕೆಲವು ಕವನಗಳಿಗೆ ಆ ಹಿನ್ನೆಲೆಯಿದೆ.

ಗಂಡು ಹೆಣ್ಣಿನ ಸಂಬಂಧವನ್ನು ದಾಂಪತ್ಯದ ಚೌಕಟ್ಟಿನಲ್ಲಿಯೇ ಇಟ್ಟು ನೋಡುವುದು ನವೋದಯ ಕಾಲದ ಸಾಮಾಜಿಕ ಮೌಲ್ಯವಾಗಿತ್ತು. ದಾಂಪತ್ಯದಾಚೆಗಿನ ಸಂಬಂಧವನ್ನು ಗೌರವದಿಂದ ಕಾಣುವುದಾಗಲೀ, ಗಂಡು ಹೆಣ್ಣಿನ ಸಂಬಂಧವನ್ನು ಸಾಮಾಜಿಕ ಹಂಗಿಲ್ಲದೆ ಕೇವಲ ಗಂಡು ಹೆಣ್ಣಿನ ಸಂಬಂಧ ಮಾತ್ರವಾಗಿಯೇ ನೋಡುವುದಾಗಲೀ ಆಗ ಸಾಧ್ಯವಿರಲಿಲ್ಲ. ಹೆಣ್ಣನ್ನು ಹೆಂಡತಿಯ ಸ್ಥಾನದಲ್ಲಿಟ್ಟು ಒಪ್ಪಿಕೊಳ್ಳುವುದು ಆಗಿನ ರೀತಿ. ಹೀಗಾಗಿ 'ಮೈಸೂರ ಮಲ್ಲಿಗೆ'ಯ ಪ್ರೇಮ ಕವಿತೆಗಳು ದಾಂಪತ್ಯದ ಪ್ರಣಯ ಕವಿತೆಗಳಾಗಿಯೇ ರೂಪುಗೊಂಡಿರುವುದು ಸಹಜವಾಗಿದೆ. ಈ ಕವಿತೆಗಳ ಜನಪ್ರಿಯತೆಗೆ ಇದೂ ಒಂದು ಮುಖ್ಯ ಕಾರಣವಾಗಿದೆಯೆನ್ನಬಹುದು. ಏಕೆಂದರೆ ಸಾಮಾಜಿಕವಾಗಿ ಸ್ವೀಕೃತವಾದ ಮೌಲ್ಯಗಳು ಇಲ್ಲಿ ಪ್ರತಿಪಾದಿತವಾಗಿರುವುದರಿಂದ ಸಹಜವಾಗಿಯೇ ಜನತೆ ಯಾವ ವಿರೋಧವೂ ಇಲ್ಲದೆ ಇದನ್ನು ಸ್ವೀಕರಿಸುವುದು ಸುಲಭಬಾಗುತ್ತದೆ. ಶಿಷ್ಟಾಚಾರದ ಚೌಕಟ್ಟಿನಲ್ಲಿಯೇ ಶೃಂಗಾರ ಅಭಿವ್ಯಕ್ತವಾಗಿರುವುದರಿಂದ ಪ್ರವೃತ್ತಿ ಹಾಗೂ ಸಂಸ್ಕೃತಿ ಎರಡೂ ನೆಲೆಯಲ್ಲಿ ಇದು ಪ್ರಿಯವಾಗುವುದು ಸಾಧ್ಯವಾಗಿದೆ. 'ರಾಯರು ಬಂದರು ಮಾವನ ಮನೆಗೆ'ಯಂತ ಕವಿತೆಯ ಶಕ್ತಿ ಇರುವುದೇ ಈ ಹೊಂದಾಣಿಕೆಯಲ್ಲಿ. ಇದನ್ನು ಮುಂದೆ ವಿವರವಾಗಿ ಚರ್ಚಿಸಲಾಗುತ್ತದೆ. ಬೇಂದ್ರೆಯವರ ಒಂದೆರಡು ಕವಿತೆಗಳು, ವೀ.ಸೀ ಅವರ ಕೆಲವು ಕವಿತೆಗಳು ದಾಂಪತ್ಯದಾಚೆಗಿನ ಗಂಡು – ಹೆಣ್ಣಿನ ಸಂಬಂಧವನ್ನು ಚಿತ್ರಿಸಿದೆಯೆಂಬುದನ್ನು ಬಿಟ್ಟರೆ ನವೋದಯ ಕಾವ್ಯ ಸಂದರ್ಭದಲ್ಲಿ ಬೇರೆ ನಿದರ್ಶನಗಳು ಸಿಗುವುದು ಕಷ್ಟ.

ಕನ್ನಡ ಸಾಹಿತ್ಯದಲ್ಲಿ ಶೃಂಗಾರದ ವರ್ಣನೆ ಸಾಕಷ್ಟು ಬಂದಿದ್ದರೂ, ಅದು ಬಹುಪಾಲು ಹೆಣ್ಣಿನ ವರ್ಣನೆಯೇ ಚಿತ್ರಿತವಾಗಿದೆ. ಹೆಣ್ಣು ಗಂಡಿನ ಪ್ರಣಯದ ಸೂಕ್ಷ್ಮತೆ, ನವಿರು, ಆತಂಕ, ಸಂಭ್ರಮ – ಇವುಗಳ ಸೊಗಸಾದ ಅಭಿವ್ಯಕ್ತಿ ಇಲ್ಲವೆಂದಲ್ಲ. ತುಂಬ ಕಡಿಮೆ ಎನ್ನಬಹುದು. ನಾಗವರ್ಮನ 'ಕರ್ನಾಟಕ ಕಾದಂಬರಿ'ಯಲ್ಲಿ ಬರುವ ಪುಂಡರೀಕ–ಮಾಹಾಶ್ವೇತೆಯರ ಪ್ರಥಮ ಭೇಟಿಯ ಸಂದರ್ಭದ ಚಿತ್ರಣವನ್ನು ನಾವಿಲ್ಲಿ ನೆನಪಿಸಿಕೊಳ್ಳಬೇಕು. ಶೃಂಗಾರದ ಶಿಷ್ಟ ಅಭಿವ್ಯಕ್ತಿಯ ಅತ್ಯುತ್ಕೃಷ್ಟ ಚಿತ್ರಣ ಅಲ್ಲಿದೆ.

ಸರಸ ದಾಂಪತ್ಯದ ಪರಿಕಲ್ಪನೆ ಕನ್ನಡ ಸಾಹಿತ್ಯದಲ್ಲಿ ನಮಗೆ ಮೊದಲು ಕಾಣಿಸುವುದು ಮುದ್ದಣನಲ್ಲಿ. 'ರಾಮಾಶ್ವಮೇಧ'ದುದ್ದಕ್ಕೂ ಕಾವ್ಯದ ಒಳ ಹೆಣಿಗೆಯಲ್ಲಿ ಒಂದಾಗಿ ಬೆಳೆದು ಬರುವ ಮುದ್ದಣ ಮನೋರಮೆಯರ ಸಲ್ಲಾಪ ಅತ್ಯಂತ ಆಕರ್ಷಕವಾದುದ್ದು.

ಇಂದಿಗೂ ಮುದ್ದಣ ಮನೋರಮೆಯರ ಸಲ್ಲಾಪ ಅತ್ಯಂತ ಆಕರ್ಷಕವಾದುದು. ಇಂದಿಗೂ ಮುದ್ದಣ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾಗಿರುವುದು ಆತ ಸೃಷ್ಟಿಸಿದ ಈ ಪಾತ್ರಗಳಿಂದ, ಹಳೆಯ ಕತೆಗೆ ಒದಗಿಸಿದ ಈ ಹೊಸ ಚೌಕಟ್ಟಿನಿಂದ ಎನ್ನಬಹುದು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಿ.ಎಂ.ಶ್ರೀ ಯವರ 'ಇಂಗ್ಲೀಷ್ ಗೀತೆಗಳು' ಕವನ ಸಂಕಲನದಲ್ಲಿ ಇಂಗ್ಲೀಷ್ ಕವಿಗಳು ಹೇಗೆ ಶೃಂಗಾರ ರಸವನ್ನು ಗಂಭೀರವಾಗಿಯೂ, ಸೂಕ್ಷ್ಮವಾಗಿಯೂ, ಸ್ವಾಭಾವಿಕವಾಗಿಯೂ ತೋರಿಸಿರುವರೆಂಬುದನ್ನು ತಿಳಿಸುವುದಕ್ಕಾಗಿ ಆ ಬಗೆಯ ಗೀತೆಗಳನ್ನು ಹೆಚ್ಚಾಗಿ ಆರಿಸಿಕೊಂಡಿದ್ದಾರೆ. ಪ್ರಣಯವನ್ನೇ ವಸ್ತುವನ್ನಾಗಿ ಮಾಡಿಕೊಂಡು ಕವಿತೆಗಳನ್ನು ಬರೆದು ಸಂಕಲನ ಪ್ರಕಟಿಸಿದವರೆಂದರೆ ತೀ.ನಂ.ಶ್ರೀ. ಅವರ 'ಒಲುಮೆ'(೧೯೩೨) ಕನ್ನಡದಲ್ಲಿ ಬಂದ ಪ್ರೇಮ ಕವಿತೆಗಳ ಮೊದಲ ಸಂಕಲನವಾಗಿದೆ.

ಸಂಸ್ಕೃತ ಕಾವ್ಯದಿಂದ ಮುಖ್ಯವಾಗಿ ಅಮರುಕ, ಗಾಥಾಸಪ್ತಶತಿಯಿಂದ ಹಾಗೂ ಇಂಗ್ಲೀಷ್ ಕಾವ್ಯದಿಂದ ಪ್ರೇರಣೆ ಪಡೆದ ತೀ.ನಂ.ಶ್ರೀ ಕನ್ನಡದಲ್ಲಿ ಮೊದಲ ಬಾರಿಗೆ ಶೃಂಗಾರವನ್ನು ಸದಭಿರುಚಿ ಹಾಗೂ ಸಂಯಮದಿಂದ ಚಿತ್ರಿಸಿದ್ದಾರೆ. ಗಂಡು ಹೆಣ್ಣಿನ ಪ್ರೀತಿ ಎಲ್ಲರ ಅನುಭವವೇ ಆದರೂ, ಅದು ತೀರಾ ಖಾಸಗಿಯಾದದ್ದು. ಹೀಗಾಗಿ ಗಂಡು ಹೆಣ್ಣಿನ ಸರಸವನ್ನು ಅಭಿವ್ಯಕ್ತಿಸುವುದು ಆ ಕಾಲಕ್ಕೆ ಸಾಹಸದ ಮಾತೇ ಸರಿ. ಪ್ರೇಮ ಕವನಗಳನ್ನು ಬರೆದರೆ ಯಾರು ಏನು ಅಂದುಕೊಂಡು ಬಿಡುತ್ತಾರೋ ಎಂಬ ಸಂಕೋಚವಿದ್ದ ಕಾಲವದು. ತೀ.ನಂ.ಶ್ರೀ ಅವರೇ 'ಒಲುಮೆ'ಯ ಅರಿಕೆಯಲ್ಲಿ ಈ ಬಗ್ಗೆ ಹೇಳಿದ್ದಾರೆ. "ಪ್ರೇಮ ಗೀತೆಗಳನ್ನು ಬರೆಯುವುದೂ, ಬರೆದ ಮೇಲೆ ಬೆಳಕಿಗೆ ತರುವುದೂ – ಎರಡೂ ಸಾಹಸ ಕಾರ್ಯಗಳೇ. ಈ ಬಗೆಯ ಕವನಗಳಲ್ಲಿ ಔಚಿತ್ಯದ ಹದ ಎಲ್ಲೆ ಮೀರುತ್ತದೆ ರಸ ಎಲ್ಲಿ ಹದಗೆಟ್ಟು ಹಾಸ್ಯಕರವಾಗುತ್ತದೋ ಎಂದು ಅರಿಯುವುದು ಲೇಖಕನಿಗಂತೂ ಬಲುಕಷ್ಟ. ಆದರೂ ಭಾವವು ಪ್ರೇರೇಪಿಸಿದಾಗ ಈ ವಿಚಾರಕ್ಕೆ ಅಷ್ಟು ಮನಸ್ಸು ಕೊಡದೆ, ನಾಲ್ಕು ಚರಣಗಳನ್ನು ಆಗಾಗ ಕೂಡಿಸಿದ್ದಾಯಿತು. ಅವುಗಳನ್ನು ಪ್ರಕಟಿಸುವುದಕ್ಕೆ ಮಾತ್ರ ನನ್ನ ಆಪ್ತಮಿತ್ರರು ಕೆಲವರ ಒಪ್ಪಿಗೆಯೂ, ಉತ್ತೇಜನವೂ ದೊರೆಯದಿದ್ದರೆ ಧೈರ್ಯ ಬರುತ್ತಿರಲಿಲ್ಲ. ಈಗ ಕೂಡ ಈ ಚಿಕ್ಕ ಗೀತಾವಳಿಯನ್ನು ಸ್ವಲ್ಪ

ಅಳುಕಿನಿಂದಲೇ ಸಹೃದಯರ ಮುಂದೆ ಇರಿಸಿದ್ದೇನೆ". ತೀ.ನಂ.ಶ್ರೀ ಅವರ ಮಾತುಗಳು ಆಗಿನ ಕಾಲಕ್ಕೆ ನಮ್ಮ ಸಾಮಾಜಿಕ ಸಂದರ್ಭದಲ್ಲಿ ಪ್ರೇಮಗೀತೆಗಳ ರಚನೆ ಎಷ್ಟು ಕಷ್ಟಕರವಾದ, ಮುಜುಗರದ ಕೆಲಸವಾಗಿತ್ತು ಎಂಬುದನ್ನು ಸೂಚಿಸುತ್ತದೆ. ತೀ.ನಂ.ಶ್ರೀಯವರು ಶೃಂಗಾರವನ್ನು ಶುಚಿಯಾದ ವಾಣಿಯಲ್ಲಿ ರಸಿಕರಿಗೆ ಪ್ರಿಯವಾಗುವಂತೆ ಅಭಿವ್ಯಕ್ತಿಸಿದರು. ಎಲ್ಲರ ಮನಸ್ಸಿನಲ್ಲಿ ಕಾದುಕೂತಿದ್ದ ಪ್ರೀತಿಯ ಬೆಚ್ಚನೆಯ ಭಾವಕ್ಕೆ ಹದವರಿತು ಅಭಿವ್ಯಕ್ತಿ ನೀಡಿ 'ಮಾದರಿ'ಯೊಂದನ್ನು ಕಲ್ಪಿಸಿದರು. ತೀ.ನಂ.ಶ್ರೀ ಅವರು ನೀಡಿದ ಈ ಮಾದರಿ ಮುಂದೆ ಕೆ.ಎಸ್.ನ ಅವರಿಗೆ ಹೆದ್ದಾರಿಯೇ ಆಯಿತು. ಪ್ರೇರಣೆಯ ಜೊತೆಗೆ ಹೆದ್ದಾರಿಯೂ ಆಯಿತು ಎನ್ನಬಹುದು.

ಕೆ.ಎಸ್.ನರಸಿಂಹಸ್ವಾಮಿಯವರ **'ಮೈಸೂರ ಮಲ್ಲಿಗೆ'** ಕವನ ಸಂಕಲನದ **'ಗೃಹಲಕ್ಷ್ಮಿ'** ಕವನದಲ್ಲಿ ತನ್ನ ಮಡದಿಯ ಸೌಂದರ್ಯದ ವರ್ಣನೆಯನ್ನು ಮಾಡಿರುವುದನ್ನು ಕಾಣಬಹುದು.

ನನ್ನವಳು ನನ್ನೆದೆಯ ಹೊನ್ನಾಡನಾಳುವಳು
ಬೆಳಗುಗೆನ್ನೆಯ ಚೆನ್ನೆ ನನ್ನ ಮಡದಿ:
ಹೊಳೆಯ ಸುಳಿಗಳಿಗಿಂತ ಆಳ ಕಣ್ಣಿನ ಚೆಲುವು
ಅವಳೊಮ್ಮೆ ಹೆರಳ ಕೆದರಿ
ಕಪ್ಪುಗುರಳನು ಬೆನ್ನ ಮೇಲೆಲ್ಲ ಹರಡಿದರೆ
ದೂರದಲಿ ಗಿರಿಯ ಮೇಲೆ ಇಳಿದಂತೆ ಇರುಳ ಮಾಲೆ.

ಇಲ್ಲಿ ತನ್ನ ಮಡದಿಯು ತನ್ನ ಹೃದಯವನ್ನು ಆಳುವಂತಹ ರಾಣಿಯಾಗಿದ್ದಾಳೆ. ಬೆಳಗು ಕೆನ್ನೆಯನ್ನು ಹೊಂದಿರುವ ಚೆಲುವೆ ನನ್ನ ಮಡದಿ. ಹೊಳೆಯಲ್ಲಿರುವ ಸುಳಿಗಳು ಆಳವಾಗಿರುವಂತೆ ಅವಳ ಕಣ್ಣಿನ ಚೆಲುವು ಇದೆ. ಅವಳ ಕೂದಲನ್ನು ಬೆನ್ನ ಮೇಲೆ ಹರಡಿದರೆ ಬೆಟ್ಟದ ಮೇಲೆ ಕತ್ತಲು ಕವಿದಂತೆ ಇರುತ್ತದೆ. ಎಂದು ಅವಳ ಸೌಂದರ್ಯವನ್ನು ಗಿರಿ, ಹೊಳೆಯ ಸುಳಿಗೆ ಹೋಲಿಸಿ ಹೇಳುತ್ತಿದ್ದಾರೆ.

ಕರೆದಾಗ ತೌರುಮನೆ, ನೆನೆದಾಗ ನನ್ನ ಮನೆ
ಹಳ್ಳಿಯೆರಡರ ಮುದ್ದುಬಳ್ಳಿಯವಳು,
ಮುಚ್ಚುಮರೆಯಿಲ್ಲದೆಯೆ ಅಚ್ಚುಮಲ್ಲಿಗೆಯಂತೆ
ಅರಳುತಿಹುದವಳ ಬದುಕು,
ಬಂಗಾರದೊಡವೆಗಳ ಬಯಸಿಲ್ಲ ಮನಸಿನಲಿ
ಬಂಗಾರದಂಥ ಹುಡುಗಿ
ನನ್ನೊಡವೆ, ನನ್ನ ಬೆಡಗಿ.

ತನ್ನ ನಲ್ಲೆ ತವರು ಮನೆ ಮತ್ತು ತನ್ನ ಮನೆ ಇರುವ ಹಳ್ಳಿಯರೆಡರ ಮುದ್ದು ಬಳ್ಳಿಯಂತೆ ಇದ್ದಾಳೆ. ತವರು ಮನೆಯವರು ಪ್ರೀತಿಯಿಂದ ಕರೆದರೆ ಹೋಗುತ್ತಾಳೆ. ಆನಂತರ ನನ್ನ ನೆನಪಿನಿಂದ ಮನೆಗೆ ಬರುತ್ತಾಳೆ. ಅವಳ ಬದುಕು ಮಲ್ಲಿಗೆ ಅರಳುವಂತಹ ರೀತಿಯಲ್ಲಿ ಬಹಳ ಸುಂದರವಾಗಿ ಅರಳುತ್ತಿದೆ. ಈಕೆ ಬಂಗಾರದ ಒಡವೆಗಳನ್ನು ಬಯಸುವುದಿಲ್ಲ ಆ ರೀತಿಯ ಆಸೆ ಆಕಾಂಕ್ಷೆಗಳು ಇಲ್ಲ. ಅವಳ ಗುಣ, ಮನಸ್ಸು ನನಗೆ ಬಂಗಾರದಂತೆ ಸಿಕ್ಕಿದೆ ಎಂದು ಅವಳೆ ನನ್ನ ಬೆಡಗಿ ಎಂದು ವರ್ಣಿಸುತ್ತಿದ್ದಾರೆ.

ಹಸುರ ಸೀರೆಯನುಟ್ಟು, ಕೆಂಪು ಬಳೆಗಳ ತೊಟ್ಟು
ತುಂಬುದನಿಯಲಿ ಕರೆವಳೆನ್ನ ಚೆಲುವೆ:
ಹಣೆಯನಾಳುವುದವಳ ಕುಂಕುಮದ ನಿಡುಬಟ್ಟು
ಲಕ್ಷ್ಮಿಯವಳೆನ್ನ ಮನೆಗೆ,
ನಮಗಿದುವೆ ಸೊಗಸು ಬದುಕಿನ ಬಣ್ಣಗಳ ಸಂತೆ
ನಮಗಿಲ್ಲ ನೂರು ಚಿಂತೆ:
ನಾವು ಗಂಧರ್ವರಂತೆ.

ತನ್ನ ಮಡದಿ ಸಾಂಪ್ರದಾಯಿಕವಾಗಿ ನಮ್ಮ ಸಂಸ್ಕೃತಿಯ ಪ್ರತೀಕವೆಂಬಂತೆ, ಹಸಿರು ಸೀರೆಯುಡುವಳು ಕೆಂಪು ಬಳೆಗಳನ್ನು ತೊಟ್ಟುಕೊಳ್ಳುವಳು ಕುಂಕುಮವನ್ನಿಟ್ಟುಕೊಂಡು ನನ್ನ ಪ್ರೀತಿಯಿಂದ ಕರೆವಳು, ಇವಳು ನನ್ನ ಮನೆಗೆ ಲಕ್ಷ್ಮಿಯಂತೆ ಇದ್ದಾಳೆ. ಇದು ನಮ್ಮ ಬದುಕಿಗೆ ಸೊಗಸಾಗಿದೆ. ಆಕಾಶದಲ್ಲಿ ಯಾವ ಚಿಂತೆಯೂ ಇಲ್ಲದ ದೇವತೆಗಳಂತೆ ನಾವು ಬದುಕು ಸಾಗಿಸುತ್ತಿದ್ದೇವೆ ಎನ್ನುತ್ತಿದ್ದಾರೆ. ಜೊತೆಗೆ ಮನೆಯ ಅಂಗಳದ ನಡುವೆ ಬೃಂದಾವನದ ಬಳಿ ನಿಂದು ಹಾಡುತ್ತಾ ನಮ್ಮ ಬದುಕು ಒಲುಮೆಯೊಳಗೆ ಸೇರಿಕೊಂಡು ನಮಗೆ ಯಾವ ನೋವು, ಸಾವುಗಳು ಸುಳಿಯುವುದಿಲ್ಲ ಎನ್ನುತ್ತಿದ್ದಾರೆ ಕವಿ.

ಕವಿ ಇಲ್ಲಿ ಒಂದು ಮದುವೆಯಾದ ಹೆಣ್ಣು ಗಂಡನ ಮನೆಯ ಲಕ್ಷ್ಮಿಯಾಗುವಳು. ಆಕೆ ಸೌಂದರ್ಯದಲ್ಲಿ, ಗುಣದಲ್ಲಿ, ತನ್ನ ಪತಿಯ ಮನಸ್ಸನ್ನು ಅರ್ಥೈಸಿಕೊಳ್ಳುವಲ್ಲಿ ಹೇಗಿದ್ದರೆ ಬದುಕು, ಬಾಳು, ಹಸನಾಗಿರುತ್ತದೆ ಎಂಬುದನ್ನು ಈ ಕವನದಲ್ಲಿ ತಿಳಿಸಿದ್ದಾರೆ.

ಮೈಸೂರ ಮಲ್ಲಿಗೆ ಕವನ ಸಂಕಲನದ **'ಹಳ್ಳಿಯ ಚೆಲುವೆಗೆ'** ಎಂಬ ಕವನದಲ್ಲಿ ಕವಿ ವಿವಾಹವಾಗುವ ತನ್ನ ನಲ್ಲೆಯ ಸೌಂದರ್ಯವನ್ನು ನಲ್ಲ ವರ್ಣನೆ ಮಾಡುತ್ತಿರುವುದನ್ನು ಚಿತ್ರಿಸಿದ್ದಾರೆ.

ನವಿಲೂರಿನೊಳಗೆಲ್ಲ ನೀನೆ ಬಲು ಚೆಲುವೆ।
ಅದಕೆ ನಮ್ಮಿಬ್ಬರಿಗೆ ನಾಳೆಯೇ ಮದುವೆ॥

ಕೆ.ಎಸ್.ನ. ಕವನಗಳಲ್ಲಿ ಬರೆದ ಊರುಗಳನ್ನು ಪತಿ ಮತ್ತು ಪತ್ನಿಯರ ಊರೆಂದು ಗುರುತಿಸಲಾಗಿದೆ. ಅದರಲ್ಲಿ 'ಹೊನ್ನೂರು' ಗಂಡನ ಮನೆಯಾದರೆ, ನವಿಲೂರು ಮಡದಿಯ ಮನೆಯಾಗಿದೆ. ಹಾಗಾಗಿ ಹೆಣ್ಣಿನ ಹಳ್ಳಿಯಾದ ಆ ನವಿಲೂರಿನಲ್ಲಿ ನೀನೇ ಎಲ್ಲರಿಗಿಂತ ಬಹಳ ಚೆಲುವೆ ಅದಕ್ಕಾಗಿ ನಾನು ನಿನ್ನ ಒಪ್ಪಿ ಮದುವೆಯಾಗುತ್ತಿದ್ದೇನೆ ಎಂದು ಹೇಳಿರುವುದನ್ನು ಕಾಣಬಹುದು.

ಬೆಳ್ಳಬೆಳ್ಳಗೆ ತೆಳ್ಳತೆಳ್ಳಗಿಹೆ ನೀನು,
ಬೇಟೆಗಾರನ ಬಿಲ್ಲಿನಂತಿರುವೆ ನೀನು, ಒತ್ತಾಗಿ ಕಪ್ಪಾಗಿ ಬೆಳೆದಿರುವ ಹುಬ್ಬು
ಪಾರಿವಾಳದ ಕಣ್ಣೆ ನೆರಳನಿತ್ತಿಹುದು.
ನವಿಲೂರಿನೊಳಗೆಲ್ಲ.

ಹಳ್ಳಿಯ ಚೆಲುವೆ ನೀನು ಬೆಳ್ಳಬೆಳ್ಳಗೆ, ಬೇಟೆಗಾರನ ಬಿಲ್ಲಿನಂತೆ, ನಿನ್ನ ದೇಹದ ರಚನೆ ಇದೆ. ನಿನ್ನ ಹುಬ್ಬುಗಳು ಕಪ್ಪಾಗಿ ಸೊಂಪಾಗಿ ಬೆಳೆದಿವೆ. ಅದು ಪಾರಿವಾಳದ ಕಣ್ಣ ನೆರಳು ನೀಡುತ್ತಿದೆ. ರೇಸಿಮೆ ಸೀರೆಗಿಂತಲೂ ನಿನ್ನ ಮೈ ಕೋಮಲವಾಗಿದೆ. ಬೆಟ್ಟಗಳಲ್ಲಿ ಇರುವ ಗಿಳಿಗಳ ಮಾತಿಗಿಂತ ನಿನ್ನ ನುಡಿ ಇಂಪಾಗಿದೆ. ಹಾಗಾಗಿ ನೀನು ನಮ್ಮೂರಿನಲ್ಲೆಲ್ಲ ಚೆಲುವೆ, ತುಂಬು ಯವ್ವೌನದ ಚೆಲುವೆ, ನಿನ್ನ ಪ್ರೀತಿಗೆ ನಾನು ಸೋತಿದ್ದೇನೆ. ನನ್ನನ್ನು ವರಿಸಿ ಸಂತೋಷವಾಗಿ ಬಾಳುವಂತೆ ಮಾಡು ಎಂದು ಆ ಚೆಲುವೆಯ ಸೌಂದರ್ಯವನ್ನು ಹೊಗಳುತ್ತಿದ್ದಾರೆ.

ಕವಿ ಒಂದು ವಿಷಯದ ಬಗ್ಗೆ ಹೇಳುವಾಗ ಅದರ ಗುಣವನ್ನು ಇನ್ನೊಂದು ವಸ್ತುವಿನ ಗುಣದೊಂದಿಗೆ ಹೋಲಿಸಿ ಹೇಳುತ್ತಿದ್ದಾರೆ. ಇಲ್ಲಿ ಬೇಟೆಗಾರನ ಬಿಲ್ಲು ಮತ್ತು ಪಾರಿವಾಳದ ಕಣ್ಣು ವಿಶೇಷ ಗುಣವನ್ನು ಎತ್ತಿ ತೋರಿಸುವ ಕೆಲಸವನ್ನು ಮಾಡುತ್ತವೆ ಎನ್ನಬಹುದು.

ಹಗಲೆಲ್ಲ ದುಡಿಯುವೆನು ಕೆಸರಗದ್ದೆಯಲಿ,
ಶ್ರಮವೆಲ್ಲ ಹೊನ್ನಹುದು ವರ್ಷದಂತ್ಯದಲಿ,
ನಿನ್ನ ಹೊಟ್ಟೆಯ ತುಂಬ ಅನ್ನ ನೊರೆ ಹಾಲು,
ನನ್ನ ನುಡಿಯನು ಕೇಳು, ನನ್ನೊಡನೆ ಬಾಳು,
ನವಿಲೂರಿನೊಳಗೆಲ್ಲ.

ಮೊದಲ ಸಾಲುಗಳಲ್ಲಿ ಚಲುವೆಯ ಸೌಂದರ್ಯದ ವರ್ಣನೆ ಮಾಡಿದವರು ಆನಂತರ ಆತ ತಾನು ಹಗಲೆಲ್ಲ ಕೆಸರಗದ್ದೆಯಲ್ಲಿ ದುಡಿಯುತ್ತೇನೆ. ನನ್ನ ದುಡಿಮೆಯ ಫಲ ವರ್ಷದ ಕೊನೆಯಲ್ಲಿ ಸಿಗುತ್ತದೆ. ನಾನು ನಿನ್ನ ಹೊಟ್ಟೆ ತುಂಬ ಅನ್ನ ನೀಡಿ ನೋಡಿಕೊಳ್ಳುತ್ತೇನೆ. ನನ್ನ ಮಾತು ಕೇಳಿ ನನ್ನೊಡನೆ ಬಾಳು ಎಂದು ಕೇಳಿಕೊಳ್ಳಿತ್ತಿದ್ದಾನೆ.

ಇದರಲ್ಲಿ ಕವಿ, ಒಂದು ಹೆಣ್ಣಿನ ಸೌಂದರ್ಯವನ್ನು, ಗುಣವನ್ನು ನೋಡಿ ವರಿಸುತ್ತಾನೆ. ಆದರೆ ಅದಕ್ಕೆ ತಕ್ಕಂತೆ, ಹೆಣ್ಣು ಸಹ ಗಂಡಿನ ಸೌಂದರ್ಯ, ಗುಣದ ಜೊತೆಗೆ ತನ್ನನ್ನು ನೋಡಿಕೊಳ್ಳುವ ಸಾಮರ್ಥ್ಯವಿದೆಯೇ ಎಂದು ಪರೀಕ್ಷಿಸುತ್ತಾಳೆ. ಹಾಗಾಗಿಯೇ ಇಲ್ಲಿ ತಾನು ಮಾಡುವ ಕಾಯಕದ ಬಗ್ಗೆ ನಲ್ಲ ವರ್ಣಿಸಿ ತನ್ನೊಡನೆ ಬಾಳುವಂತೆ ಕೇಳಿಕೊಳ್ಳುತ್ತಿರುವುದನ್ನು ಕಾಣಬಹುದು.

"ಮೈಸೂರ ಮಲ್ಲಿಗೆ" ಕವನ ಸಂಕಲನದ "ಬಾರೆ ನನ್ನ ಶಾರದೆ" ಕವನದಲ್ಲಿ ಗಂಡನು ತನ್ನ ಹೆಂಡತಿಯ ಪ್ರೀತಿಯನ್ನು ಉದ್ಘೋಷಿಸಿ ಹೇಳುತ್ತಿದ್ದಾನೆ. ಇದರ ಜೊತೆಗೆ ಸಂಪ್ರದಾಯದ ಹೆಸರಲ್ಲಿ ಕೆಲವೊಂದು ಆಚರಣೆಗಳನ್ನು ಈ ಕವನದಲ್ಲಿ ವಿರೋಧಿಸಿದ್ದಾರೆ.

ಮದುವೆಯಾಗಿ ತಿಂಗಳಿಲ್ಲ,
ನೋಡಿರಣ್ಣ ಹೇಗಿದೆ।
ನಾನು ಕೂಗಿದಾಗಲೆಲ್ಲ
ಬರುವಳೆನ್ನ ಶಾರದೆ।
ಹಿಂದು ಮುಂದೆ ನೋಡದೆ,
ಎದುರು ಮಾತನಾಡದೆ.

ಮದುವೆಯಾದ ಹೊಸದರಲ್ಲಿ ಸಾಮಾನ್ಯವಾಗಿ ಎರಡು ತಿಂಗಳುಗಳಾಗಿದ್ದರು ಹೆಣ್ಣು ಗಂಡನ ಬಳಿ ಬರಲು ಸಂಕೋಚ ಪಡುವುದು, ಬರುವಾಗಲೂ ಯಾರಿಗೂ ತಿಳಿಯದಂತೆ, ಯಾರಾದರೂ ಕಂಡಾರೆಂಬ ಭಯದಿಂದ ಅತ್ತಿತ್ತ ನೋಡಿ ಒಳಹೋಗುವಳು. ಆದರೆ ಕೆ.ಎಸ್.ನ ಚಿತ್ರಿಸಿರುವ ಈ ಕವನದಲ್ಲಿ ಮದುವೆಯಾಗಿ ತಿಂಗಳಾಗಿಲ್ಲ, ಆದರೂ ಗಂಡ ಕರೆದಾಗಲೆಲ್ಲ, ಸಂಕೋಚವಿಲ್ಲದೆ, ಯಾರಾದರೂ ಹಿರಿಯರು ಇದ್ದಾರೆಂದು ನಾಚದೆ ಬರುತ್ತಾಳೆ ಎಂದು ಹೇಳುತ್ತಿದ್ದಾರೆ.

ಒಂದು ಹೆಣ್ಣಿಗೊಂದು ಗಂಡು
ಹೇಗೋ ಸೇರಿ ಹೊಂದಿಕೊಂಡು
ಕಾಣದೊಂದು ಕನಸ ಕಂಡು

ಮಾತಿಗೊಲಿದಮೃತವುಂಡು?
ದುಃಖ ಹಗುರವೆನುತಿರೆ
ಪ್ರೇಮವೆನಲು ಹಾಸ್ಯವೇ?

ಕವಿ ಗಂಡು ಹೆಣ್ಣಿನ ಪ್ರೀತಿಯ ಮಹತ್ವವನ್ನು ಹೇಳುತ್ತಿದ್ದಾರೆ. ಒಂದು ಹೆಣ್ಣು ಗಂಡು ಸೇರಿ ದಾಂಪತ್ಯ ಜೀವನಕ್ಕೆ ಕಾಲಿರಿಸಿ, ತಮ್ಮ ಬದುಕಿನ ಕುರಿತು ಅಗಾಧವಾದ ಕನಸು ಕಾಣುತ್ತಾರೆ. ಮಾತಿನಲ್ಲಿ ವರ್ಣಿಸಲಾಗದ ಅಮೃತವನ್ನು ಸೇವಿಸುತ್ತಾ, ದುಃಖವನ್ನು ಹಗುರವಾಗಿಸಿಕೊಂಡು ಬಾಳುವುದು ಮುಖ್ಯ ಹಾಗಾಗಿ ಇಂತಹ ಬಾಂಧವ್ಯವನ್ನು ಹಾಸ್ಯವೆಂದು ಗುರುತಿಸಲು ಸಾಧ್ಯವಿಲ್ಲ ಎಂಬುದು ಕವಿಯ ನಿಲುವಾಗಿದೆ.

ಯಾರು ಕದ್ದು ನುಡಿದರೇನು?
ಊರೆ ಎದ್ದು ಕುಣಿದರೇನು?
ಜನರ ಬಾಯಿಗಿಲ್ಲ ಬೀಗ,
ಹೃದಯದೊಳಗೆ ಪ್ರೇಮರಾಗ
ಇಂಥ ಕೂಗನಳಿಸಿದೆ,
ಬೆಳಗಿ, ಬದುಕ ಹರಸಿದೆ.

ಗಂಡ ಹೆಂಡತಿಯರ ನಡವಳಿಕೆ ಮತ್ತು ಅವರ ಪ್ರೀತಿಯನ್ನು ಕುರಿತು ಸಂಪ್ರದಾಯದ ಹೆಸರಿನಲ್ಲಿ ನಿಂದನೆ ಮಾಡುವ ಜನರನ್ನು ಕುರಿತು ಹೇಳುತ್ತಿದ್ದಾರೆ. ಯಾರು ಕದ್ದು ಮಾತಾಡಲಿ, ಊರಿಗೆ ಊರೆ ಎಂದರೆ ಅಲ್ಲಿನ ಎಲ್ಲ ಜನರೂ ಏನಾದರೂ ಹೇಳಲಿ ಅವರ ಬಾಯಿಗೆ ಬೀಗ ಹಾಕಲು ಆಗುವುದಿಲ್ಲ. ನಮ್ಮ ಹೃದಯದಲ್ಲಿ ಪ್ರೇಮವಿರುವಾಗ ಇಂಥ ಕೂಗಿಗೆ ಅಂಜಬಾರದು ಎನ್ನುತ್ತಿದ್ದಾರೆ.

ಬದುಕು ನೆಳಲ ಬಿಸಿಲ ದಾರಿ
ಮತ್ತು ಕಳ್ಳ ಬೆಕ್ಕಿನಂತೆ
ಹೊಂಚುತಿಹುದು, ಯಾರ ದಾರಿಗೆಲ್ಲಿ ಕೊನೆಯೊ,
ಇಂದಿನಂತೆ ನಾಳೆ ಎನ್ನಲಾಗದು,
ಇತ್ತ ಸಿರಿಯು ನಿಲ್ಲದು,
ಮತ್ತೆ ಎಲ್ಲ ದೊರಕದು

ಕವಿ ಈ ಸಾಲುಗಳಲ್ಲಿ ಬದುಕಿನ ಸ್ವರೂಪ ಹೇಗಿರುತ್ತದೆಂದು ಹೇಳುತ್ತಿದ್ದಾರೆ. ಬದುಕು ನೆರಳು ಮತ್ತು ಬಿಸಿಲಿನ ದಾರಿ, ಅದರಲ್ಲಿ ಕಷ್ಟ ಸುಖಗಳು ಬರುತ್ತಿರುತ್ತವೆ, ಸಾವು ಎಂಬುದು ಕಳ್ಳ ಬೆಕ್ಕಿನಂತೆ ಹೊಂಚುಹಾಕುತ್ತಲೇ ಇರುತ್ತದೆ. ಯಾರ ಬದುಕಿನ ದಾರಿ ಎಲ್ಲಿ ಕೊನೆಯಾಗುತ್ತದೆಯೋ ತಿಳಿಯುವುದಿಲ್ಲ,

ಮನುಷ್ಯ ಇದ್ದಂತೆಯೇ ಇರಲಾರ. ಏಳು–ಬೀಳು ಸಹಜ. ಸಿರಿ, ಸಂಪತ್ತು ಎನ್ನುವುದು ಎಲ್ಲರ ಬದುಕಿನಲ್ಲಿ ಶಾಶ್ವತವಾಗಿ ಇರಲಾರದು ಹಾಗಾಗಿ ಇರುವಾಗ ಪ್ರೀತಿಯಿಂದ ಇರಬೇಕು ಎನ್ನುತ್ತಾರೆ.

ಮದುವೆಯಾದ ಹೊಸತರಲ್ಲಿ ಗಂಡ ಹೆಂಡಿರ ನಡುವೆ ಸಂಕೋಚ ದೂರವಾಗುತ್ತ, ಪರಸ್ಪರ ಆಕರ್ಷಣೆ ಬೆಳೆಯುತ್ತಿರುವಾಗ ಅದಕ್ಕೆ ಬರುವ ಅಡ್ಡಿಗಳನ್ನು ಪ್ರತಿಭಟಿಸಿ ಪ್ರೇಮದ ಮಹತ್ವವನ್ನು ಸಾರುವ ಈ ಕವಿತೆ ಹಾಡಿನ ಗತ್ತನ್ನು ಅನುಭವದ ಹಾಸ್ಯ ಮತ್ತು ಗಂಭೀರ ಮುಖಗಳನ್ನು ಒಳಗೊಂಡಿದೆ. ಕೌಟುಂಬಿಕ, ಸಾಮಾಜಿಕ ಮತ್ತು ತಾತ್ವಿಕ ಚೌಕಟ್ಟಿನಲ್ಲಿ ಈ ಕವಿತೆ ಪ್ರೇಮದ ಮುಖ್ಯ ಲಕ್ಷಣಗಳನ್ನು 'ಬೆಳಗಿ' ಬದುಕ ಹರಸಿದೆ ಎಂದು ಹೇಳಬಹುದು.

ಕೆ.ಎಸ್.ನ ರವರ 'ಐರಾವತ' ಕವನ ಸಂಕಲನದ 'ನೀವಲ್ಲವೆ'? ಕವನದಲ್ಲಿ ಹೆಂಡತಿ ತನ್ನ ಪತಿಯನ್ನು ಕುರಿತು ಅವರ ಪ್ರೀತಿಯ ಪರಿ ಹೇಗಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಿರುವುದನ್ನು ಕಾಣಬಹುದು.

ಹತ್ತುವರುಷದ ಹಿಂದೆ ಮುತ್ತೂರ ತೇರಿನಲಿ
ಅತ್ತಿತ್ತ ಸುಳಿದವರು ನೀವಲ್ಲವೆ?
ಹತ್ತಿರದ ಹೆಣ್ಣೆಂದು ಮತ್ತೆ ಮುತ್ತೂರಿನಲಿ
ಒಪ್ಪಿ ಕೈ ಹಿಡಿದವರು ನೀವಲ್ಲವೆ?

ವೈವಾಹಿಕ ಜೀವನವನ್ನು ಸಾಗಿಸುತ್ತಿರುವ ಮಡದಿ ತನ್ನ ಪತಿಯನ್ನು ಕುರಿತು ಹೀಗೆ ಹೇಳುತ್ತಿದ್ದಾಳೆ. ಹತ್ತು ವರ್ಷದ ಹಿಂದೆ ಮುತ್ತೂರ ತೇರಿನಲ್ಲಿ ನನ್ನ ಸುತ್ತ ಅತ್ತಿತ್ತ ಸುಳಿದವರು ನೀವು, ಹತ್ತಿರದ ಹೆಣ್ಣೆಂದು ನನ್ನ ಒಪ್ಪಿಕೊಂಡು ಮದುವೆಯಾದವರು ನೀವಲ್ಲವೆ? ಎಂದು ತಮ್ಮ ಮದುವೆಯ ಸಂದರ್ಭವನ್ನು ನೆನಪಿಸುತ್ತಾಳೆ.

ತಿಟ್ಟಿನಲಿ ಮುಂದಾಗಿ ಕಣಿವೆಯಲಿ ಹಿಂದಾಗಿ,
ನಗುನಗುತ ನಡೆದವರು ನೀವಲ್ಲವೆ?

ಪತಿಯು ಮಡದಿಯ ಮೇಲೆ ಯಾವ ರೀತಿಯಲ್ಲಿ ಎಚ್ಚರಿಕೆಯಿಂದ ತನ್ನನ್ನು ನೋಡಿಕೊಳ್ಳುತ್ತಿದ್ದರು ಎಂದು ಆಕೆ ತಿಳಿಸುತ್ತಿದ್ದಾಳೆ. ಬೆಟ್ಟಗಳ ಬೆನ್ನಿನಲಿ ನಡೆಯುವಂತಹ ಸಂದರ್ಭದಲ್ಲಿ ತಿಟ್ಟುಗಳನ್ನು ಹತ್ತುವ ಸಂದರ್ಭದಲ್ಲಿ ಮುಂದೆ ನಡೆಯುತ್ತಿದ್ದೀರಿ. ಕಣಿವೆಗಳಲ್ಲಿ ನನ್ನ ಹಿಂದೆ

ನಡೆಯುತ್ತಿದ್ದಿರಿ ನೀವು ನನ್ನನ್ನು ಅಷ್ಟು ಜಾಗರೂಕವಾಗಿ ನೋಡಿ ಕೊಳ್ಳುತ್ತಿದ್ದವರು ನೀವಲ್ಲವೇ ಎಂದು ಹೇಳುತ್ತಿದ್ದಾಳೆ.

ಕೈಗೆ ಬಳೆಯೇರದಯೆ, ಅಯ್ಯೋ! ನೋವೆಂದಾಗ,
ಮಹಡಿಯಿಂದಿಳಿದವರು ನೀವಲ್ಲವೆ?

ಈ ಸಾಲುಗಳಲ್ಲಿ ಪತ್ನಿಯ ಕೈಗೆ ಬಳೆಗಾರ ಬಳೆ ತೊಡಿಸುವ ಸಂದರ್ಭದಲ್ಲಿ ಆಕೆ ನೋವೆಂದು ಕೂಗಿ ಕೊಂಡಾಗ ಗಂಡನು ಮನೆಯ ಮಹಡಿಯಿಂದ ಹೆಂಡತಿಯ ಸದ್ದು ಕೇಳಿ ಬಂದು, ಆ ಬಳೆಗಾರ ಶೆಟ್ಟಿಯನ್ನು ಗದರುತ್ತಾನೆ. ಜೊತೆಗೆ ಆತ ತನ್ನ ಪತ್ನಿಯನ್ನು ಸೇವಕಿಯೆಂದು, ನನ್ನ ಮುತ್ತೆಂದು, ಕರೆಯುತ್ತಾ, ನೀನೇ ಬೇಕೆಂದು, ನೀನೇ ಸಾಕೆಂದು ಪ್ರೀತಿಸಿದಾತನು ನೀವೇ ಅಲ್ಲವೆ, ಎಂದು ಪತ್ನಿ ಈ ಸಾಲುಗಳಲ್ಲಿ ಹೇಳುತ್ತಿದ್ದಾಳೆ.

ಬಡತನವೊ, ಸಿರಿತನವೊ, ಯಾರಿರಲಿ, ಎಲ್ಲಿರಲಿ,
ದೊರೆಯಾಗಿ ಮೆರೆದವರು ನೀವಲ್ಲವೆ?
ಗಂಡನಿಗೆ ಒಪ್ಪಾಗಿ, ಕಂದನಿಗೆ ದಿಕ್ಕಾಗಿ
ಪಯಣದಲಿ ಜೊತೆಯಾಗಿ ನಾನಿಲ್ಲವೆ?

ಮಡದಿಯು ತನಗೆ ನೋವಾಗುವುದನ್ನು ಸಹಿಸದ ಗಂಡನನ್ನು ಕುರಿತು ಹೇಳುತ್ತಾ ಬಡತನ, ಸಿರಿತನದಲ್ಲೂ ಯಾರಿರಲಿ ಇಲ್ಲದಿರಲಿ ಎಲ್ಲಿದ್ದರೂ ನೀವು ದೊರೆಯಂತೆ, ಮೆರೆಯುತ್ತಿರುತ್ತೀರ. ಹಾಗಾಗಿ ನಿಮ್ಮ ಇಚ್ಛೆಯಂತೆ ನಾನು ಜೀವನ ನಡೆಸುತ್ತಾ ನಿಮ್ಮ ಕಂದನಿಗೆ ತಾಯಿಯಾಗಿ, ಬದುಕಿನ ಪಯಣದಲ್ಲಿ ನಿಮ್ಮ ಜೊತೆಜೊತೆಯಾಗಿ ಕಳೆಯುತ್ತೇನೆಂದು ಆಕೆ ಹೇಳುತ್ತಿದ್ದಾಳೆ.

ಕೆ.ಎಸ್.ನ ಅವರ ಕಾವ್ಯದಲ್ಲಿ ಹೆಣ್ಣಿಗೆ ಮಹತ್ವದ ಸ್ಥಾನ ನೀಡಿದ್ದಾರೆ. ಹಾಗಾಗಿ ಆ ಹೆಣ್ಣನ್ನು ಪ್ರೀತಿಸುತ್ತಾ, ಹೆಜ್ಜೆ ಹೆಜ್ಜೆಗೂ ರಕ್ಷಣೆ ನೀಡುವ ಗಂಡನಿಗೆ, ತನ್ನ ಆಸೆ ಆಕಾಂಕ್ಷೆಗಳನ್ನು ತೊರೆದು ಅವರ ಮನಸ್ಸಿಗೆ ಬದ್ಧವಾಗಿ ಜೀವನ ನಡೆಸುತ್ತೇನೆ ಎಂದು ಹೇಳುವ ಹೆಣ್ಣಿನ ಔದಾರ್ಯ ಗುಣವನ್ನು ಈ ಕವನದಲ್ಲಿ ಅನಾವರಣ ಮಾಡಿದ್ದಾರೆ.

ಕೆ.ಎಸ್.ನ ರವರ 'ಐರಾವತ' ಕವನ ಸಂಕಲನದ 'ಗಂಡ-ಹೆಂಡತಿ' ಕವನದಲ್ಲಿ ಗಂಡ ತನ್ನ ಹೆಂಡತಿಯ ಮೇಲೆ ಇಟ್ಟಿರುವ ಪ್ರೀತಿಯನ್ನು ತಿಳಿಸುತ್ತದೆ. ತನ್ನ ಜೀವನದ ಸರ್ವಸ್ವವೂ ಹೆಂಡತಿಯೆಂದು, ಜೀವನದಲ್ಲಿ

ಬೇರೆ ಎಲ್ಲರಿಗಿಂತಲು ಹೆಚ್ಚಿನ ಬೆಲೆ, ಮಹತ್ವವನ್ನು ತನ್ನ ಹೆಂಡತಿಗೆ ನೀಡಿರುವುದನ್ನು ಈ ಕವನದಲ್ಲಿ ಗಮನಿಸಬಹುದು.

ಹೆಂಡತಿಯೊಬ್ಬಳು ಮನೆಯೊಳಗಿದ್ದರೆ
ನನಗದೆ ಕೋಟಿ ರೂಪಾಯಿ।
ಹೆಂಡತಿಯೊಬ್ಬಳು ಹತ್ತಿರವಿದ್ದರೆ
ನಾನು ಒಬ್ಬ ಸಿಪಾಯಿ.

ಈ ಸಾಲುಗಳಲ್ಲಿ ಗಂಡ ತನ್ನ ಹೆಂಡತಿ ಮನೆಯಲ್ಲಿದ್ದರೆ ನನಗೆ ಕೋಟಿ ರೂಪಾಯಿ ಇದ್ದಂತೆ, ಅವಳು ನನ್ನ ಬಳಿ ಇದ್ದರೆ ನಾನು ಸಿಪಾಯಿಯಂತೆ ಇರುತ್ತೇನೆ ಎಂದು ಹೇಳುತ್ತಿದ್ದಾರೆ. ಮನೆಯಲ್ಲಿ ಹೆಣ್ಣು ಗೃಹಲಕ್ಷ್ಮಿಯಿದ್ದಂತೆ, ಹಾಗಾಗಿ ಗಂಡನಿಗೆ ತನ್ನ ಪ್ರೀತಿಯ ಮನದನ್ನೆಯಿದ್ದರೆ ಅವನಿಗೆ ಕೋಟಿ ರೂಪಾಯಿ ಇದ್ದಂತೆ, ಅವಳೇ ಅವನಿಗೆ ಶ್ರೀಮಂತಿಕೆಯ ಸಂಕೇತವಾಗಿ ಕಾಣುತ್ತಿರುತ್ತಾಳೆ ಎನ್ನಬಹುದು. ದೇಶ ಕಾಯುವ ಸಿಪಾಯಿ ಶಿಸ್ತಿನಿಂದ ಇರಬೇಕು. ಹೆಂಡತಿಯು ತನ್ನ ಬಳಿ ಇದ್ದರೆ ನಾನು ಒಬ್ಬ ಸಿಪಾಯಿಯಂತೆ, ಎಲ್ಲಾ ಜವಾಬ್ದಾರಿಗಳನ್ನು ಶಿಸ್ತಿನಿಂದ ಮಾಡುತ್ತೇನೆ ಎಂಬುದು ಈ ಸಾಲುಗಳಲ್ಲಿ ಧ್ವನಿತವಾಗಿದೆ ಎನ್ನಬಹುದು.

ಹೆಂಡತಿಯೊಬ್ಬಳು ಮನೆಯೊಳಗಿದ್ದರೆ
ಹುಣ್ಣಿಮೆ ಹೋಳಿಗೆ, ದೀಪ
ಹೆಂಡತಿ ತೌರಿಗೆ ಹೊರಡುವೆನೆಂದರೆ
ನನಗಿನ್ನಿಲ್ಲದ ಕೋಪ.

ಹೆಂಡತಿಯೊಬ್ಬಳು ಮನೆಯಲ್ಲಿ ಹುಣ್ಣಿಮೆ ಚಂದ್ರನಿದ್ದಂತೆ, ಹೋಳಿಗೆ ದೀಪವಿದ್ದಂತೆ, ಇಂಥವಳು ತನ್ನ ತವರಿಗೆ ಹೋಗುವೆನೆಂದರೆ ಗಂಡನಿಗೆ ಕೋಪ ಬರುವುದೆಂದು ಹೇಳುತ್ತಿದ್ದಾರೆ. ಗಂಡ ತನ್ನ ಪತ್ನಿಯನ್ನು ಅಪೂರ್ವ ವಸ್ತುಗಳೊಂದಿಗೆ ಹೋಲಿಸಿದ್ದಾರೆ. ಹುಣ್ಣಿಮೆ ದಿನದ ಚಂದ್ರನ ಕಾಂತಿಯಂತೆ, ಹಬ್ಬದ ದಿನಗಳಲ್ಲಿ ಮಾಡುವ ಹೋಳಿಗೆಯ ಸಿಹಿಯಂತೆ, ಮನೆಗೆ ಬೆಳಕು ನೀಡುವ ದೀಪದಂತೆ ನನ್ನ ಮನೆಯಲ್ಲಿ ಇರುತ್ತಾಳೆ. ಅಂತಹವಳು ತವರಿಗೆ ಹೋಗುತ್ತೇನೆಂದರೆ ತನಗೆ ಎಲ್ಲಿಲ್ಲದ ಕೋಪ ಬರುತ್ತದೆ ಎಂದು ಹೆಂಡತಿಯ ಮೇಲಿನ ಪ್ರೀತಿಯನ್ನು ವ್ಯಕ್ತಪಡಿಸುತ್ತಿದ್ದಾರೆ.

ಕೈಹಿಡಿದವಳು ಕೈಬಿಡದವಳು
ಮಾಡಿದಡಿಗೆಯೆ ಚೆಂದ,
ನಾಗರ ಕುಚ್ಚಿನ ನಿಡುಜಡೆಯವಳು,
ಈಕೆ ಬಂದುದೆಲ್ಲಿಂದ?

ಈ ಸಾಲುಗಳಲ್ಲಿ ಪತಿಯು ತನ್ನ ಹೆಂಡತಿಯು ನನ್ನ ಕೈ ಹಿಡಿದವಳು ಎಂದೆಂದಿಗೂ ಯಾವ ಕಷ್ಟಕಾಲದಲ್ಲೂ ತನ್ನ ಕೈಬಿಡದವಳು. ಇವಳು ಮಾಡಿದ ಅಡಿಗೆಯು ತುಂಬಾ ಚಂದವಿರುತ್ತದೆ, ಅರಿಶಿಣ, ಕುಂಕುಮ, ಕೈಬಳೆ, ತಾಳಿ, ಓಲೆ, ಮೂಗುತಿ ತೊಡುವ ಚೆಲುವೆ. ನನ್ನ ಹೆಂಡತಿ ಬಡವರ ಮಗಳು ಆದರೂ ಶೀಲದಲ್ಲಿ, ಗುಣದಲ್ಲಿ ಬೆಂಕಿಗಿಂತಲೂ ಶ್ರೇಷ್ಠಳಾದವಳು, ನಾಗರ ಕುಚ್ಚಿನಿಂದ ತನ್ನ ಉದ್ದ ಜಡೆಯನ್ನು ಸಿಂಗರಿಸಿಕೊಳ್ಳುವಳು, ಇಂತಹವಳು ತನಗಾಗಿ ಬಂದುದೆಲ್ಲಿಂದ ಎಂದು ಆಶ್ಚಯಪಡುತ್ತಿರುವುದನ್ನು ಗಮನಿಸಬಹುದು.

ಹೆಂಡತಿಯೊಂದಿಗೆ ಬಡತನ, ದೊರೆತನ
ಏನೂ ಭಯವಿಲ್ಲ,
ಹೆಂಡತಿಯೊಲುಮೆಯ ಭಾಗ್ಯವನರಿಯದ
ಗಂಡಿಗೆ ಜಯವಿಲ್ಲ.

ಕವಿ ಈ ಸಾಲುಗಳಲ್ಲಿ ಒಂದು ಸಂದೇಶವನ್ನು ಸಾರುತ್ತಿದ್ದಾರೆ. ಚೆಲುವು, ಒಲವು, ಸದ್ಗುಣವತಿಯಾದ, ಹೆಂಡತಿಯೊಂದಿಗೆ ಕವಿಯ ಕನಸಿನ ಊರಿನ ದೊರೆಯಾಗಬೇಕು. ನಕ್ಷತ್ರಗಳ ಬೆಳಕಿನ ತುಂಬಿದ ಸಭೆಯೊಳಗೆ ನನ್ನವಳು ನನ್ನೊಡನೆ ಸಿಂಹಾಸನದಲ್ಲಿ ಕುಳಿತು ಮೆಲ್ಲನೆ ನಗಬೇಕು ಎಂದು ಕನಸು ಕಾಣುತ್ತಾರೆ. ಹೆಂಡತಿಯೊಂದಿಗೆ ಬಡತನವೆ ಇರಲಿ, ದೊರೆತನ ಇರಲಿ ಯಾವುದಕ್ಕೂ ಭಯಪಡುವುದಿಲ್ಲ. ಹೆಂಡತಿಯ ಪ್ರೀತಿಯ ಮುಂದೆ ಇವೆಲ್ಲವನ್ನು ಸಹಿಸಬಹುದು. ಹಾಗಾಗಿ ಅವರ ಪ್ರೀತಿಯನ್ನು ಅರಿತವರು ಭಾಗ್ಯವಂತರು. ಹೆಂಡತಿ ಪ್ರೀತಿಯ ಅರಿಯದ ಗಂಡಂದಿರಿಗೆ ಎಂದೂ ಜಯವಿಲ್ಲ ಎಂದು ಈ ಮೂಲಕ ತಿಳಿಸಿದ್ದಾರೆ.

ಹೀಗೆ ದಾಂಪತ್ಯ ಪ್ರೇಮವನ್ನು ಕೆ.ಎಸ್.ನ ರವರ ಹಲವಾರು ಕವನಗಳಲ್ಲಿ ಕಾಣಬಹುದು. ತಿಂಗಳಾಯಿತೆ, ನಕ್ಕುನಗಿಸು, ಪ್ರೇಮದ ಗುಲಾಬಿ, ಅವಳೇ ಇವಳು, ಪ್ರೇಮಾಗಮ ಇನ್ನಿತರ ಕವನಗಳು ಉದಾಹರಣೆಯಾಗಿವೆ ಎನ್ನಬಹುದು. ಕವಿ ತನ್ನ ಕವಿತೆಗಳಲ್ಲಿ ಪ್ರೇಮವನ್ನು ಗಂಡ ಹೆಂಡತಿಯರು ಪರಸ್ಪರ ಸೌಂದರ್ಯ ಗುಣಗಳನ್ನು ಹೊಗಳುವುದರ ಮೂಲಕ ತಮ್ಮ ಪ್ರೇಮ ಬಾಂಧವ್ಯವು ಹೇಗಿರಬೇಕು ಎಂದು ತಿಳಿಸಿರುವುದನ್ನು ಕಾಣಬಹುದು.

೪.೩ ದಾಂಪತ್ಯದಲ್ಲಿ ವಿರಹ

ಕೆ.ಎಸ್.ನ. ಅವರು ತಮ್ಮ ಕವಿತೆಗಳಲ್ಲಿ ದಾಂಪತ್ಯದಲ್ಲಿ ಇರುವ ಪ್ರೀತಿಯನ್ನು ಹೇಳಿರುವಂತೆ ದಂಪತಿಗಳ ವಿರಹವನ್ನು ಕುರಿತು ಚಿತ್ರಿಸಿದ್ದಾರೆ. ವಿರಹ ಇಲ್ಲಿ ಪತಿ ಪತ್ನಿಯರಲ್ಲಿ ಯಾರದಾರೂ ಒಬ್ಬರೊನ್ನೊಬ್ಬರು ಕಳೆದುಕೊಂಡರೆ/ಮರಣಹೊಂದಿದರೆ ವಿರಹ ವೇದನೆಯಾಗಿ ಚಿತ್ರಿತವಾಗಿಲ್ಲ. ಅದರ ಬದಲಾಗಿ ದಾಂಪತ್ಯ ಜೀವನಕ್ಕೆ ಕಾಲಿಟ್ಟ ಹೊಸದರಲ್ಲಿ ಪರಸ್ಪರ ಒಬ್ಬರನ್ನೊಬ್ಬರು ಬಿಟ್ಟು ಇರಲಾರದ ಆಕರ್ಷಣೆ ಇರುತ್ತದೆ. ಹೀಗಿರುವಾಗ ಹೆಂಡತಿಯು ತವರಿಗೆ ಹೋಗುವುದು, ಮಗುವಿನ ಆರೈಕೆಗಾಗಿ ಕೆಲ ತಿಂಗಳ ಕಾಲ ಅಲ್ಲೇ ಇರಬೇಕಾಗಿರುತ್ತದೆ ಮತ್ತು ಹೆಂಡತಿಯ ತವರು ಮನೆಗೆ ಗಂಡ ನೋಡಲು ಹೋದಾಗ ಅವಳು ಕಣ್ಣಿಗೆ ಬೀಳದೇ ಇದ್ದ ಸಂದರ್ಭದಲ್ಲಿ ಗಂಡನ ಮನೆಗೆ ಇಂದೆ ಬರುವೆನೆಂದು ಹೇಳಿ ಹೆಂಡತಿ ಬರದಿದ್ದ ಸಂದರ್ಭದಲ್ಲಿ ಗಂಡ ವೇದನೆಯನ್ನು ಅನುಭವಿಸುತ್ತಾ ಸಹಜ ಸ್ಥಿತಿಗಿಂತಲೂ ಗೊಂದಲ ಮನಸ್ಥಿತರಾಗುತ್ತಾರೆ. ಗಂಡನಷ್ಟೇ ಅಲ್ಲದೇ ಹೆಂಡತಿ ತನ್ನ ತವರಿನಲ್ಲಿ ತಾನು ಬರದಿರಲು ಕಾರಣವನ್ನು ತಿಳಿಸುತ್ತಾ ಅವರನ್ನು ಬಿಟ್ಟಿರಲಾರದ ಸ್ಥಿತಿಯಲ್ಲಿ ಇರುತ್ತಾಳೆ. ಇವುಗಳ ಆಧಾರದ ಮೇಲೆ ದಾಂಪತ್ಯ ವಿರಹವನ್ನು ಕೆ.ಎಸ್.ನ. ತನ್ನ ಕವನಗಳಲ್ಲಿ ಚಿತ್ರಿಸಿರುವುದನ್ನು ಕಾಣಬಹುದು.

ಕೆ.ಎಸ್.ನ. ಅವರ **'ಮೈಸೂರ ಮಲ್ಲಿಗೆ'** ಕವನ ಸಂಕಲನದ **'ಮಾವನ ಮನೆಯಲ್ಲಿ'** ಕವನದಲ್ಲಿ ಪತ್ನಿಯನ್ನು ನೋಡಲು ಅವಳ ತವರಿಗೆ ರಾಯರು ಹೋದ ಸಂದರ್ಭದಲ್ಲಿ ಆಕೆ ಅವರ ಕಣ್ಣಿಗೆ ಬೀಳುವುದಿಲ್ಲ. ಅಂತಹ ಸಂದರ್ಭದಲ್ಲಿ ಅವರು ಕಳವಳಕ್ಕೊಳಗಾದ ಸ್ಥಿತಿಯನ್ನು, ಅಳಿಯನಿಗೆ ಆತಿಥ್ಯ, ಗೌರವ ಮಾವನ ಮನೆಯಲ್ಲಿ ಹೇಗಿರುತ್ತದೆ ಎಂಬುದನ್ನು ಚಿತ್ರಿಸಿದ್ದಾರೆ.

ರಾಯರು ಬಂದರು ಮಾವನ ಮನೆಗೆ
ರಾತ್ರಿಯಾಗಿತ್ತು.
ಹುಣ್ಣಿಮೆ ಹರಸಿದ ಬಾನಿನ ನಡುವೆ
ಚಂದಿರ ಬಂದಿತ್ತು–ತುಂಬಿದ
ಚಂದಿರ ಬಂದಿತ್ತು.

ಮಾವನ ಮನೆಗೆ ರಾಯರು ಬಂದಾಗ ರಾತ್ರಿಯಾಗಿರುತ್ತದೆ. ಆ ದಿನ ಹುಣ್ಣಿಮೆಯಾಗಿದ್ದು ಚಂದ್ರನ ಬೆಳದಿಂಗಳು ಮನಸ್ಸಿಗೆ ಮುದ ನೀಡುತ್ತಿರುತ್ತದೆ. ಆ ಹುಣ್ಣಿಮೆ ದಿನ ಪೂರ್ಣ ಚಂದ್ರ ಆಕಾಶದಲ್ಲಿ ಬಂದಂತೆ ಈ ರಾಯರೆಂಬ ಚಂದ್ರ ಹೆಂಡತಿಯ ಮನೆಗೆ ಬಂದಿರುತ್ತಾರೆ. ಮಲ್ಲಿಗೆ ಪರಿಮಳ ತುಂಬಿದ

ಮಾವನ ಮನೆಯ ಬಾಗಿಲ ಬಳಿ ಅಳಿಯ ಬರುತ್ತಿದ್ದಂತೆಯೇ ಕಾಲು ತೊಳೆದುಕೊಳ್ಳಲು ಬಿಸಿ ನೀರಿನ ಉಪಚಾರವಾಗಿರುತ್ತದೆ. ದಣಿದು ಹಸಿದು ಬಂದ ರಾಯರಿಗೆ ಮೃಷ್ಟಾನ್ನ ಭೋಜನವು ಕಾದಿರುತ್ತದೆ. ಈ ಆದರೋಪಚಾರಗಳಿಂದ ರಾಯರಿಗೆ ಭೂಮಿಗೆ ಸ್ವರ್ಗವೇ ಇಳಿದಂತೆ ಅನ್ನಿಸುತ್ತದೆ. ಇವೆಲ್ಲವೂ ಅಳಿಯನಿಗೆ ನಮ್ಮ ಸಂಸ್ಕೃತಿಯಲ್ಲಿ ಮಾಡುವ ಆತಿಥ್ಯದ ಪ್ರತೀಕವಾಗಿಯೂ ಕಾಣುತ್ತದೆ.

ಚಿಗುರೆಲೆ ಬಣ್ಣದ ಅಡಕೆಯ ತಂದಳು
ನಾದಿನಿ ನಗುನಗುತ,

ಮಾವನ ಮನೆಯಲ್ಲಿ ರಾಯರಿಗೆ ಕೊಠಡಿಯಲ್ಲಿ ಮಂಚದ ಮೇಲೆ ಮೆತ್ತನೆಯ ಹಾಸಿಗೆ, ಅಪ್ಪಟ ರೇಸಿಮೆ ದಿಂಬು, ಅದರಂಚಿಗೆ ಪದುಮಳು ಬಿಡಿಸಿದ ಹೂವಿನ ಚಿತ್ರವಿತ್ತು. ಅಲ್ಲಿಗೆ ಎಲೆ ಅಡಿಕೆಯನ್ನು ಹಾಲನ್ನು ನಾದಿನಿ ಮತ್ತು ಮಾವ ತಂದುಕೊಡುತ್ತಿದ್ದರು. ಆದರೆ ಮಡದಿಯ ಸದ್ದೇ ಇರಲಿಲ್ಲ. ಇಲ್ಲಿಂದ ರಾಯರಿಗೆ ಕಳವಳ ಆರಂಭವಾಗುತ್ತದೆ. ಆಗ ರಾಯರು

ಮಡದಿಯ ತಂಗಿಯ ಕರೆದಿಂತೆಂದರು.
'ಅಕ್ಕನ ಕರೆಯಮ್ಮ'
ಮೆಲುದನಿಯಲಿ ನಾದಿನಿ ಇಂತೆಂದಳು
'ಪದಿಮಳು ಒಳಗಿಲ್ಲ' ನಕ್ಕಳು
ರಾಯರು ನಗಲಿಲ್ಲ.

ಮಡದಿಯೆಲ್ಲಿದ್ದಾಳೆಂದು ತಿಳಿಯದೆ ರಾಯರು ನಾದಿನಿಯನ್ನು ಕೇಳಿದಾಗ ಆಕೆ ಅಕ್ಕ ಪದುಮಳು ಒಳಗಿಲ್ಲ ಎನ್ನುತ್ತಾಳೆ. ಆಗಲೇ ಭಾವನ ಪೇಚಾಟ ಕಂಡು ನಾದಿನಿ ನಗುತ್ತಿರುತ್ತಾಳೆ. ರಾಯರ ಮನಸ್ಸು ಮಡದಿಯಿಲ್ಲದೆ ಅಸ್ವಸ್ಥವಾಗುತ್ತದೆ, ಮನ ಮುದುಡುತ್ತದೆ, ಅದರೊಡನೆ ಮುನಿಸು ಕೂಡ ಬರುತ್ತದೆ.

ಏರುತ ಇಳಿಯುತ ಬಂದರು ರಾಯರು
ದೂರದ ಊರಿಂದ,

ದೂರದ ಊರಿಂದ ಏರುತ ಇಳಿಯುತ ಕಷ್ಟಪಟ್ಟು ಬಂದ ರಾಯರಿಗೆ ಹೆಂಡತಿಯು ಕಾಣದಿರುವುದು ಅವಳ ಸಾನಿಧ್ಯದಿಂದ ದೂರವಾಗಬೇಕಾದಂತ ಸ್ಥಿತಿ ಅಸಹನೀಯವೆನಿಸಿದೆ. ಅವರಿಗೆ ಕಣ್ಣನ್ನು ಕಡಿದರು ನಿದ್ದೆಯು ಬರದ ಸ್ಥಿತಿಯಾಗುತ್ತದೆ. ಆ ರಾತ್ರಿ ರಾಯರಿಗೆ ದೀರ್ಘ ರಾತ್ರಿಯೇ

ಆಗುತ್ತದೆ. ಬೆಳಿಗ್ಗೆ ಎದ್ದು ಕೋಪದಿಂದ ಹೊರಟುನಿಂತ ರಾಯರಿಗೆ ಒಳಗಿನಿಂದ 'ನೀರಾಯಿತು' ಎಂಬ ಮಾತು ಕೇಳಿಸುತ್ತದೆ. ಆಗ ಅವರ ಬಳಿ ಪದುಮಳು ಬರುತ್ತಾಳೆ.

ಈ ಕವಿತೆಯಲ್ಲಿ ಕವಿ ಅಳಿಯನಿಗೆ ಆದ ಆತಿಥ್ಯ, ಹೆಂಡತಿ ಕಾಣದ ಕಸಿವಿಸಿ ಮತ್ತು ಆಕೆ ಬಂದಾಗ ಉಂಟಾಗುವ ಸಂತೋಷ ಇವುಗಳನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ ಎನ್ನಬಹುದು.

ಈ ಕವಿತೆಯನ್ನು ಕುರಿತು **"ಕುರ್ತುಕೋಟಿ"**ಯವರು "ಜೀವನದ ಬಗ್ಗೆ ರುಚಿಯನ್ನು ಹುಟ್ಟಿಸುವ ಮತ್ತು ನಮ್ಮ ಸಂವೇದನೆಗಳನ್ನು ಹದಗೊಳಿಸುವ ಬಹಳ ದೊಡ್ಡ ಕರ್ತವ್ಯವನ್ನು ನೆರವೇರಿಸಿ ಈ ಕಾವ್ಯ ಕೃತಾರ್ಥವಾಗಿದೆ. ಬಹುಶಃ ಜಗತ್ತಿನ ಪ್ರತಿಯೊಂದು ಭಾಷೆಯಲ್ಲೂ ಈ ಜಾತಿಯ ಕಾವ್ಯವಿರಬೇಕು, ಮನುಷ್ಯ ಜೀವನದ ಅತ್ಯಂತ ಸಾರ್ಥಕ ಮುಹೂರ್ತಗಳ ಸ್ಮೃತಿ ಚಿತ್ರ ಈ ಕಾವ್ಯದಲ್ಲಿರುತ್ತದೆ"[9] ಎಂದಿದ್ದಾರೆ.

ಕೆ.ಎಸ್.ನ. ಅವರ **"ಮೈಸೂರ ಮಲ್ಲಿಗೆ"** ಕವನ ಸಂಕಲನದ **"ಅಕ್ಕರೆಯ ದನಿಯಾಕೆ"** ಕವನದಲ್ಲಿ ಮನೆಯಲ್ಲಿ ಹೆಂಡತಿಯಿಲ್ಲದೆ ಇರುವ ಸಂದರ್ಭದಲ್ಲಿ ಅವಳನ್ನು ಪತಿ ನೆನಪಿಸಿಕೊಳ್ಳುತ್ತಿರುವುದನ್ನು ಕವಿ ಇಲ್ಲಿ ಚಿತ್ರಿಸಿದ್ದಾರೆ.

ಹೊಸಿಲ ಬಳಿ ಬಂದೊಡನೆ ಬಾಗಿಲನು ತೆರೆವಾಕೆ,
'ಹೆಸರೇನು?' ಎನುವಾಕೆ ಮನೆಯೊಳಿಲ್ಲ,
ಬಿಸಿಲೊಳಗೆ, ನೆಳಲೊಳಗೆ ಪಕ್ಕದಲ್ಲಿ ನಗುವಾಕೆ,
ಹಸುರು ಕುಪ್ಪಸದಾಕೆ ಮನೆಯೊಳಿಲ್ಲ.

ಸಾಮಾನ್ಯವಾಗಿ ಮನೆ ಬಾಗಿಲಿಗೆ ಗಂಡ ಬಂದ ಹೆಜ್ಜೆ ಸಪ್ಪಳವನ್ನು ಅರಿತು ಬಂದು ಹೆಂಡತಿ ಬಾಗಿಲು ತೆರೆಯುತ್ತಾಳೆ. ಗಂಡನ ಹೆಜ್ಜೆಯ ಸದ್ದನ್ನು ಅಷ್ಟು ಜಾಗರೂಕವಾಗಿ ಹೆಂಡತಿ ಗಮನಿಸಿರುತ್ತಾಳೆ. ಹಾಗಾಗಿಯೇ ಇಲ್ಲಿ ಹೊಸಿಲ ಬಳಿ ಬಂದಾಗ ಬಾಗಿಲನು ತೆರೆಯುವಾಕೆ ಮನೆಯೊಳಿಲ್ಲ, ಬಿಸಿಲಲ್ಲಿ ನೆರಳಲ್ಲಿ ನನ್ನ ಜೊತೆ ನಗುನಗುತ ಇರುವವಳು ಹಸಿರು ಬಣ್ಣದ ಸೀರೆ ತೊಟ್ಟು ನನ್ನ ಜೊತೆ ಬರುವವಳು ಮನೆಯೊಳಿಲ್ಲ ಎಂದು ಗಂಡ ಮರುಗುತ್ತಿದ್ದಾನೆ.

ಅಕ್ಕರೆಯ ದನಿಯಾಕೆ ಸಕ್ಕರೆಯ ನುಡಿಯಾಕೆ
ಸಿಕ್ಕಿದರೆ ಬಿಡದಾಕೆ ಮನೆಯೊಳಿಲ್ಲ,
ಚಿಕ್ಕ ಮನೆಯೊಳಗೆನ್ನ ಪಕ್ಕದಲ್ಲಿ ನಗುವಾಕೆ,
ಉಕ್ಕುವೊಲ್ಮೆಯ ಮಡದಿ ಮನೆಯೊಳಿಲ್ಲ.

ಕವಿ ಈ ಸಾಲುಗಳಲ್ಲಿ ಗಂಡನ ವಿರಹವನ್ನು ತಿಳಿಸುವುದರೊಂದಿಗೆ ಆತನ ಬದುಕಿನ ಸ್ಥಿತಿಯನ್ನು ತಿಳಿಸುತ್ತಿದ್ದಾರೆ. ಇಲ್ಲಿ ಹೆಂಡತಿಯು ಅಕ್ಕರೆಯ ದನಿಯನ್ನು ಹೊಂದಿರುವ ಸಕ್ಕರೆಯ ಸಿಹಿಯಂತೆ ಮಾತನಾಡುವವಳು ಎನ್ನುತ್ತಿದ್ದಾರೆ. ತನ್ನ ಚಿಕ್ಕ ಮನೆಯೊಳಗೆ ತನ್ನ ಪಕ್ಕದಲ್ಲಿದ್ದು ನಗುತ್ತಾ, ರಾಯರೇ ಎಂದು ನನ್ನನ್ನು ಪ್ರೀತಿಯಿಂದ ಕರೆಯುತ್ತಿದ್ದಳು. ರಾಶಿ ಹೂಗಳನ್ನು ತನ್ನ ಮುಡಿಗೆ ಮುಡಿದು ತನ್ನನ್ನು ಸಂತೋಷಪಡಿಸುತ್ತಿದ್ದಳು. ನನ್ನೆದೆಯ ರಾಣಿ ನನ್ನೊಡನೆ ಸಡಗರದಿಂದ ಬಾಳುತ್ತಿದ್ದ ಇವಳು, ಅಕ್ಕರೆಯ ದನಿಯಾಕೆ ಮನೆಯೊಳಿಲ್ಲ ಎಂದು ಗಂಡ ಹೇಳುತ್ತಿದ್ದಾರೆ.

ಸಿರಿತನದಲ್ಲಿ, ದಾಂಪತ್ಯದಲ್ಲಿ ಸುಖ-ಸಂತೋಷದಿಂದಿರುವುದು ಸಾಮಾನ್ಯವಾಗಿರುತ್ತದೆ, ಆದರೆ ಬಡತನದಲ್ಲಿ ಅದು ಕಷ್ಟವೇ ಸರಿ ಎನ್ನಬಹುದು. ಆದರೆ ಇಲ್ಲಿ ಕವನದ ನಾಯಕನ ಪತ್ನಿ ಅವನ ಚಿಕ್ಕ ಮನೆಯೊಳಗೆ ನಗುತ್ತಿರುತ್ತಾಳೆಂದು ಹೇಳುತ್ತಿರುವಲ್ಲಿಯೇ ಆಕೆಯ ವ್ಯಕ್ತಿತ್ವ ಎಂಥದ್ದು ಎಂಬುದು ಅನಾವರಣಗೊಳ್ಳುತ್ತದೆ ಎಂದು ಹೇಳಬಹುದು.

ಕೆ.ಎಸ್.ನ. **"ಮೈಸೂರ ಮಲ್ಲಿಗೆ"** ಕವನ ಸಂಕಲನದ **"ನಾಳೆ ಬರುವಳು ಗೌರಿ"** ಕವನದಲ್ಲಿ ತವರಿಗೆ ಹೋದ ಸತಿಯ ಬರುವಿಕೆಗಾಗಿ ಕಾಯುತ್ತಿರುವ, ಆಕೆ ಬರದಿರಲು ಕಾರಣವೇನೆಂದು ಊಹಿಸುತ್ತಿರುವ ಪತಿಯ ಮನಸ್ಸಿನಾಳವನ್ನು ಕವಿ ತಿಳಿಸುತ್ತಿದ್ದಾರೆ.

ಮೂರು ತಿಂಗಳು ಕಳೆದ ಮಾರನೆಯ ದಿವಸವೇ
ಬರುವೆನೆಂದಾಣೆಯಿಟ್ಟೊಲವ ಮಿಡಿದು,
ತೌರಿಗೋಡಿದ ಗೌರಿ ಮೂರು ತಿಂಗಳ ಮೇಲೆ
ವಾರವೊಂದಾದರೂ ಬಂದಿಲ್ಲವು.

ಕೆ.ಎಸ್.ನ. ತಮ್ಮ ಕವನದ ನಾಯಕಿಗೆ ಗೌರಿ ಹೆಸರು ಸಂಭೋದಿಸಿದ್ದಾರೆ. ಆಕೆ ತನ್ನ ಪತಿಗೆ ಮೂರು ತಿಂಗಳು ಕಳೆದ ಮರು ದಿವಸವೇ ಬರುವೆನೆಂದು ಆಣೆಯಿಟ್ಟು ಪ್ರೀತಿ ತೋರಿ ತವರಿಗೆ ಹೋದವಳು ಮೂರು ತಿಂಗಳ ಮೇಲೆ ಒಂದು ವಾರವಾದರೂ ಬಂದಿಲ್ಲ ಎಂಬುದು ಗಂಡನ ಚಿಂತೆಯಾಗಿದೆ. ಹೆಣ್ಣು ತಾಯಿಯಾಗುವ ಸಂದರ್ಭದಲ್ಲಿ ತವರಿಗೆ ಮಗುವಿನ ಆರೈಕೆಗಾಗಿ ತೆರಳುತ್ತಾಳೆ. ಆ ಸಮಯಲ್ಲಿ ತನ್ನ ಪತಿಗೆ ಇಷ್ಟು ತಿಂಗಳೊಳಗಾಗಿ ಬರುವೆನೆಂದು ಒಲುಮೆಯ ಗಂಡನಿಗೆ ಹೇಳಿರುತ್ತಾಳೆ, ಅವಳಿಲ್ಲದ ಸಂದರ್ಭದಲ್ಲಿ.

ಇರುಳು ಚಂದಿರನಡಿಯಲೊಂದು ತಾರೆಗೆ ಬಂದು
ನನ್ನ ಕೇಳುವುದೆಂದು ಬರುವೆಳೆಂದು.

ಇಲ್ಲಿ ಕವಿಯು, ಹೆಂಡತಿಯು ತವರಿಂದ ಬರಲಿಲ್ಲವೆಂದು ಗಂಡ ವ್ಯಥೆ ಪಡುವುದಲ್ಲದೆ, ಅಲ್ಲಿನ ಪ್ರಕೃತಿಯೂ ಅವಳ ಬರುವಿಕೆಗಾಗಿ ಕಾಯುತ್ತಿತ್ತು ಎಂಬುದನ್ನು ಚಿತ್ರಿಸಿದ್ದಾರೆ.

ರಾತ್ರಿ ಚಂದಿರನಡಿ ಇರುವ ನಕ್ಷತ್ರಗಳು ಬಂದು ಗೌರಿ ಯಾವಾಗ ಬರುವಳೆಂದು ಕೇಳುತ್ತಿವೆ. ನೀನಿಲ್ಲದೇ ದಾರಿ ದೀಪವು ಕೂಡ ಮಂಕಾಗಿ ಕಾಣುವುದು. ಸೋಗೆ ಬಣ್ಣದ ಗಂಡು ನವಿಲು ಕೂಡ ನರ್ತನ ಮಾಡದೆ ಸುಮ್ಮನಿದೆ. ಊರ ದೇವರ ಕಾಡಿನ ಸಂಪಿಗೆ ಹೂ ಕೋಪದಲ್ಲಿ ಮೌನವಾಗಿದೆ. ಬನದ ಬೇಲಿಯ ಮಲ್ಲಿಗೆಯೂ ವಿರಹದಿಂದ ಅರಳುತ್ತಿದೆ ಎಂದು ಪತಿ ತನ್ನ ಮನಸ್ಸಿನಲ್ಲಿರುವ ಆಕೆಯ ಮೇಲಿನ ಪ್ರೀತಿಯನ್ನು ಪ್ರಕೃತಿಯ ಜೊತೆ ಸಮೀಕರಿಸುತ್ತಿದ್ದಾರೆ.

ಓಲೆ ತಲುಪಿರಬಹುದು, ನಿಲ್ಲಲಾರಳು ಇನ್ನು
ನಾಳೆ ಬರುವಳು ನನ್ನ ಪ್ರೇಮ ಲಹರಿ!

ಬರೆದಿರುವ ಪತ್ರ ಆಕೆಗೆ ತಲುಪಿರಬಹುದು, ಅದನ್ನು ಓದಿದ ಮೇಲೆ ನಿಲ್ಲಲಾರದೆ ನನ್ನ ಪ್ರೇಮ ಲಹರಿ ಎನ್ನುತ್ತಾರೆ. ತವರ ಬಳಗವನ್ನು ಬಿಟ್ಟು ಬರುವುದು ಸುಲಭವೇ? ತವರಿನ ಪ್ರೀತಿಯನ್ನು ದಾಟಿ ಬರುವುದು ಕಷ್ಟವಾಗುತ್ತದೆ. ತೌರಿನಿಂದ ನನ್ನ ಗೌರಿ ಜೊತೆಗೊಂದು ಮಗುವ ತರುತ್ತಾಳೆ. ಆ ಮಗು ನನ್ನ ಮನೆಯ ನಗುವಾಗುತ್ತದೆ, ಬೆಳಕಾಗುತ್ತದೆ ಎಂದು ಹೇಳುತ್ತಾ ತನ್ನ ಸತಿಯ ನಿರೀಕ್ಷೆಯಲ್ಲಿರುವ ಪತಿಯ ತವಕವನ್ನು ಈ ಕವನದಲ್ಲಿ ಗಮನಿಸಬಹುದು.

"ಮೈಸೂರ ಮಲ್ಲಿಗೆ" ಕವನ ಸಂಕಲನದ **"ಹೆಂಡತಿಯ ಕಾಗದ"** ಕವನದಲ್ಲಿ ತವರಿನಲ್ಲಿರುವ ಸತಿಯು, ತನ್ನ ಪತಿಯನ್ನು ಕುರಿತು ಅವರನ್ನು ಬಿಟ್ಟಿರಲು ಕಾರಣವಿದೆಂದು ಪತ್ರದ ಮೂಲಕ ತಿಳಿಸುತ್ತಿರುವುದನ್ನು ಕಾಣಬಹುದು.

ತೌರಸುಖದೊಳಗೆನ್ನ ಮರೆತಿಹಳು ಎನ್ನದಿರಿ
ನಿಮ್ಮ ಪ್ರೇಮವ ನೀವೆ ಒರೆಯನಿಟ್ಟು
ನಿಮ್ಮ ನೆನಪೆ ನನ್ನ ಹಿಂಡುವುದು ಹಗಲಿನಲಿ
ಇರುಳಿನಲಿ ಕಾಣುವುದು ನಿಮ್ಮ ಕನಸು.

ತವರಿನ ಸುಖದಲ್ಲಿ ನಿಮ್ಮನ್ನು ಮರೆತಿದ್ದಾಳೆ ಎನ್ನದಿರಿ, ಹಗಲಿನಲ್ಲೂ ನಿಮ್ಮ ನೆನಪೆ ನನ್ನನ್ನು ಹಿಂಡುತ್ತಿದೆ. ಇರುಳಿನಲಿ ನಿಮ್ಮದೆ ಕನಸನ್ನು ಕಾಣುತ್ತಿರುವೆ, ಮನಸ್ಸೆಲ್ಲವೂ ನಿಮ್ಮಲ್ಲಿಯೇ ಇದೆ. ನನ್ನ ತನು ಮಾತ್ರ ನನ್ನ ತವರೂರಿನಲ್ಲಿದೆ. ನನ್ನ ಪ್ರೀತಿಯನ್ನು ತಾನೇ ಪರೀಕ್ಷಿಸಿಕೊಳ್ಳುತ್ತಿರುವೆ ಹಾಗೆ ಹಾಗಿದೆ. ತಾಯಿ ಮಾಡಿಕೊಡುವ ಅಡುಗೆ ರುಚಿ ರುಚಿಯಾಗಿರುತ್ತೆಂದು ನಾನಿಲ್ಲಿ ಕುಳಿತಿಲ್ಲ, ನನ್ನ ತಂಗಿಯ ಮದುವೆ ಇನ್ನೊಂದು ತಿಂಗಳಿದೆ ಹಾಗಾಗಿ ನಾನು ತೌರ ಪಂಜರದಲ್ಲಿ ಸೆರೆಯಾಗಿಲ್ಲ ನಿಮ್ಮ ಐದು ತಿಂಗಳ ಕಂದ ನಗುನಗುತ್ತಾ ಬೆಳೆಯುತ್ತಿದೆ ಎನ್ನುತ್ತಿದ್ದಾಳೆ.

ಹೆಣ್ಣು ಗರ್ಭವತಿಯಾಗಿ ಮಗುವಾಗುವ ಸಂದರ್ಭದಲ್ಲಿ ಬಾಣಂತನಕ್ಕೆಂದು ತವರಿಗೆ ತೆರಳುವುದು ಸಂಪ್ರದಾಯವಾಗಿದೆ. ಅದೇ ಸಂದರ್ಭದಲ್ಲಿ ಮಗುವಿನ ಆರೈಕೆಗಾಗಿ ಸುಖವಾಗಿ ನೋಡಿಕೊಳ್ಳುತ್ತಾರೆ. ಹಾಗಾಗಿಯೇ ಆ ಸತಿ ತನ್ನ ಪತಿಗೆ ತವರಿನ ಸಿರಿಯಲ್ಲಿ ನಿಮ್ಮನ್ನು ಮರೆತಿದ್ದಾಳೆಂದು ತಿಳಿಯಬೇಡಿ ಎಂದಿದ್ದಾರೆ. ಮಗುವಿನ ಆರೈಕೆಯ ಜೊತೆಗೆ ತನ್ನ ತಂಗಿಯ ವಿವಾಹವನ್ನು ಮುಗಿಸಿಕೊಂಡು ಹೋಗಬೇಕೆಂಬುದು ಅವಳ ಆಸೆಯಾಗಿರುವುದನ್ನು ನಾವು ಇಲ್ಲಿ ಗಮನಿಸಬಹುದು.

ಕವಿ ಕವನ ರಚಿಸುವ ಸಂದರ್ಭದಲ್ಲಿ ಸಂಪರ್ಕ ಮಾಧ್ಯಮಗಳಲ್ಲಿ ತೀವ್ರ ಗತಿಯಲ್ಲಿ ಬದಲಾವಣೆ ಆಗಿಲ್ಲವೆಂದೆನಿಸುತ್ತದೆ. ಹಾಗಾಗಿ ಕವಿ ಪತ್ರ ವಿಚಾರ ವಿನಿಮಯಕ್ಕೆ ಪತ್ರವನ್ನು ಸೇತುವೆಯಾಗಿ ಈ ಕವನದಲ್ಲಿ ತೆಗೆದುಕೊಂಡಿದ್ದಾರೆ.

ಸೋಬಲಕ್ಕಿಯನಿಟ್ಟು ಹೂಮುಡಿಸಿ ಕಳುಹುವರು
ಕಂದನಿಗೆ ಹೊಸ ಜರಿಯ ಲಂಗವುಡಿಸಿ.
ತಂದೆಯವರೇ ಬಂದು ತಪ್ಪಾಯಿತೆನ್ನುವರು
ಹೆಣ್ಣ ಹೆತ್ತರವನ್ನು ದೂರಬೇಡಿ.

ನಮ್ಮ ಸಂಸ್ಕೃತಿಯಲ್ಲಿ ಹೆಣ್ಣು ಮಗಳು ತವರಿಗೆ ಬಂದು ಹಿಂದಿರುಗುವಾಗ ಅಕ್ಕಿ, ಬೆಲ್ಲವನ್ನು ಅವಳ ಸೆರಗಿನಲ್ಲಿಟ್ಟು ಹೂಮೂಡಿಸಿ, ಅವಳ ತಲೆ ಮೇಲೆ ಅಕ್ಷತೆ ಹಾಕಿ ಆಶೀರ್ವಾದ ಮಾಡುವುದರ ಜೊತೆಗೆ ಮಗುವಿಗೆ ಕಿವಿಯನ್ನು ಚುಚ್ಚಿಸುವ, ಹೊಸ ಜರಿಯ ಬಟ್ಟೆ ತರುವ ಸಂಪ್ರದಾಯವಿದೆ. ಜೊತೆಗೆ ಹೆಣ್ಣು ಕೊಟ್ಟ ತವರು ಮನೆಯವರು ಯಾರದೇ ತಪ್ಪಿದ್ದರೂ ಗಂಡನ ಮನೆಯವರ ಜೊತೆ ಕ್ಷಮೆ ಕೇಳುವುದು ಮಗಳ ಮೇಲಿನ ಪ್ರೀತಿಯನ್ನು ತಿಳಿಸುತ್ತದೆ. ಹಾಗಾಗಿ ತನ್ನ ತಂದೆ ಕ್ಷಮೆ ಕೇಳಿದರೆ ಅವರನ್ನು ದೂರಬೇಡಿ ಎಂದು ಕೇಳಿಕೊಳ್ಳುತ್ತಿದ್ದಾಳೆ.

ಹೀಗೆ ಈ ಕವನದಲ್ಲಿ ಕವಿ ಗಂಡನನ್ನು ಬಿಟ್ಟು ಇರಲಾರದ ಹೆಂಡತಿಯ ಪ್ರೀತಿ, ವಿರಹ ಮತ್ತು ತವರಿನ ಮೇಲೆ ಇರುವ ಮೋಹ, ನಮ್ಮ ಸಂಸ್ಕೃತಿಯ ಕೆಲವು ಆಚರಣೆಗಳನ್ನು ಈ ಕವನದ ಮೂಲಕ ತಿಳಿಸಿರುವುದನ್ನು ಕಾಣಬಹುದು.

ಹೀಗೆ ಕೆ.ಎಸ್.ನ ರವರ ಇನ್ನೂ ಅನೇಕ ಕವನಗಳಲ್ಲಿ ಸತಿ– ಪತಿಯರ ವಿರಹಕ್ಕೆ ಸಂಬಂಧಿಸಿದ ಕವನಗಳಿರುವುದನ್ನು ಗಮನಿಸಬಹುದು.

೪.೪. ದಾಂಪತ್ಯ ಸಮಸ್ಯೆಗಳು

ಕೆ.ಎಸ್.ನರಸಿಂಹಸ್ವಾಮಿಯವರು ಮೊದಲೇ ತಿಳಿಸಿರುವಂತೆ ದಾಂಪತ್ಯ ಕವಿ ಎಂದೇ ಪ್ರಸಿದ್ಧಿ ಪಡೆದಿದ್ದಾರೆ. ಅವರು ರಮ್ಯ ಕಾಲದಲ್ಲಿ ರಚಿಸಿದ ಕವನಗಳಲ್ಲಿ ದಾಂಪತ್ಯ ಜೀವನದ ಹಲವು ಮುಖಗಳನ್ನು ಗಮನಿಸಬಹುದು. ಅದರಲ್ಲಿಯೂ ಪ್ರೇಮ ವಿರಹಗಳೆಲ್ಲವನ್ನು ಹೇಳುವುದರ ಜೊತೆಗೆ ದಾಂಪತ್ಯದ ಬದುಕಿನಲ್ಲಿ ಪ್ರೇಮದ ಸಿಹಿ ಮಾತ್ರವೇ ತುಂಬಿರುವುದಿಲ್ಲ, ಆದರಲ್ಲಿ ಸಮಸ್ಯೆಗಳೆಂಬ ಕಹಿಯು ತುಂಬಿರುತ್ತದೆ ಎಂಬುದನ್ನು ತಿಳಿಸಿದ್ದಾರೆ.

ದಾಂಪತ್ಯ ಬದುಕು ಅಥವಾ ಸಾಗರವನ್ನು ಈಜುವುದು ಬಹಳ ಕಷ್ಟದ ಕಾರ್ಯವೆಂದೇ ಹೇಳಲಾಗುತ್ತದೆ. ಅದರಲ್ಲಿಯೂ, "ಸಂಸಾರ ಭಾರ ಹೆಣಭಾರ" ಎಂಬ ನಾಣ್ಣುಡಿಯಿರುವುದನ್ನು ಗಮನಿಸಬಹುದು. ಮನುಷ್ಯ ಬದುಕಿದ್ದಾಗ ಇರುವ ತೂಕ ಅವನು ಸತ್ತ ಮೇಲೆ ಇನ್ನೂ ಹೆಚ್ಚಾಗುತ್ತದೆ. ಹಾಗೆ ಸಂಸಾರವು ಕೂಡಾ ಹೆಣದಂತೆ ಭಾರವಾಗಿರುತ್ತದೆ ಎಂದು ಅದರ ಇನ್ನೊಂದು ಮುಖವನ್ನು ದರ್ಶನ ಮಾಡಿಸಿದ್ದಾರೆ. ಅದಕ್ಕಾಗಿಯೇ ಸಂಸಾರದಲ್ಲಿ ವಿರಸಗಳು ಸಾಮಾನ್ಯವಾಗಿರುತ್ತವೆ, ಆ ಸಮಯದಲ್ಲಿ ಹೆಣ್ಣು ಗಂಡು ಇಬ್ಬರು ಜೊತೆಯಾಗಿ ಸಮಸ್ಯೆಯನ್ನು ಎದುರಿಸುತ್ತಾ ಅವುಗಳನ್ನು ಬಗೆಹರಿಸಿಕೊಳ್ಳಬೇಕು, ಹಾಗಾದಾಗಲೇ ದಾಂಪತ್ಯಬದುಕು ಪರಿಪೂರ್ಣವಾಗುತ್ತದೆ. ಇಲ್ಲವಾದರೆ ಕೌಟುಂಬಿಕ ವೈಮನಸ್ಸು ತಲೆದೋರಿ ದಾಂಪತ್ಯ ಜೀವನವೇ ಮುರಿದು ಬೀಳಬಹುದು. ಹಾಗಾಗಿ ಕೆ.ಎಸ್.ನ ರವರ ಕವನಗಳಲ್ಲಿ ರಮ್ಯ ನಾಟಕದ ದೃಶ್ಯಗಳು ಮರೆಯಾಗಿ ಕ್ರಮೇಣ ಸಾಂಸಾರಿಕ ಬದುಕಿನ ಸಂಘರ್ಷಗಳು ಹೇಗೆ ರಂಗ ಪ್ರವೇಶ ಮಾಡಿವೆ ಎಂಬುದನ್ನು ಈ ಕೆಳಗಿನಂತೆ ಗಮನಿಸಬಹುದು.

"ದೀಪದ ಮಲ್ಲಿ" ಕವನ ಸಂಕಲನದ **"ಸಂಬಳದ ಸಂಜೆ"** ಕವನದಲ್ಲಿ ಸಂಸಾರದ ಜವಾಬ್ದಾರಿ ಹೊತ್ತಿರುವ ವ್ಯಕ್ತಿಯ ಆರ್ಥಿಕ ಪರಿಸ್ಥಿತಿ ಹೇಗಿರುತ್ತದೆ ಎಂಬುದನ್ನು ಕವಿ ಪರಿಚಯ ಮಾಡಿಕೊಟ್ಟಿದ್ದಾರೆ.

ಕವಿ ಬಾರೆ ನನ್ನ ಶಾರದೆ ಕವನದಲ್ಲಿ
"ಒಂದು ಹೆಣ್ಣಿಗೊಂದು ಗಂಡು
ಹೇಗೋ ಸೇರಿ ಹೊಂದಿಕೊಂಡು
ಕಾಣದೊಂದು ಕನಸ ಕಂಡು
ಮಾತಿಗೊಲಿಯದಮೃತವುಂಡು.

ಎಂದು ಸಂತೋಷದಲ್ಲಿದ್ದ ದಂಪತಿಗಳನ್ನು ಸಾಂಸಾರಿಕ ಬದುಕಿನ ದಿನ ನಿತ್ಯದ ಸಾಮಾನ್ಯ ಸಮಸ್ಯೆಗಳು ಕನಸಿನ ಲೋಕದಿಂದ ವಾಸ್ತವ ಜಗತ್ತಿಗೆ ಎಳೆದು ತರುತ್ತಿರುವುದನ್ನು ಈ ಕವಿತೆ ಚಿತ್ರಿಸುತ್ತದೆ.

ಸಂಬಳದ ಸಂಜೆ ಒಳಜೇಬು ಬೆಳಕಾಗಿರಲು
ಮುಗುಳು ನಗೆ ಸೂಸಬೇಕು।
ತಂದ ಹಣ ತುಂಡಾಗಿ ತಲೆ ನೋವು ಬಂದಿರಲು
ಮಂದಲಗೆ ಹಾಸಬೇಕು।

ಕವಿ ಈ ಕವನದಲ್ಲಿ ಒಂದು ಮಧ್ಯಮ ವರ್ಗದ ಕುಟುಂಬದ ಮತ್ತು ಅದರ ಯಜಮಾನನಾರಾಗಿರುವನ ಆರ್ಥಿಕ ಸ್ಥಿತಿ ಹೇಗಿರುತ್ತದೆಂಬುದನ್ನು ತಿಳಿಸುತ್ತಿದ್ದಾರೆ. ಅಂದು ತಿಂಗಳ ಸಂಬಳ ಪಡೆದ ದಿನ, ಜೇಬಿನಲ್ಲಿ ಹಣವಿರುವುನ್ನು ನೋಡಿ ಮುಗುಳುನಗೆ, ಸೂಸುತ್ತಿರಬೇಕು. ಆದರೆ ತಂದ ಹಣವೆಲ್ಲ ಸಂಸಾರದವರ ದೈನಂದಿನ ಅವಶ್ಯಕತೆಗಳಿಗಾಗಿ, ಖರ್ಚು ಆಗಿ, ಕೊನೆಗೆ ಹಣ ಉಳಿಯದೆ, ಹ್ಯಾಪು ಮೋರೆ ಹಾಕಿಕೊಂಡು ಮಲಗಬೇಕು ಎಂದು ಹೇಳುತ್ತಾ ಆ ಖರ್ಚುಗಳು ಯಾವುವು ಎಂದು ಹೀಗೆ ತಿಳಿಸುತ್ತಾರೆ.

ಏಳಡಿಯ ಕಿರುಮನೆಗೆ ಇಪ್ಪತ್ತು ರೂಪಾಯಿ
ಬಾಡಿಗೆ ಚಾಚಬೇಕು।

ಸಂಬಳವನ್ನು ಕವನದ ನಾಯಕ ಪಡೆದು ಆತನು ಇರುವ ಬಾಡಿಗೆ ಮನೆಗೆ ಇಪ್ಪತ್ತು ರೂ.ಕೊಡಬೇಕಾಗಿರುತ್ತದೆ.ಆದರೆ ಇಂದು, ನಾವು ಊಹಿಸಲು ಸಾಧ್ಯವಿಲ್ಲದ ಪರಿಸ್ಥಿತಿ ಇದೆ, ಆದರೆ ಬಾಡಿಗೆ ಮಾತ್ರ! ಸಾವಿರಗಳಿಗೂ ಹೆಚ್ಚಾಗಿ ಇರುತ್ತದೆ.

ನೀರು ಹತ್ತುವುದಿಲ್ಲ, ದೀಪ ಉರಿಯುವುದಿಲ್ಲ, ಆ ಮನೆಯಲ್ಲಿ ಮಗುವಿಗೆ ತೊಟ್ಟಿಲನು ಕಟ್ಟಿದರೆ, ಮಂಚಕ್ಕೆ ಸ್ಥಳವಿರುವುದಿಲ್ಲ, ಟ್ರಂಕ್, ಒನಕೆ ಎಲ್ಲಾ ಸುತ್ತ ಇವೆ, ಇಂತಹ ಸೌಲಭ್ಯಗಳಿಲ್ಲದ ಮನೆಗೆ ಇಪ್ಪತ್ತು ರೂ ನೀಡಬೇಕು, ಎಂದು ನಾಯಕ ವ್ಯಥೆ ಪಡುತ್ತಿದ್ದಾರೆ.

ಇನ್ನು ಹಾಲಿನ ಲೆಕ್ಕ ಮೂವತ್ತು ಬೊಟ್ಟುಗಳು
ಬಾಡಿಗೆಯ ಕೊಟ್ಟು ಭಾಗಿರಥಿಯ ದಾಟಿದೆನು;
ಇನ್ನು ಉಸಿರಾಡಬಹುದೆ?
ಸೀರೆಯಂಗಡಿಯವನು ಕೈಮುಗಿದು ನಿಂತಿಹನು;
ಎಷ್ಟು ಸಲ 'ನಾಳೆ, ನಾಳೆ.'

ಬಾಡಿಗೆಯನ್ನು ಕೊಟ್ಟು ಇಲ್ಲಿಗೆ ಮುಗಿಯಿತು ಎನ್ನುವಷ್ಟರಲ್ಲಿ ಸೀರೆಯಂಗಡಿಯವನು ಕೈಮುಗಿದು ನಿಂತು ಇನ್ನು ಎಷ್ಟು ಬಾರಿ ನಾಳೆ ನಾಳೆ ಎಂದು ಹೇಳುತ್ತೀರಿ ಹಣ ನೀಡಿ ಎನ್ನುತ್ತಾನೆ.

ಜೊತೆಗೆ ಹಾಲಿನ ಲೆಕ್ಕ ತಿಂಗಳಿಗೆ ಮೂವತ್ತು ದಿನಕ್ಕೆ ಒಂದು ನೋಟು ಕೊಡಬೇಕು, ಜೊತೆಗೆ ತರಕಾರಿಯಂಗಡಿಯವಳು ಬಂದು ಗೋಡೆಯಲ್ಲಿ ಬರೆದಿದ್ದ ಹತ್ತು ಗೀಟು ತೋರಿಸಿ ಹಣ ಕೇಳುತ್ತಿದ್ದಾಳೆ. ಇವರೆಲ್ಲರಿಗೂ ಹಣ ನೀಡುತ್ತಾನೆ. ಸಂಸಾರವೆಂದರೆ ಖರ್ಚು ಒಂದಾ ಎರಡಾ, ನೂರಾರು ಇರುತ್ತವೆ, ಎಂಬುದನ್ನು ಕವಿ ಇಲ್ಲಿ ತಿಳಿಸುತ್ತಿದ್ದಾರೆ.

ಬಳೆಗಾರ ಬಂದ–'ತಾಯೀ!' ಎಂದ–(ಅವಳಿಲ್ಲ),
ಕೆಮ್ಮುವುದು ಪಾಪ! ಪ್ರಾಣಿ;
ಇವನದನು ಕೊಟ್ಟುಬಿಡುವೆನು ಚರ್ಚೆ ಬೇಕಿಲ್ಲ;
ನೊಂದಾಳು ನನ್ನ ರಾಣಿ,

ಕುಟುಂಬದ ಯಜಮಾನ ತಾನು ಎಲ್ಲರಿಗೂ ಹಣ ನೀಡುವಾಗ ಪತ್ರಿಕೆ ಹಾಕುವ ಹುಡುಗ ಬಂದು ಸೈಕಲ್ ಶಬ್ದ ಮಾಡುತ್ತಿರುವುದನ್ನು ಗಮನಿಸಿ ಆತನಿಗೆ ಪತ್ರಿಕೆಯ ಸಂಪಾದಕೀಯದಲ್ಲಿ ನೂರಾರು ತಪ್ಪುಗಳಿವೆ ನಾನು ಹಣ ಕೊಡುವುದಿಲ್ಲ ಎಂದು ಹೇಳಿ ಬಿಡೋಣ ಅಂದುಕೊಳ್ಳುತ್ತಾರೆ, ಆದರೂ ಹಾಗೆ ಮಾಡದೆ ದುಡ್ಡು ಕೊಡುತ್ತಾರೆ. ಆನಂತರ ಮನೆ ಬಾಗಿಲಿಗೆ ಬಳೆಗಾರ ಬಂದು ಕೆಮ್ಮಿದಾಗ ಚರ್ಚೆ ಮಾಡದೆ ತನ್ನ ರಾಣಿ ನೊಂದಾಳೆಂದು ಹಣ ನೀಡುತ್ತಾನೆ. ಈವರೆಗೆ ಎಲ್ಲ ಸಂದರ್ಭದಲ್ಲಿಯೂ ಪತ್ರಿಕೆ ಹುಡುಗನಿಗೆ, ಬಾಡಿಗೆಗೆ, ತರಕಾರಿಯವಳಿಗೆ ಹಣ ಕೊಡಲು ಹಿಂಜರಿಯುತ್ತಾ ಚರ್ಚೆಮಾಡುತ್ತಿದ್ದವನು ಈ ಬಳೆಗಾರನ ಜೊತೆ ಮರುಮಾತಾನಾಡದೆ ಹಣ ನೀಡುವ ಸಂದರ್ಭ ಪ್ರೀತಿಗೆ ನಿದರ್ಶನವಾಗಿ ನಿಲ್ಲುತ್ತದೆ.

ಹೀಗೆ ಸಂಬಳ ತಂದ ದಿನವೇ ಹಣವನ್ನೆಲ್ಲವನ್ನು ತಿಂಗಳಿನಿಂದ ಮಾಡಿದ ಸಾಲಗಳನ್ನು ತೀರಿಸಲು ಕೊಡುತ್ತಿರುವುದನ್ನು ಗಮನಿಸಬಹುದು.

ಕವಿ ಇಲ್ಲಿ ಕೇವಲ ಒಂದು ಸಂಸಾರದ ಚಿತ್ರಣವನ್ನು ನೀಡುತ್ತಿದ್ದರೂ ಅದು ಇಡೀ ಮಧ್ಯಮ ವರ್ಗದ ಜನರ ಬದುಕಿನ ಚಿತ್ರಣವನ್ನು ನೀಡುತ್ತಿದ್ದಾರೆ ಎನ್ನಿಸುತ್ತದೆ.

"ದೀಪದ ಮಲ್ಲಿ" ಕವನ ಸಂಕಲನದ "ನಿಮ್ಮ ಸಂಸಾರ ಇದು" ಎಂಬ ಕವನದಲ್ಲಿ ಪ್ರೇಮದ ಜಗತ್ತಿಗಿಂತ ಭಿನ್ನವಾದ ಜಗತ್ತನ್ನು ಚಿತ್ರಿಸಿದ್ದಾರೆ. ದಾಂಪತ್ಯಕ್ಕೆ ಸಂಬಂಧಿಸಿದಂತೆ ಹುಸಿ ಮುನಿಸು, ಪ್ರೇಮ ಕಲಹಗಳನ್ನು ಇದರಲ್ಲಿ ಕಾಣಬಹುದು.

ಬೆಳಗಾದರೆ ಸಂಜೆಯಾದರೆ ಮಾತೆತ್ತಿದರೆ ಸುಮ್ಮನಿದ್ದರೆ-
ನಿನ್ನ ಮನೆ ನಿನ್ನ ಮಗು ನಿನ್ನ ಸಂಸಾರ ಇದು
ನಿನ್ನ ನಿನ್ನದು ನಿನಗೆ ನೀನೆಲ್ಲ ಎನ್ನುವಿರೆ,-
ನಿರ್ಗುಣ ಬ್ರಹ್ಮವೇ ನೀವು? ಏನಿರೀ ಮಾತು?

ಸಂಸಾರದ ಬದುಕಿಗೆ ಗಂಡ ಹೆಂಡತಿ ಇಬ್ಬರೂ ಪಾಲುದಾರರಾಗಿರುತ್ತಾರೆ. ಇದರಲ್ಲಿ ಯಾರೂ ಇದು ಯಾರೊಬ್ಬರಿಗೆ ಸಂಬಂಧಿಸಿದ ವಿಷಯ ಎಂದು ಜವಬ್ದಾರಿಗಳಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ಹಾಗಾಗಿ ಈ ಕವನದಲ್ಲಿ ಹೆಂಡತಿ ಗಂಡನಿಗೆ ತರಾಟೆ ತೆಗೆದುಕೊಂಡಿದ್ದಾಳೆ. ಹೆಂಡತಿಯನ್ನು ಕುರಿತು ಈ ಸಂಸಾರ, ಮನೆ ಎಲ್ಲವು ನಿನ್ನದೇ, ನೀನೇ ಜವಾಬ್ದಾರಳು ಎನ್ನುವ ಗಂಡನ ಮಾತನ್ನು ಖಂಡಿಸುತ್ತಾ ಎಲ್ಲವು ನಿನ್ನದೇ ಎಂದು ಹೇಳುವ ನೀವು ಬ್ರಹ್ಮನಿಗೆ ಸಮನಾದವರೆ, ಏನಿದು ನಿಮ್ಮ ಮಾತು, ವರ್ತನೆ ಎಂದು ಎಚ್ಚರಿಸುತ್ತಿದ್ದಾಳೆ.

ಕಟ್ಟಿದಿರಿ ಹೆಣ್ಣು ಹದವೆಂದು – ಓಡಾಡುವಿರಿ
ಊರೂರ ಮೇಲೆ, ದಾರಿಯಿರಲಿ ಇಲ್ಲದಿರಲಿ!
ಬಿಡಿ ಬಿಡಿರಿ ಎಂಥ ಮಾತಿದು, ನಿಮ್ಮ ಸಂಸಾರ
ಎಂದೆಂದಿಗೂ ನಿಮ್ಮದಾಗಿ, ಅದರಂಚಿನಲಿ
ಕಟ್ಟಿಹೆನು ಒಂದು ತೊಟ್ಟಿಲನು.

ಹೆಂಡತಿ ಗಂಡನಿಗೆ ಹೇಳುತ್ತಾ ಸಂಸಾರ ನಿನ್ನದು ಎಂದು ಹೇಳುವ ನೀವು ಅಧಿಕಾರವನ್ನು ಮಾತ್ರ ಚಲಾಯಿಸುತ್ತೀರಿ. ಸಂಸಾರ ನನ್ನದು ನಿನ್ನದು ಅಲ್ಲ ನಮ್ಮಿಬ್ಬರದು. ಆ ಭಗವಂತನ ಇಚ್ಛೆಯಂತೆ ನಾವಿಬ್ಬರು ಸೇರಿದ್ದೇವೆ. ದಾರಿ ಇರಲಿ ಇಲ್ಲದಿರಲಿ, ನಾವಿಬ್ಬರೂ ಜೊತೆಯಾಗಿ ಹೋಗಬೇಕು ನಿಮ್ಮ

ಪ್ರೀತಿಯಿಂದ ಒಂದು ತೊಟ್ಟಿಲನು ಕಟ್ಟಿದ್ದೇನೆ, ಅದರೊಂದಿಗೆ ಬಣ್ಣಬಣ್ಣದ ಕನಸುಗಳು ಕೂಡಿವೆ. ಇದು ನಿನ್ನದು ಎನ್ನುವ ಶಬ್ದ ಬಿಟ್ಟು ಒಲವಿನಿಂದ ನಮ್ಮೊಡನೆ ಬಾಳಿ ಎಂದು ಹೇಳುತ್ತಿದ್ದಾಳೆ.

'ಒಲುಮೆಯೊಳಗೊಂದು ನಾವು, ನಮಗಿಲ್ಲ ಸಾವುನೋವು' ಎಂದು ಉತ್ಸಾಹದಿಂದ ಹಾಡಿದ ರೀತಿಗೂ ಇಲ್ಲಿಗೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ಅಲ್ಲಿ ಇಬ್ಬರು ಸೇರಿ ಒಲುಮೆಯ ಗೀತೆ ಹಾಡಿದರು, ಆದರೆ ಈ ಕವನದಲ್ಲಿ **'ಒಲುಮೆ'** ಕುರಿತ ಪಾಠವನ್ನು ಹೆಂಡತಿ ಮಾಡುತ್ತಿದ್ದಾಳೆ.

'ಹೆಣ್ಣು' ಕೆ.ಎಸ್.ನ ಅವರ ಕಾವ್ಯದಲ್ಲಿ ಕೇವಲ ಶೃಂಗಾರದ ಪಾತ್ರವಾಗಿಯೋ ಅಥವಾ ಚೆಲುವಿನ ಗೊಂಬೆಯಾಗಿಯೋ ಮಾತ್ರ ಬರುವುದಿಲ್ಲ. ಅವಳಿಗೂ ಒಂದು ವ್ಯಕ್ತಿತ್ವವಿದೆ. ಕನ್ನಡ ಕಾವ್ಯದಲ್ಲಿ ಬಹುಶಃ ಹೆಣ್ಣು ಇಂಥ ಒಂದು ಗಟ್ಟಿ ವ್ಯಕ್ತಿತ್ವವನ್ನು ಪ್ರಕಟಿಸಿರುವುದು ಮುದ್ದಣ್ಣ ಮನೋರಮೆಯನ್ನು ಬಿಟ್ಟರೆ ಕೆ.ಎಸ್.ನ ಅವರ ಕವನದಲ್ಲಿಯೇ ಎನ್ನಬಹುದು. ಮುದ್ದಣ್ಣನ ಮನೋರಮೆಯೂ ಕೂಡ ಕಾವ್ಯಕ್ಕೆ ಸಂಬಂಧಿಸಿ ವಿಮರ್ಶೆ ಮಾಡುವಂಥವಳು. ಆದರೆ ಈ ಕೆ.ಎಸ್.ನ ಅವರ ಕಾವ್ಯ ನಾಯಕಿ ಈ ಬದುಕನ್ನು ಹಂಚಿಕೊಳ್ಳುವಂಥವಳು. ವಸ್ತು ಸ್ಥಿತಿಯನ್ನು ತೆರೆದ ಮನಸ್ಸಿನಿಂದ ಯಾವ ಭೀತಿಯೂ ಇಲ್ಲದೆ ವಿಶ್ಲೇಷಿಸುವಂಥವಳು ಆಗಿದ್ದಾಳೆ. ಅವಳ ತಣ್ಣನೆಯ ಮಾತುಗಳಲ್ಲಿ ಇರುವ ಅಸಮಾಧಾನದ ತೀವ್ರತೆಯನ್ನು ಗಮನಿಸಿದರೆ ಅವಳ ಮಾತುಗಳಲ್ಲಿ ದ್ವೇಷದ ಭಾವವಿಲ್ಲ, ಸ್ವಾನುಕಂಪೆಯ ಧಾಟಿಯಿಲ್ಲ, ಬಾಳ ಸಂಗಾತಿಯೊಬ್ಬಳು ವಸ್ತುಸ್ಥಿತಿಯನ್ನು ತಿಳಿಸಿ ಹೇಳುವ ಪರಿಯಲ್ಲಿ ಇಲ್ಲಿನ ರೀತಿಯಿದೆ ಎನ್ನಬಹುದು. ಸಾತ್ವಿಕವೆನ್ನಬಹುದಾದ ರೀತಿಯಲ್ಲಿಯೇ ಪ್ರಕಟವಾಗಿರುವ ಈ ಪ್ರತಿಭಟನೆಯ ಹಿಂದೆ ಇರುವ ಗಟ್ಟಿತನವನ್ನು ನಾವು ಗಮನಿಸಿದರೆ ತಪ್ಪು ಮಾಡಿದ ಗಂಡನನ್ನು ಹಿಡಿದೆಳೆತಂದು ನಿಲ್ಲಿಸಿ ನೇರ ಮಾತುಗಳಲ್ಲಿ ವಾಸ್ತವ ಸತ್ಯವನ್ನು ಹೇಳುತ್ತಿರುವ ಪ್ರತಿಭಟನೆಯ ದನಿ ಅವಳ ಕೌಟುಂಬಿಕ ಒಲವಿನ ಪ್ರಜ್ಞೆಯನ್ನು ತೋರಿಸುತ್ತದೆ.

ಹತ್ತಾರು ವರುಷ ಸಂಸಾರ ಮಾಡಿದ ಮೇಲೆ
ಏನಿದೀ ಹಗಲ ಸನ್ಯಾಸ? ಹತ್ತಿರ ಬಂದು
ಆಡಿದ್ದು ತಪ್ಪುಮಾತೆಂದು, ಕಂದನ ತುಟಿಗೆ
ಮುತ್ತಿಟ್ಟು ಎದ್ದು ಹೋಗಿರಿ, ಸಾಕು ಈ ಮಾತು,–
ಹೆಣ್ಣ ಕಣ್ಣೀರಿನಲಿ ಮನೆಮಾರು ತೆಪ್ಪತೇಲೀತು!

ದಾಂಪತ್ಯದ ಮಹತ್ವವನ್ನು, ಪ್ರಾಮುಖ್ಯತೆಯನ್ನು ಒಪ್ಪಿಕೊಂಡ ನಿಲುವಿನಿಂದ ಬಂದ ಮಾತುಗಳಿವು. ನೋವು ಹದಗೊಂಡು ಮೂಡಿದ ಪ್ರತಿಭಟನೆಯ ತುದಿಯಲ್ಲಿ ಹೊಂದಿಕೊಂಡು ಬಾಳುವ ಹಂಬಲವಿದೆ. ಸಂಸಾರದಲ್ಲಿ 'ಹೊಂದಾಣಿಕೆ' ಎಂಬುದು ಗಂಡ-ಹೆಂಡತಿ ಇಬ್ಬರ ಜವಾಬ್ದಾರಿಯೂ ಹೌದು. ಎಷ್ಟೇ ಕಷ್ಟ ಬಂದರೂ ಗಂಡ ಎಂಥವನೇ ಆದರೂ ಹೆಣ್ಣು ಹೊಂದಿಕೊಂಡು ಹೋಗಬೇಕೆಂಬ ಸಾಂಪ್ರದಾಯಿಕ ನಿಲುವಿಗಿಂತ ಭಿನ್ನವಾದ ಈ ನಿಲುವು ಸಂಸಾರದಲ್ಲಿ ಗಂಡಿನ ಪಾತ್ರವನ್ನೂ ತಿಳಿಸಿ ಹೇಳುವ ರೀತಿಯಲ್ಲಿದೆ. ಅಧಿಕಾರ ಚಲಾಯಿಸಿ 'ಯಜಮಾನರು' ಎನಿಸಿಕೊಳ್ಳುವ ಗಂಡು ಹೆಣ್ಣಿನ ಮನಸ್ಸನ್ನು, ಅವಳ ಸ್ಥಿತಿಯನ್ನು ಅರ್ಥಮಾಡಿಕೊಂಡು ನಡೆದುಕೊಳ್ಳಬೇಕೆನ್ನುವ 'ಅರಿವು' ಈಕೆಗೆ ಅನುಭವದಿಂದಲೇ ಮೂಡಿ ಬಂದಿರುವಂಥದ್ದು. ಆದ್ದರಿಂದಲೇ ಈಕೆ ಗಂಡನಿಗೆ ವಿವಾಹವಾಗಿ ಹತ್ತು ವರ್ಷಗಳಾದ ಮೇಲೆ ಏಕೆ ಈ ರೀತಿಯ ವೇಷದಾರಿ ಸನ್ಯಾಸಿಯಂತೆ ನಟಿಸುತ್ತಿದ್ದೀರಾ? ನೀವು ಹೇಳುವ ಮಾತು ತಪ್ಪೆಂದು ಹೇಳಿ ಕಂದನ ತುಟಿಗೆ ಮುತ್ತಿಟ್ಟು ಹೋಗಿರಿ ಸಾಕು, ನನ್ನನ್ನು ಸಂತೈಸುವುದು ಬೇಡ, ನನಗೆ ತೋರಿಸುವ ಪ್ರೀತಿಯನ್ನು ನಿಮ್ಮ ಪ್ರತಿರೂಪವಾದ ನಿಮ್ಮ ಕಂದನ ಮೇಲೆ ತೋರಿರೆಂದು ಕೇಳಿಕೊಳ್ಳುತ್ತಿದ್ದಾಳೆ. ಇಲ್ಲಿ ಸಂಸಾರದ ಚೆಲುವು ಹಾಳಾಗಬಾರದೆಂಬ ಉದ್ದೇಶದಿಂದ ಹೀಗೆ ಹೇಳುತ್ತಿದ್ದಾಳೆ.

ಪ್ರೀತಿಯ ಗಟ್ಟಿ ಎಳೆಯ ಮೂಲಕ ಸಂಬಂಧಗಳನ್ನು ಹಸನುಗೊಳಿಸಲು ನೋಡುವ ಈಕೆ, ತನ್ನನ್ನು ಎತ್ತರದ ಸ್ಥಾನದಲ್ಲಿಟ್ಟುಕೊಳ್ಳದೆ ಸಂಸಾರದಲ್ಲಿ ಬರಬಹುದಾದ ತೊಂದರೆಗಳನ್ನು, ಗಂಡನಲ್ಲಿ ಮೂಡಿರುವ ಭಿನ್ನಾಭಿಪ್ರಾಯಗಳನ್ನು ಪ್ರೀತಿಯಿಂದಲೇ ಬಗೆಹರಿಸಿಕೊಳ್ಳಬೇಕೆಂಬ ನಿಲುವನ್ನು ಪ್ರಕಟಿಸಿದ್ದಾಳೆ.

ಕೆ.ಎಸ್.ನ ಅವರ 'ಮೈಸೂರ ಮಲ್ಲಿಗೆ' ಕವನ ಸಂಕಲನದ ಬಳೆಗಾರನ ಹಾಡು ಕವನದಲ್ಲಿ ಕವಿ ಹಿಂದಿನ ಜನಪದರ ಬದುಕಿನ ಒಂದು ಸಾಂಸ್ಕೃತಿಕ ಸಂಪ್ರದಾಯವನ್ನು ತಿಳಿಸುತ್ತಿದ್ದಾರೆ. ಗಂಡ-ಹೆಂಡತಿಯ ನಡುವಿನ ವಿರಸದ ಸಂದರ್ಭದಲ್ಲಿ ಅವರಿಬ್ಬರನ್ನು ಒಂದಾಗಿ ಮಾಡುವಲ್ಲಿ ಸೇತುವೆಯಾಗಿರುವ ಬಳೆಗಾರನ ಚಿತ್ರಣ ಇಲ್ಲಿದೆ.

ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿಹೆನು
ಒಳಗೆ ಬರಲಪ್ಪಣೆಯ ದೊರೆಯೇ?
ನವಿಲೂರ ಮನೆಯಿಂದ ನುಡಿಯೊಂದ ತಂದಿಹೆನು
ಬಳೆಯ ತೊಡಿಸುವುದಿಲ್ಲ ನಿಮಗೆ.

ನಾಗರಿಕತೆಗೆ ಜನರು ಹೊಂದಿಕೊಳ್ಳುವ ಮೊದಲು ತಮ್ಮದೇ ಆದ ಸಂಸ್ಕೃತಿ, ಸಂಪ್ರದಾಯಗಳಿಗೆ ಬದ್ಧರಾಗಿದ್ದರು. ಸ್ತ್ರೀಯರ ಅಲಂಕಾರ ಸಾಧನವಾಗಿರುವ ಬಳೆಗಳನ್ನು ಇಂದು ನಗರಗಳಲ್ಲಿ ಅಂಗಡಿ ಮಳಿಗೆಗಳಲ್ಲಿ ಮಾರುವ ಚಿತ್ರಣ ಇದೆ, ಅಲ್ಲಿಗೆ ಹೋಗಿ ಸ್ತ್ರೀಯರು ಕೊಂಡುಕೊಳ್ಳುತ್ತಾರೆ. ಆದರೆ ಜನಪದದಲ್ಲಿ ಈ ರೀತಿ ಇರಲಿಲ್ಲ. ಬಳೆಗಾರ ಕುಲದವರೇ ಆ ವೃತ್ತಿ ಮಾಡುತ್ತಿದ್ದರು. ಹಳ್ಳಿಯ ಮನೆ ಮನೆಗೆ ಬಂದು ಸ್ತ್ರೀಯರಿಗೆ ಕೈತುಂಬ ಬಳೆ ತೊಡಿಸುತ್ತಿದ್ದರು. ಅಂದು ಸಾರಿಗೆ-ಸಂಪರ್ಕದಲ್ಲಿ ತೀವ್ರಗತಿಯ ಬೆಳವಣಿಗೆ ಆಗಿರದೆ ಒಂದು ಊರಿನಿಂದ ಮತ್ತೊಂದು ಊರಿಗೆ ಕಾಲ್ನಡಿಗೆಯಲ್ಲೇ ಹೋಗುವ ಪರಿಪಾಠವಿತ್ತು. ಹಾಗಾಗಿ ಬಳೆಗಾರ ಊರಿಂದ ಊರಿಗೆ ಹೋಗಿ ಬರುತ್ತಿರುವಾಗ ಮದುವೆ ಮಾಡಿಕೊಟ್ಟ ಹೆಣ್ಣು ಮಗಳ ಕುರಿತು ತವರು ಮನೆಯವರಿಗೆ ವಿಚಾರ ತಿಳಿಸುತ್ತಿದ್ದನು. ತವರು ಮನೆಯ ವಿಚಾರವನ್ನು ಗಂಡನ ಊರಿನಲ್ಲಿರುವ ಹೆಣ್ಣು ಮಗಳಿಗೆ ತಿಳಿಸುತ್ತಿದ್ದನು. ಹಾಗಾಗಿ ಇಲ್ಲಿ ಕವಿಗೆ ತನ್ನ ಹೆಂಡತಿಯ ತಂದೆಯ ಜೊತೆ ವಿರಸವಾದ ಸಂದರ್ಭದಲ್ಲಿ ಮಾವನ ಮೇಲಿನ ಕೋಪಕ್ಕೆ ಹೆಂಡತಿಯನ್ನು ನೋಡಲು ಆಕೆಯ ತವರು ಮನೆಗೆ ಹೋಗಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಬಳೆಗಾರನ ಜೊತೆಯಲ್ಲಿ ಹೆಣ್ಣು ಮಗಳು ತನ್ನ ಗಂಡನ ಮೇಲಿನ ಪ್ರೀತಿಯನ್ನು, ಆತನನ್ನು ನೋಡಬೇಕೆಂದಿರುವ ಹಂಬಲವನ್ನು ಹೇಳುತ್ತಾ ಈ ವಿಚಾರವನ್ನು ಗಂಡನಿಗೆ ತಿಳಿಸಲು ಹೇಳುತ್ತಾಳೆ. ಆಗ ಬಳೆಗಾರ ಈ ವಿಚಾರವನ್ನು ಆಕೆಯ ಗಂಡನಿಗೆ ತಿಳಿಸಿ ಅವರ ಸಮಸ್ಯೆಯನ್ನು ನಿವಾರಣೆ ಮಾಡಲು ಪ್ರಯತ್ನಿಸುವ ಸುಂದರ ಚಿತ್ರಣ ಇಲ್ಲಿದೆ.

ಹಾಗೆ ಕವಿತೆಯಲ್ಲಿ ಬಳೆಗಾರ ಚೆನ್ನಯ್ಯ ಬಾಗಿಲಿಗೆ ಬಂದಿದ್ದೇನೆ. ಬಳೆಯನ್ನು ತೊಡಿಸುವುದಕ್ಕಲ್ಲ ನವಿಲೂರಿನಿಂದ ಸುದ್ದಿಯೊಂದನ್ನು ತಂದಿಹೆನು ರಾಯರೆ ಎಂದು ಹಾಡಿನ ಮೂಲಕ ಹೇಳುತ್ತಿದ್ದಾನೆ.

ಅಂದು ಮಂಗಳವಾರ, ನವಿಲೂರ ಕೇರಿಯಲಿ
ಓಲಗದ ಸದ್ದು ತುಂಬಿತ್ತು;
ಬಳೆಯ ತೊಡಿಸಿದರಂದು ಅಮ್ಮನಿಗೆ ತೌರಿನಲಿ
ಅಂಗಳದ ತುಂಬ ಜನವಿತ್ತು.

ಬಳೆಗಾರ ಚೆನ್ನಯ್ಯ ಆ ಹೆಣ್ಣು ಮಗಳು ಗಂಡನನ್ನು ರಾಯರೆ, ಎಂದು ಸಂಭೋದಿಸಿ ಸೀಮಂತದ ಸಂದರ್ಭವನ್ನೆಲ್ಲಾ ವಿವರಿಸುವ ಮೂಲಕ ಆಕೆಯ ಪ್ರೀತಿಯನ್ನು ಹೇಳುತ್ತಿದ್ದಾನೆ. ಅಂದು ಸೀಮಂತದ ದಿನ ನವಿಲೂರ ಕೇರಿಯಲೆಲ್ಲ ಓಲಗದ ಸದ್ದು ಕೇಳಿಸುತ್ತಿತ್ತು. ಅಂಗಳದ ತುಂಬೆಲ್ಲ ಜನರು ಸೀಮಂತದ ಸಂಭ್ರಮ ನೋಡಲು ಬಂದಿದ್ದರು, ತವರಿನಲ್ಲಿ ಅರಳಿದ ಮಲ್ಲಿಗೆಯಂತೆ ನಗು ನಗುತ ಇದ್ದ

ತಾಯಿ. ಕೊರಳಿನಲ್ಲಿ ಹೊಳೆಯುವ ಪದಕ ಹಾಕಿಕೊಂಡು, ನಾಚಿಕೆಯಲ್ಲಿ, ಬಿಂಕದಲಿ, ಹಸೆಮಣೆಗೆ ಬಂದರು. ನಿಮ್ಮ ಮೇಲಿನ ಪ್ರೀತಿಯಿಂದ ಆಸೆ ಕನಸುಗಳನೊತ್ತಿಕೊಂಡು ಸೀಮಂತಮಾಡಿಸಿಕೊಂಡರು. ಇದೆನೆಲ್ಲ ಸಂತೋಷದಿಂದ ಕಣ್ತುಂಬಾ ನೋಡಿದ ಮುದುಕ ನಾನು, ಈ ಸಂತೋಷವನ್ನು ಕಂಡ ನನಗೆ ಈಗ ಇನ್ನೊಂದು ಸ್ಥಿತಿ ಕಾಣುತ್ತಿದೆ ಎಂದು ಬಳೆಗಾರ ಚೆನ್ನಯ್ಯ ಮರುಗುತ್ತಿದ್ದಾನೆ.

ಬೇಕಾದ ಹಣ್ಣಿಹುದು, ಹೂವಿಹುದು ತೌರಿನಲಿ
ಹೊಸ ಸೀರೆ, ರತ್ನದಾಭರಣ:
ತಾಯಿ ಕೊರಗುವರಲ್ಲಿ ನೀವಿಲ್ಲದೂರಿನಲ್ಲಿ
ನಿಮಗಿಲ್ಲ ಒಂದು ಹನಿ ಕರುಣ.

ಬಳೆಗಾರ ಚನ್ನಯ್ಯ ರಾಯರೆ, ನಿಮ್ಮ ಮಡದಿಗೆ ತವರೂರು ನವಿಲೂರಿನಲ್ಲಿ ತಿಂದು ಸವಿಯಲು ಬೇಕಾದ ಹಣ್ಣುಗಳಿವೆ, ತಿನಿಸುಗಳಿವೆ. ತಾಯಿ ಸಿಂಗರಿಸಿಕೊಳ್ಳಲು ಬೇಕಾದ ಬಗೆ ಬಗೆಯ ಸೀರೆಗಳು ವಿವಿಧ ರತ್ನಾಭರಣಗಳು, ಮುಡಿಯಲು ಬಗೆ ಬಗೆಯ ಸುವಾಸನೆ ಭರಿತ ಹೂಗಳಿವೆ. ಬದುಕಲು ಏನು ಕೊರತೆಯಿಲ್ಲದಷ್ಟು ಸಮೃದ್ಧಿ ತವರಿನಲ್ಲಿದೆ. ಆದರೆ ತಾಯಿಗೆ ಅವುಗಳಿಂದ ದೊರೆಯುವ ಸುಖ ಸಂತೋಷ ಬೇಡವಾಗಿದೆ. ನೀವಿಲ್ಲದಿರುವುದಕ್ಕೆ ನಿಮ್ಮನ್ನು ನೆನೆದು ಕೊರಗುತ್ತಿದ್ದಾರೆ. ಆದರೆ ನಿಮಗೆ ಮಾತ್ರ ಒಂದು ಕಿಂಚಿತ್ತು ಕರುಣೆ ಇಲ್ಲ, ಒಂದಿನಿತು ಆಕೆಯನ್ನು ನೆನೆಯದೆ ಇರುವುದು ಸರಿಯೆ? ಎಂದು ಚೆನ್ನಯ್ಯ ಕೇಳುತ್ತಿದ್ದಾನೆ.

ಕವಿ ಬಳೆಗಾರ ಚೆನ್ನಯ್ಯನ ಮೂಲಕ ತವರಿನ ಸಮೃದ್ಧಿಯನ್ನು ಕುರಿತು ತಿಳಿಸುತ್ತಿದ್ದಾರೆ. ಏನೇ ಐಶ್ವರ್ಯವಿದ್ದರೂ ಗಂಡನಿಗೆ ಸಮನಾದುದು ಯಾವುದೂ ಇಲ್ಲ ಎನ್ನುವ ಮನಸ್ಸು ಹೊಂದಿರುವ ಹೆಂಡತಿಯ ಚಿತ್ರಣ ಇಲ್ಲಿದೆ.

ದಿನವಾದ ಬಸುರಿ ಉಸ್ಸೆಂದು ನಿಟ್ಟುಸಿರೆಳೆದು
ಕುದಿಯಬಾರದು, ನನ್ನ ದೊರೆಯೇ;
ಹಿಂಡಬಾರದು ದುಂಡುಮಲ್ಲಿಗೆಯ ದಂಡೆಯನು;
ಒಣಗಬಾರದು ಒಡಲ ಚಿಲುಮೆ.

ಬಳೆಗಾರ ಚನ್ನಯ್ಯ ರಾಯರ ಮನವೊಲಿಸಲು ತವರಿನಲ್ಲಿರುವ ತಾಯಿಗೆ ಹೆರಿಗೆಯ ಸಮಯ, ಈ ಪರಿಸ್ಥಿತಿಯಲ್ಲಿ ಆಕೆ ಚಿಂತೆಯಿಂದ ನಿಮ್ಮ ನೆನಪಿನಲ್ಲಿ ನಿಟ್ಟುಸಿರೆಳೆಯಬಾರದು ದೊರೆ.

ದುಂಡುಮಲ್ಲಿಗೆಯ ದಂಡೆಯಂತೆ ಇರುವ ತಾಯಿಯನ್ನು ನಿಮ್ಮ ಅಗಲಿಕೆಯಿಂದ ಹಿಂಡಬೇಡಿರಿ. ಇದರಿಂದ ಆಕೆಯ ಒಡಲ ಚಿಲುಮೆಯಾದ ನಿಮ್ಮ ಮಗುವಿಗೆ ತೊಂದರೆಯಾಗಬಾರದು ಎನ್ನುತ್ತಿದ್ದಾರೆ.

ಕವಿ ಈ ಸಾಲುಗಳ ಮೂಲಕ ಹೆಣ್ಣು ಗರ್ಭವತಿಯಾದ ಸಂದರ್ಭದಲ್ಲಿ ತುಂಬಾ ಸಂತೋಷದಿಂದ ಇರಬೇಕು. ಇಲ್ಲವಾದರೆ ಮಗುವಿಗೆ ತೊಂದರೆಯಾಗುವ ಸಂಭವವಿರುತ್ತದೆ ಎಂದು ಹೇಳುತ್ತಿದ್ದಾರೆ.

ಮುಳಿಸು ಮಾವನ ಮೇಲೆ; ಮಗಳೇನ ಮಾಡಿದಳು?
ನಿಮಗೇತಕೀ ಕಲ್ಲುಮನಸು?
ಹೋಗಿ ಬನ್ನಿರಿ ಒಮ್ಮೆ ಕೈಮುಗಿದು ಬೇಡುವೆನು;
ಅಮ್ಮನಿಗೆ ನಿಮ್ಮದೇ ಕನಸು.

ಈ ಸಾಲುಗಳಲ್ಲಿ ಬಳೆಗಾರ ಚೆನ್ನಯ್ಯ ರಾಯರ ಮುನಿಸಿಗೆ ಕಾರಣವಾದ ಸಂಗತಿ ಹೇಳುತ್ತಿದ್ದಾನೆ. ರಾಯರೇ ನಿಮಗೆ ಮನಸ್ತಾಪವಿರುವುದು, ಕೋಪವಿರುವುದು ನಿಮ್ಮ ಮಾವನ ಮೇಲೆ. ಆದರೆ ಅವರ ಮಗಳು ಏನು ತಪ್ಪು ಮಾಡಿದ್ದಾಳೆ? ನೀವು ಅವರನ್ನು ನೋಡದೆ ಏಕೆ ಕೋಪಿಸಿಕೊಂಡಿರುವಿರಿ ಕೈಮುಗಿದು ಕೇಳುತ್ತಿದ್ದೇನೆ ಹೋಗಿ ಬನ್ನಿ. ಅಮ್ಮನಿಗೆ ನಿಮ್ಮದೇ ಕನಸು ಎನ್ನುತ್ತಿದ್ದಾರೆ.

ಗಂಡ- ಹೆಂಡತಿ ನಡುವಿನ ಸಮಸ್ಯೆಯಲ್ಲಿ ಬಳೆಗಾರ ಚೆನ್ನಯ್ಯ ಸೇತುವೆಯಾಗಿ ನಿಂತು ಅದನ್ನು ಬಗೆಹರಿಸುವ ಪ್ರಯತ್ನ ಮಾಡುತ್ತಿದ್ದಾನೆ. ವಾಸ್ತವ ಬದುಕಿನಲ್ಲಿಯೂ ಗಂಡ ಮತ್ತು ತವರು ಮನೆಯವರ ಕಲಹಕ್ಕೆ ಹೆಣ್ಣು ಮಗಳು ನೋವನ್ನು ಅನುಭವಿಸುವ ಹಲವಾರು ಉದಾಹರಣೆಗಳನ್ನು ಗಮನಿಸಬಹುದು. ಹಾಗಾಗಿ ಈ ತರಹದ ನಡವಳಿಕೆ ಸರಿಯಲ್ಲದ್ದು. ಯಾರದೋ ಮೇಲಿನ ಕೋಪಕ್ಕೆ ಹೆಂಡತಿಯ ಮನ ನೋಯಿಸಬಾರದೆಂದು ಕವಿ ಬಳೆಗಾರ ಚೆನ್ನಯ್ಯನ ಮೂಲಕ ತಿಳಿಸಿದ್ದಾರೆ.

ಕಿರಿಗಸೂರ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ

೪.೫ ಮಾತೃ ಪ್ರೇಮ

ಮನುಷ್ಯ ತನ್ನ ಬದುಕಿನಲ್ಲಿ ಕೆಲವು ವ್ಯಕ್ತಿಗಳಿಗೆ ಹೆಚ್ಚಿನ ಮಹತ್ವವನ್ನು ನೀಡಿರುತ್ತಾನೆ. ಅವರ ತಂದೆ, ತಾಯಿ, ಗುರು ಪ್ರಮುಖ ಸ್ಥಾನದಲ್ಲಿರುತ್ತಾರೆ. ಮಾನವನು ತನ್ನ ಬದುಕಿನಲ್ಲಿ ತೀರಿಸಲಾರದ ಋಣವೆಂದರೆ ಅದು ತಂದೆ-ತಾಯಿಯ ಋಣವೆಂದು ಹೇಳುತ್ತಾರೆ. ತಾಯಿಪ್ರೀತಿ ಎನ್ನುವುದು ಬೇರೆ ಎಲ್ಲಾ ಸಂಬಂಧಗಳಿಂದ ದೊರೆಯುವ ಪ್ರೀತಿಗಿಂತ ಪ್ರಮುಖವಾಗಿರುತ್ತದೆ. ಹಾಗಾಗಿಯೇ "ತಾಯಿಯೇ ದೇವರು" ಎಂದು ಹೇಳಲಾಗುತ್ತದೆ. ಇಂತಹ ತಾಯಿಯ ಮಹತ್ವವನ್ನು, ಅವಳು ಮಗುವಿನ ಮೇಲೆ ಇಟ್ಟಿರುವ ಪ್ರೀತಿ, ವಾತ್ಸಲ್ಯ ಮತ್ತು ಮಮತೆಯನ್ನು ಕವಿಗಳು ತಮ್ಮ ಕವನದಲ್ಲಿ ಅನಾವರಣ ಮಾಡಿದ್ದಾರೆ.

ಪಿ.ಲಂಕೇಶ್‌ರವರು ತಾಯಿಯನ್ನು ಕುರಿತು 'ಅವ್ವ' ಎಂಬ ಕವನವನ್ನು ರಚಿಸಿದ್ದಾರೆ. ಅದರಲ್ಲಿ ಅವ್ವನನ್ನು ಫಲವತ್ತಾದ ಮಣ್ಣಿಗೆ ಹೋಲಿಸಿದ್ದಾರೆ. ಹಳ್ಳಿಯಲ್ಲಿರುವ ತಾಯಿ ಆ ಮಕ್ಕಳ ಒಳಿತಿಗಾಗಿ ಯಾವ ರೀತಿಯಲ್ಲಿ ದುಡಿಮೆ ಮಾಡುತ್ತಾಳೆ ಎಂಬುದನ್ನು ಕವನದಲ್ಲಿ ಅನಾವರಣ ಮಾಡಿದ್ದಾರೆ.

ಕೆ.ಎಸ್.ನ.ಅವರು ತಮ್ಮ ಕವನಗಳಲ್ಲಿ ಮಾತೃ ಪ್ರೇಮವನ್ನು ಚಿತ್ರಿಸಿದ್ದಾರೆ. ಗಂಡು ಹೆಣ್ಣಿನ ಆಕರ್ಷಣೆಯಂತೆಯೇ ಮಕ್ಕಳ ಬಗೆಗಿನ ಅಕ್ಕರೆಯ ಆಕರ್ಷಣೆಯೂ ಮನುಷ್ಯನ ಒಂದು ಮುಖ್ಯ ಚಿತ್ತವೃತ್ತಿ.

141599

'ಮೈಸೂರ ಮಲ್ಲಿಗೆ'ಯಲ್ಲಿ ಕೆ.ಎಸ್.ನ. ದಾಂಪತ್ಯದ ಮೊದಲ ಹಂತದ ರಸ ನಿಮಿಷಗಳನ್ನು ಸೊಗಸಾಗಿ ಹಿಡಿದಿಟ್ಟಿದ್ದಾರೆ. ನಂತರದ ಸಂಕಲನಗಳಲ್ಲಿ ಮಕ್ಕಳ ಬಗೆಗಿನ ಅವರ ಆಸಕ್ತಿಯನ್ನು ನಾವು ಕಾಣಬಹುದು.

'ಚೆನ್ನವೀರ ಕಣವಿ' ಯವರು ಹೇಳಿರುವಂತೆ "ನರಸಿಂಹಸ್ವಾಮಿಯವರ ಕಾವ್ಯ ಸಾಧನೆಯಲ್ಲಿ ದಾಂಪತ್ಯ ಜೀವನದ ಸಂಪದ್ಭರಿತ ಚಿತ್ರಣ ಒಂದು ಪ್ರಮುಖವಾದ ಘಟ್ಟವೆನ್ನಬಹುದು. ಅದನ್ನು ದಾಟಿ ಅವರು ಹೊಸ ಬಗೆಯ ಕಾವ್ಯ ಕ್ಷೇತ್ರದಲ್ಲಿ ಮುನ್ನಡೆಯದಿದ್ದರೂ ಈ ಪ್ರಥಮ ಘಟ್ಟದ ಹಸಿರಿನಲ್ಲಿ ಹೊಳೆಯುವ ಹೊಂಬಿಸಿಲಿನ ಮೋಡಿ ಓದುಗರ ಮನಸ್ಸಿನಿಂದ ಇನ್ನೂ ಮಾಯವಾಗಿಲ್ಲ. ಆ ಹಸಿರನ್ನು ಹೊಟ್ಟೆ ತುಂಬ ಮೇದ ಹಸು ಕರುವಿನ ಮೈ ನೆಕ್ಕುತ್ತಾ ಅದಕ್ಕೆ ಹಾಲುಣಿಸುವಲ್ಲಿಯ ತೃಪ್ತಿ, ಅಕ್ಕರೆ, ಅನಂದಗಳನ್ನು ಇವರ ವಾತ್ಸಲ್ಯ ಗೀತಗಳಲ್ಲಿ ಕಾಣಬಹುದು"[೫].

ಕೆ.ಎಸ್.ನ. ಅವರ 'ಇರುವಂತಿಗೆ ಕವನ ಸಂಕಲನದ 'ಸಣ್ಣ ಸಂಗತಿ' ಎಂಬ ಕವನದಲ್ಲಿ ತಾಯಿ ಪ್ರೀತಿಯ ಅನಾವರಣವಾಗಿದೆ. ಕವಿತೆಯು 'ನಿದ್ರೆಯಲ್ಲಿಯೂ ಮಗುವಿನ ಕಾಳಜಿಯ ಬಗ್ಗೆ ಗಮನ ಹರಿಸುವ ತಾಯಿಯೊಬ್ಬಳ ಚಿತ್ರಣ' ನೀಡಿದೆ.

ಇದೊಂದು ಮೇಲ್ನೋಟಕ್ಕೆ ಸಣ್ಣ ಸಂಗತಿ ಎಂದು ತೋರಬಹುದಾದರೂ ಅಂತರಾಳದಲ್ಲಿ ಅಕ್ಕರೆ ಮತ್ತು ವಾತ್ಸಲ್ಯವನ್ನು ಎರಕ ಹೊಯ್ಯುವ ಮಹಾ ಸಂಗತಿಯಾಗಿರುವುದನ್ನು ಗಮನಿಸಬಹುದು.

ನಟ್ಟಿರುಳ ಕರಿಮುಗಿಲ ನೀರ್-ತುಂಬಿಗಳ ನಡುವೆ
ಹುಣ್ಣಿಮೆಯ ಕಣ್ಣು ತೆರೆದಿದೆ. ತಾರೆ ಬಂದಿವೆ
ಬಾನ ಬೀದಿಗೆ. ಅತ್ತ ಹಿಡಿದ ಸೋನೆಯ ಶ್ರುತಿಗೆ
ಗಾಳಿಯೇ ಹಾಡುತಿದೆ. ಇತ್ತ ಈ ಮನೆಯೊಳಗೆ.
ಪುಟ್ಟ ಮಗುವೊಂದು ಮಂಚದ ಬಳಿಯ ತೊಟ್ಟಿಲಲ್ಲಿ
ಕಣ್ಣರ್ಧ ಮುಚ್ಚಿ ಮಲಗಿದೆ, ಅದೂ ಬರಿ ಮೈಲಿ!
ನಿದ್ದೆಗಣ್ಣಿನಲೆ ಪಕ್ಕದ ತಾಯಿ ಕೈ ನೀಡಿ
ಮತ್ತೆ ಹೊದಿಕೆಯನು ಸರಿಪಡಿಸುವಳು. ಮಗು ತಿರುಗಿ
ಹೊದಿಕೆಯನೆ ಕಿತ್ತೆಸೆದು ಮಲಗುವುದು ಬರಿ ಮೈಲಿ;
ಸಣ್ಣಗಿದೆ ದೀಪ ಎಲ್ಲೊ ಒಂದು ಮೂಲೆಯಲಿ.

ಒಂದು ಮಧ್ಯ ರಾತ್ರಿಯಲ್ಲಿ ಆಕಾಶದಲ್ಲಿ ಕರಿಮುಗಿಲು ಆವರಿಸಿಕೊಂಡಿತ್ತು. ಅದು ಹುಣ್ಣಿಮೆಯ ರಾತ್ರಿ. ಕರಿಮುಗಿಲು ಮಳೆಯನ್ನು ಹೊತ್ತು ತರುವ ಸೂಚನೆಯನ್ನು ನೀಡದೆ ಆಕಾಶದಲ್ಲಿ ತಾರೆಗಳೆಲ್ಲವು ಬಂದಿವೆ. ಸೋನೆಯು ಸುರಿಯಲಾರಂಭಿಸಿತು, ಈ ಸೋನೆಯು ಸುರಿಯುವ ಶ್ರುತಿಗೆ ಗಾಳಿಯೂ ಹಾಡುತ್ತಿರುವಂತೆ ಬೀಸುತ್ತಿತ್ತು. ಸೋನೆ-ಗಾಳಿಗಳೆರಡೂ ಒಟ್ಟಿಗೆ ಮಧ್ಯರಾತ್ರಿಯಲ್ಲಿ ಬಂದು ಚಳಿ ಚಳಿಯ ವಾತಾವರಣವನ್ನು ಉಂಟು ಮಾಡಿದ್ದವು. ಇಂತಹ ಸಮಯದಲ್ಲಿ ಒಂದು ಮನೆಯೊಳಗೆ ಮಂಚವೊಂದರ ಪಕ್ಕವಿದ್ದ ತೊಟ್ಟಿಲಲ್ಲಿ ಮಗುವೊಂದು ಅರ್ಧಕಣ್ಣು ಮುಚ್ಚಿಕೊಂಡು ಬರಿಯ ಮೈಯಲ್ಲಿ ಮಲಗಿತ್ತು. ಮಗು ಜನಿಸಿದ ೩ ದಿನಗಳವರೆಗೂ ಬಟ್ಟೆ ತೊಡಿಸುವುದಿಲ್ಲ. ಏಕೆಂದರೆ ಅದರ ತ್ವಚೆ ಅಷ್ಟು ಸೂಕ್ಷ್ಮವಾಗಿರುತ್ತದೆ. ಬೀಸುತ್ತಿರುವ ಗಾಳಿ, ಸುರಿವ ಸೋನೆಯು ತಂದ ಚಳಿ-ಶೀತಗಳ ಪರಿವೆಯೇ ಮಗುವಿಗಿಲ್ಲದೆ ನಿದ್ರೆಗೆ ಜಾರಿ ಸುಖಿಸುತ್ತಿತ್ತು. ಪಕ್ಕದಲ್ಲೆ ಇದ್ದ ಮಗುವಿನ ತಾಯಿ ನಿದ್ದೆಗಣ್ಣಿನಿಂದಲೇ ತೊಟ್ಟಿಲತ್ತ ಕೈ ನೀಡಿ ಮತ್ತೆ ಮಗುವಿಗೆ ಹೊದಿಕೆಯನ್ನು ಸರಿಪಡಿಸುತ್ತಾಳೆ. ಆದರೆ ಮಗುವು ಪುನಃ ಹೊದಿಕೆಯನ್ನು ಕಿತ್ತೆಸೆದು ಬರಿಯ ಮೈಯಲ್ಲೇ ಮಲಗುತ್ತಿದೆ.

ತಾಯಿ ಇಡೀ ದಿನ ಮಗುವನ್ನು ನೋಡಿಕೊಂಡು, ಮನೆಕೆಲಸ ಮಾಡಿ ಸುಸ್ತಾಗಿರುವಳು. ಇದರ ನಡುವೆ ಗಾಢ ನಿದ್ರೆಯಲ್ಲೂ ಅವಳಿಗೆ ಮಗುವಿನ ಚಿಂತೆಯೇ ಇದೆ. ನಿದ್ದೆಯಲ್ಲೇ ಅವಳು ಮಗುವಿನ ಹೊದಿಕೆಯನ್ನು ಸರಿಮಾಡುವುದು ಮಗುವಿನ ಬಗೆಗೆ ಅವಳಿಗಿರುವ ಕಾಳಜಿ-ಅಕ್ಕರೆಗಳನ್ನು ತೋರಿಸುತ್ತದೆ. ಮಗು ಬರಿಮೈಯಲ್ಲಿ ಮಲಗಿರುವುದು ಆಕೆಗೆ ನಿದ್ದೆಯಲ್ಲೇ ಅರಿವಾಗುತ್ತದೆ. ನಿದ್ದೆಯಲ್ಲೂ ಅವಳಿಗೆ ಮಗುವಿನ ಚಿಂತೆ ಬಾಧಿಸಿರುವುದು ಕವಿಗೆ ದೊಡ್ಡ ಸಂಗತಿಯಾಗಿ ಕಾಣುತ್ತಿದೆ. ಮಗುವಿಗೆ ಮಾತ್ರ ತಾಯಿಯ ಹೊದಿಕೆಯ ಆಸರೆ ಬೇಕಿಲ್ಲ. ಅದು ತನಗಿಷ್ಟ ಬಂದಂತೆ ಬರಿಮೈಯಲ್ಲೇ ಮಲಗಿಕೊಂಡಿದೆ. ಮನೆಯ ಮೂಲೆಯಲ್ಲಿ ದೀಪ ಸಣ್ಣಗೆ ಉರಿಯುತ್ತಿದೆ. ಮಧ್ಯರಾತ್ರಿಯಲ್ಲಿ ಮಗು ಎದ್ದಾಗ ಕತ್ತಲಿದ್ದರೆ ಅಳಬಹುದೆಂಬ ಮುಂಜಾಗ್ರತೆಯಿಂದ ರಾತ್ರಿಯಲ್ಲಿ ಸಣ್ಣಗೆ ದೀಪ ಉರಿಸುವುದನ್ನು ಕವಿ ಚಿತ್ರಿಸಿದ್ದಾರೆ.

ಇದು ಸರಿಯೆ? ತಪ್ಪೆ? –ಉತ್ತರವಿಲ್ಲ. ದೆಸೆದೆಸೆಗೆ
ಎಲ್ಲ ಮಲಗಿಹರು ಮಾತಾಡದೆಯೆ, ನೋಡದೆಯೆ,
ನಿದ್ದೆ ಎಚ್ಚರಗಳಲಿ ಪೊರೆವ ಕೈ ದುಡಿಯುತಿದೆ.
ಅದನು ಲೆಕ್ಕಿಸದೆ ಮಗು ಹೊದಿಕೆಯನು ಒದೆಯುತಿದೆ,

ತಾಯಿ ನಿದ್ದೆಗಣ್ಣಿನಲ್ಲಿ ಹೊದಿಕೆ ಹೊದಿಸುತ್ತಿದ್ದರೂ ಮಗು ಮತ್ತೆ ಅದನ್ನು ಕಿತ್ತೆಸೆದು ಬರಿಯ ಮೈಯಲ್ಲಿ ಮಲಗುತ್ತಿದೆ .ಇದು ಸರಿಯೆ? ತಪ್ಪೆ? ಎಂದು ಹೇಳುವವರು ಇಲ್ಲ. ಮನೆಯಲ್ಲಿ ಉಳಿದವರೆಲ್ಲರೂ ದಿಕ್ಕು ದಿಕ್ಕಗೂ ಮೈ ಚೆಲ್ಲಿ ಮಲಗಿದ್ದಾರೆ. ಯಾರೂ ಮಾತಾಡುತ್ತಿಲ್ಲ, ಮಗುವನ್ನು ನೋಡುತ್ತಿಲ್ಲ, ಹಾಗೆ ತಾಯಿಯ ಕಡೆಗೂ ಯಾರೂ ಗಮನ ಕೊಡುತ್ತಿಲ್ಲ. ತಾಯಿ ನಿದ್ರಿಸುತ್ತಿದ್ದಾಳೆ, ಹಗಲೆಲ್ಲ ದುಡಿದಿದ್ದಾಳೆ, ವಿಶ್ರಾಂತಿ ಪಡೆಯಲಿ ಎಂಬ ಭಾವನೆ ಯಾರಲ್ಲೂ ಇಲ್ಲ. ಎಲ್ಲರೂ ಅವರವರ ಪಾಡಿಗೆ ಅವರು ನಿದ್ರಿಸುತ್ತಿದ್ದಾರೆ. ಇದ್ಯಾವುದರ ಕಡೆಗೆ ಲಕ್ಷ್ಯವಿರದ ತಾಯಿಯ ಕೈಗಳು ಮಾತ್ರ ನಿದ್ದೆಯಲ್ಲೂ, ಎಚ್ಚರದಲ್ಲೂ ಮಗುವನ್ನು ಪೊರೆಯುವ ಕೈ ದುಡಿಯುತ್ತಲೇ ಇದೆ. ತಾಯಿಯ ಕಳಕಳಿಯನ್ನು ಲೆಕ್ಕಿಸದೆ ಹೊದಿಕೆಯನ್ನು ಕಾಲಿನಿಂದ ಒದೆಯುತ್ತಲೇ ಇದೆ. ಇದು ತೀರ ಸಣ್ಣ ಸಂಗತಿಯಾದರೂ ಕವಿಯ ಪಾಲಿಗೆ ಮಹತ್ವದ್ದಾಗಿ ಕಾಣಿಸಿದೆ. ತಾಯಿ ತನ್ನ ಕರ್ತವ್ಯವನ್ನು ಚಾಚೂ ತಪ್ಪದೆ ಪಾಲಿಸುವ ಈ ಚಿತ್ರಣ ಹೃದಯಂಗಮವಾಗಿದೆ ಎನ್ನಬಹುದು.

ಕೆ.ಎಸ್.ನ. ರವರ **'ದೀಪದಮಲ್ಲಿ'** ಕವನ ಸಂಕಲನದ **'ತುಂಗಭದ್ರ'** ಕವನದಲ್ಲಿ ಮಗುವಿನ ತುಂಟತನ ಮತ್ತು ಅದರ ನಡವಳಿಕೆಯನ್ನು ಕುರಿತು ತಿಳಿಸಿದ್ದಾರೆ.

ಈ ತುಂಗಭದ್ರೆ–ಹೊಳೆಯಲ್ಲ–ವರುಷದ ಮಗಳು;
ಇವಳೆನ್ನ ದೇವರಾಗಿಹಳು. ಮದರಾಸಿನಲಿ
ಬಿರುಗಾಳಿ ಎದ್ದು ಮೈಸೂರಿನಲಿ ಹತ್ತು ಹನಿ
ಮಳೆ ಬಿದ್ದಿತೆನ್ನಿ –ಇವಳಗೆ ನೆಗಡಿ; ಬೀದಿಯಲಿ
ಬೇಸಗೆಯ ಬಿಸಿಲು ಸುಳಿದರೆ ಉಷ್ಣ.... ಮನೆಯೊಳಗೆ
ಎಲ್ಲೆಲ್ಲು ಇವಳೆ, ಇವಳದೆ ಮಾತು, ಇವಳಾಟ!
ಈ ತುಂಗಭದ್ರೆ–ಹೊಳೆಯಲ್ಲ–ವರುಷದ ಮಗಳು

ತುಂಗಭದ್ರೆ ಎಂಬ ಹೆಸರು ನದಿಯಲ್ಲ. ಅದು ವರುಷ ತುಂಬಿದ ಮಗಳ ಹೆಸರು. ಇವಳು ತಂದೆಗೆ ದೇವರ ಸ್ವರೂಪಳಾಗಿರುವಳು. ಈ ಮಗುವಿಗೆ ಚಳಿ, ಮಳೆ, ಬೇಸಿಗೆಯ ಯಾವ ವಾತಾವರಣವೂ ಹಿಡಿಸುತ್ತಿರಲಿಲ್ಲ. ನೆಗಡಿ, ಉಷ್ಣವು ದೇಹವನ್ನಾವರಿಸುತ್ತಿತ್ತು. ಮನೆಯಲ್ಲೆಲ್ಲಾ ಈ ಮಗಳದೇ ತುಂಟಾಟವಾಗಿತ್ತು ಎಂದು ಕವಿ ಹೇಳುತ್ತಿದ್ದಾರೆ.

ಒಳಗಣ್ಣ ಕಪ್ಪ ಕತ್ತರಿಸುವಳು ದಿನವೂ ಹಿಡಿದು
'ಅಕ್ಕ ಅಮ್ಮ' ಎಂದು ಒಲಿಸಿ ಬಸಿನೀರೆರೆದು,
ಮೈತುಂಬ ಹೊದಿಸಿ, ಧೂಪವನಿಟ್ಟು ತೊಟ್ಟಿಲನು
ರಟ್ಟೆ ಬೀಳುವ ತನಕ ತೂಗಿ, ಮೆಲುದನಿಯಲ್ಲಿ
ಚೋಳ ಕನ್ಯೆಯರ ಭಂಗವನು ಪಲುಕಿರಿದವಳು
ಮಲಗುವಂಥವಳೆ, ಈ ಮಾಯಾಂಗನೆ? ಇಣಕಿ,
ಹೆಡೆ ಎತ್ತಿ ನಕ್ಕು ನಗಿಸುವಳು.

ಮಗುವನ್ನು ಅಕ್ಕ, ಅಮ್ಮ ಮೊದಲಾದವರು ಪ್ರೀತಿಯಿಂದ ಕರೆದು ಅದಕ್ಕೆ ಬಿಸಿನೀರಿನ ಸ್ನಾನ ಮಾಡಿಸಿ, ಧೂಪವನ್ನು ಕಾಯಿಸಿ ಅದನ್ನು ಮಲಗಿಸುತ್ತಾರೆ. ಅವಳು ತೊಟ್ಟಿಲು ತೂಗಿದ ತಕ್ಷಣ ಮಲಗುವವಳಲ್ಲ; ಶಕ್ತಿ ಮೀರಿ ತೂಗಬೇಕಿತ್ತು. 'ಚೋಳ ಕನ್ಯೆಯರ ಭಂಗ' – ಮಕ್ಕಳನ್ನು ಮಲಗಿಸುವಾಗ ಹೇಳುವ ಒಂದು ರೂಢಿಯ ಹಾಡು. ಇದನ್ನು ಹೇಳಿದರೆ ಈಕೆ ಮಲಗುವವಳಲ್ಲ ಮತ್ತೆ ಎಚ್ಚರಗೊಂಡು ಅಮ್ಮನನ್ನು ನಗಿಸುವಳು ಎಂದು ಮಗುವಿನ ತುಂಟತನದ ಪರಿಚಯ ಮಾಡಿಕೊಡುತ್ತಾರೆ.

ವರುಷದ ಮಗಳು
ಇವಳೆನಗೆ ಸರ್ಪಗಾವಲು, ಹೊಸಿಲ ದಾಟಿದರೆ
ಬಾಗಿಲಿಗೆ ಕಾಡುವಳು...ಸಂಜೆಯ ತನಕ
ತಾಯ ಬಳಿ ಇವಳ ಅಧಿಕಾರ, ನಡುರಾತ್ರಿಯಲ್ಲಿ
ನನ್ನೆದೆಗೆ ಇವಳು ದೇವರ ಪದಕ, ಈ ಮಗಳು
ತುಟಿಯ ತೆರೆದರೆ ಸಾಕು ಮೇಲೊಂದು ಸಣ್ಣಕ್ಕಿ,
ಕೆಳತುಟಿಯ ಹಿಂದೆ ಇನ್ನೊಂದು ಹಾಲಿನ ಚುಕ್ಕಿ,
ಬಟ್ಟತಲೆ, ದುಂಡುಮುಖ, ಕಿವಿಯವರೆಗೂ ಕಣ್ಣು,
ಇಷ್ಟಾಗಿ ಶಾಸ್ತ್ರಕ್ಕೆ ಹತ್ತು ಕೂದಲು, ಒಂದು
ಮರುಳ ಜಡೆ, ಅದೂ ಬ್ರಹ್ಮಗಂಟು,

ಮಗುವು ತಂದೆಯ ಪಾಲಿಗೆ ಸರ್ಪಗಾವಲಿನಂತಿದೆ. ಅವರು ಮನೆ ಹೊಸಿಲು ದಾಟಿದರೆ ಆಕೆಯೂ ದಾಟಿ ಬರುವಳು. ಆನಂತರ ಸಂಜೆತನಕ ಮಗಳು ತಾಯಿ ಬಳಿ ತುಂಟಾಟವಾಡುತ್ತಾ ಇರುತ್ತದೆ. ರಾತ್ರಿಯಲ್ಲಿ ತಂದೆಯ ಎದೆಗೆ ದೇವರ ಪದಕದಂತೆ ಅಂಟಿಕೊಂಡು ಮಲಗುವಳು. ಈ ಮಗಳಿಗೆ ತುಟಿಯ ತೆರೆದರೆ ಮೇಲೊಂದು ಸಣ್ಣ ಅಕ್ಕಿಯಂತೆ ಕೆಳತುಟಿಯಲ್ಲಿ ಹಾಲಿನ ಚುಕ್ಕಿಯಂತೆ ಎರಡು ಹಲ್ಲುಗಳಿವೆ. ದುಂಡು ಮುಖ, ಕಿವಿ ಅಗಲವಾದ ಕಣ್ಣುಗಳು ಇವೆ. ಆಗ ತಾನೆ ಕೂದಲು ಬೆಳೆಯುತ್ತಿರುವುದರಿಂದ ಸ್ವಲ್ಪ ಮಾತ್ರ ಇವೆ ಎಂದು ಕವಿ ಮಗಳ ಮುಖ ವರ್ಣನೆ ಮಾಡಿದ್ದಾರೆ.

ಈ ಧೈರ್ಯ ನನಗಿಲ್ಲ, ನನ್ನಂಥ ಎಷ್ಟೋ ಬಾಳಿಗೆ ಇಲ್ಲ
ಒಂದು ದಡ ಗದರಿದರೆ ಮತ್ತೊಂದು ದಡವಿಹುದು,
ಅಲ್ಲಿ ತಂಗಿದರೆ ಜೀವಕ್ಕೆ ಮಂಗಳವೆನುವ
ಒಂದು ನಂಬಿಕೆಯಿಂದ (ಇಂಥ ಅರಿಯದ ಕಂದ
ಎಲ್ಲಿಂದಲೋ ತಂದ ಒಂದು ನಂಬಿಕೆಯಿಂದ)
ಈ ಜೀವ ಬೆಳಕಾಗಿ ಮುನ್ನುಗ್ಗದೆಯೆ ನಿಂತು,
ಬಿಟ್ಟ ದಡ ಬಲುದೂರವೆಂದು, ತಂಗಲು ಮುಂದೆ
ಇನ್ನೊಂದು ದಡವಿಹುದೊ, ಇಲ್ಲವೋ ಎನ್ನುವೊಂದು
ಸಂಶಯದ ಮುಳ್ಳಿಡಿದ ಕಾಡು ದಾರಿಗೆ ಬಿದ್ದು ದಿಕ್ಕುಗೆಟ್ಟಿಹುದು.

ಮಗಳ ತುಂಟತನವನ್ನೂ, ಅದರ ಆಟಪಾಠಗಳ ಸೊಬಗನ್ನು ವರ್ಣಿಸುತ್ತಿದ್ದ ಕವಿ ಕವಿತೆಯ ಮೂರನೆಯ ಭಾಗದಲ್ಲಿ ಇದ್ದಕಿದ್ದಂತೆ ಬೇರೊಂದು ನೆಲೆಗೆ ಹೊರಳಿಸುತ್ತಾರೆ. ಮಗುವಿನ ಒಂದು ಸಹಜ ಚಟುವಟಿಕೆಯನ್ನು ಕವಿ ತಾತ್ವಿಕ ದರ್ಶನದ ಅಭಿವ್ಯಕ್ತಿಗೆ ಬಳಸಿಕೊಂಡು ಬಿಡುತ್ತಾರೆ.

ಸಂಸಾರವನ್ನು ಒಂದು ಸಾಗರಕ್ಕೆ ಹೋಲಿಸಿ, ಗಂಡ ಒಂದು ದಡವಾದರೇ ಹೆಂಡತಿ ಮತ್ತೊಂದು ದಡವೆಂದು ಹೇಳಿ ಈ ಎರಡು ದಡಗಳ ನಡುವೆ ಮಗು ಚಂದಿರನ ಹಡಗು ಹೊತ್ತು ಓಡಾಡುತ್ತದೆ ಎಂದು ಹೇಳುತ್ತಾರೆ, ಮಾತ್ರವಲ್ಲ ಅಪ್ಪ ಗದರಿದರೆ ಇದು ಅಮ್ಮನ ಬಳಿ ಹೋಗುತ್ತದೆ, ಅಮ್ಮ ಬೈದರೆ ಅಪ್ಪನ ಬಳಿ ಬರುತ್ತದೆ. ಒಂದು ದಡ ಗದರಿದರೆ ಮತ್ತೊಂದು ದಡವಿಹುದು ಎಂಬ ನಂಬಿಕೆ ಈ ಕಂದನಿಗಿದೆ. ಮಗುವಿನ ಈ ಧೈರ್ಯ, ಈ ನಂಬಿಕೆಯನ್ನು ತನ್ನ ಸ್ಥಿತಿಯೊಂದಿಗೆ ತೂಗಿ ನೋಡುವ ಕವಿ ಮನುಷ್ಯನ ತಳಮಳದ ಸ್ಥಿತಿಯನ್ನು ನಂಬಿಕೆ ಇಲ್ಲದ ಜೀವ ಎದುರಿಸುವ ಸಮಸ್ಯೆಯನ್ನು ನಮ್ಮ ಮುಂದಿಡುತ್ತಾರೆ. ಮಗುವಿನ ಚಟುವಟಿಕೆಯನ್ನು ನೆನಪಿಟ್ಟುಕೊಂಡು ಬದುಕಿನ ಆಳವಾದ ಸತ್ಯವೊಂದನ್ನು ಧ್ವನಿಸುತ್ತಿದ್ದಾರೆ ಕೆ.ಎಸ್.ನ. ಅವರು.

ಕೆ.ಎಸ್.ನ. ಅವರ **"ಮೈಸೂರ ಮಲ್ಲಿಗೆ"** ಕವನ ಸಂಕಲನದ **'ತೊಟ್ಟಿಲಹಾಡು'** ತಾಯಿ ತನ್ನ ಮಗುವನ್ನು ಮಲಗಿಸುವ ಸಂದರ್ಭದಲ್ಲಿ ಯಾವ ರೀತಿ ಹಾಡನ್ನು ಹೇಳಿ ಮಲಗಿಸುತ್ತಾಳೆ ಎಂಬುದು ಅನಾವರಣಗೊಂಡಿದೆ.

ಅತ್ತಿತ್ತ ನೋಡದಿರು, ಅತ್ತು ಹೊರಳಾಡದಿರು,
ನಿದ್ದೆ ಬರುವಳು ಹೊದ್ದು ಮಲಗು, ಮಗುವೆ;
ಸುತ್ತಿ ಹೊರಳಾಡದಿರು, ಮತ್ತೆ ಹಠ ಹೂಡದಿರು,
ನಿದ್ದೆ ಬರುವಳು ಕದ್ದು ಮಲಗು, ಮಗುವೆ.

ತಾಯಿ ತನ್ನ ಮಗುವನ್ನು ಪ್ರೀತಿಯಿಂದ ಮಲಗಿಸುವಾಗ ಹೇಳುವ ಜೋಗುಳವಿದು. ಆ ಕಡೆ ನೋಡದೆ ಅಳುತ್ತಾ ಹೊರಳಾಡದೆ ಹೊದಿಕೆಯನ್ನು ಹೊದ್ದು ಮಲಗು ಮಗುವೆ, ನಿದ್ದೆ ಬರುವಳು ಮಲಗು ಎಂದು ತಾಯಿ ಮಗುವಿಗೆ ಹೇಳುತ್ತಿದ್ದಾಳೆ.

ಮಲಗು ಚೆಲ್ವಿನ ತೆರೆಯೆ, ಮಲಗು ಒಲ್ಮೆಯ ಸೆರೆಯೆ,
ಮಲಗು ತೊಟ್ಟಿಲ ಸಿರಿಯೆ ದೇವರಂತೆ;
ಮಲಗು ಮುದ್ದಿನ ಗಿಣಿಯೆ, ಮಲಗು ಮುತ್ತಿನ ಮಣಿಯೆ,
ಮಲಗು ಚಂದಿರನೂರ ಹೊಗುವೆಯಂತೆ.

ಆ ತಾಯಿ ಮಗುವನ್ನು ಮಲಗಿಸುವ ಸಂದರ್ಭದಲ್ಲಿ ಅದನ್ನು ತೊಟ್ಟಿಲ ಶ್ರೀಮಂತಿಕೆ ಸಿರಿ ನೀನು, ಪ್ರೀತಿಯಲ್ಲಿ ಸೆರೆಯಾದವ ನೀನು, ಚೆಲುವಿನ ತಾರೆ ನೀನು, ನನ್ನ ಮುದ್ದಿನ ಗಿಣಿ ಮುತ್ತಿನ ಮಣಿಯೇ ಮಲಗು ಎಂದು ಮಗುವನ್ನು ಮುತ್ತಿನ ಮಣಿಗೆ ಹೋಲಿಸುತ್ತಿದ್ದಾಳೆ. ಜೊತೆಗೆ ತೊಟ್ಟಿಲ ಸಿರಿಯಾದ ಈಮಗು ನಿದ್ದೆಯಲ್ಲಿ ಚಂದಿರನೂರಿಗೆ ಹೋಗುವುದೆಂಬ ತಾಯಿಯ ಕಲ್ಪನೆ–ಮಗುವಿನ ಭಾವ ಜಗತ್ತು ಈ ಲೌಕಿಕದ ಗಡಿಗಳನ್ನು ಸುಲಭವಾಗಿ ದಾಟಿ ಬಿಡಬಲ್ಲದೆಂಬ ಸತ್ಯವನ್ನು ತುಂಬಿ ಸೊಗಸಾಗಿ ಚಿತ್ರಿಸಿದ್ದಾರೆ.

ತಾರೆಗಳ ಜರತಾರಿಯಂಗಿ ತೊಡಿಸುವರಂತೆ
ಚಂದಿರನ ತಂಗಿಯರು ನಿನ್ನ ಕರೆದು;
ಹೂವ ಮುಡಿಸುವರಂತೆ, ಹಾಲ ಕುಡಿಸುವರಂತೆ,
ವೀಣೆ ನುಡಿಸುವರಂತೆ ಸುತ್ತ ನೆರೆದು.

ಚಂದಿರನೂರಿನ ಕಲ್ಪನೆ ಇರುವ ತಾಯಿ ಮಗುವಿಗೆ ನಿನಗೆ ಚಂದಿರನೂರಿನಲ್ಲಿ ಜರತಾರಿ ಬಟ್ಟೆ ತೊಡಿಸುವರು, ಚಂದಿರನ ತಂಗಿಯರು ನಿನ್ನ ಬಳಿ ಬಂದು ಹೂವ ಮುಡಿಸುವರು, ಹಾಲು ಕುಡಿಸುವರು, ವೀಣೆ ನುಡಿಸುವರು ಮಗುವೆ ನೀ ಮಲಗು ಎಂದು ಹೇಳುತ್ತಿದ್ಧಾಳೆ.

ಮಕ್ಕಳಿಲ್ಲದ ಅಕ್ಕತಂಗಿಯ ನಗುವಾಗಿ
ಚಕ್ಕಂದವಾಡಿ ಬಾ ಚಿಕ್ಕ ಮಗುವೆ;
ದೂರದೂರಿನ ಬನದ ಹೂ ದಡದ ಕೊಳಗಳಲಿ
ನೀರಾಟವಾಡಿ ಬಾ ಧೀರ ಮಗುವೆ.

ಚಂದಿರನೂರಿನಲ್ಲಿ ಮಕ್ಕಳಿಲ್ಲದ ಅಕ್ಕ ತಂಗಿಯರಿಗೆ ಸಂತೋಷ ಕೊಟ್ಟು, ಅವರೊಡನೆ ಆಡಿಕೊಂಡು, ದೂರದ ಊರಿನ ಕಾಡಿನ ಹೂ ದಡದ ಕೊಳಗಳಲ್ಲಿ ನೀರಾಟವನ್ನು ಆಡುತ್ತಾ ಬಾ ಮಗುವೆ. ಅದಕ್ಕಾಗಿ ನಿನಗೆ ಜೋ, ಜೋ, ಜೋ, ಎಂದು ತೊಟ್ಟಿಲನು ತೂಗುವೆನು ಮಲಗು ನನ್ನ ತುಂಟ ಮಗುವೆ ಎಂದು ತಾಯಿ ಹಾಡುತ್ತಿದ್ದಾಳೆ.

ಬಣ್ಣ ಬಣ್ಣದ ಕನಸುಕರಗುವುದು ಬಲುಬೇಗ;
ಹಗಲು ಬರುವೆನು ಬೆಳ್ಳಿ ಮುಗಿಲ ನಡುವೆ.-
ಚಿನ್ನದಂಬಾರಿಯಲಿ ನಿನ್ನ ಕಳುಹುವರಾಗ
ಪಟ್ಟದಾನೆಯ ಮೇಲೆ ಪುಟ್ಟ ಮಗುವೆ.

ಮಗು ನಿನ್ನ ಚಂದಿರನೂರಿನ ಬಣ್ಣ ಬಣ್ಣದ ಕನಸು ಕರಗುತ್ತಾ ಹಗಲು ಬರುತ್ತಿದ್ದಂತೆ ಬೆಳ್ಳಿ ಮೋಡಗಳ ನಡುವೆ ಚಿನ್ನದ ಅಂಬಾರಿಯಲ್ಲಿ ನಿನ್ನನ್ನು ಕಳುಸಿಕೊಡುತ್ತಾರೆ. ಆಗ ನಾನು ಮುಂಜಾನೆ ಬಂದು ನಿನ್ನ 'ಕಂದಾ' ಎಂದು ಕೂಗುತ್ತೇನೆ. ನೀನು ಕಣ್ತೆರೆದು ಕಂಡ ಕನಸೆಲ್ಲವನ್ನು ನನ್ನ ಕಿವಿಗೆ ಇಂಪಾಗಿ ಹೇಳುವೆಯಂತೆ, ಈಗ ಮಲಗು ಮಗುವೇ ಎಂದು ಹೇಳುತ್ತಿದ್ದಾಳೆ.

ಜೋ, ಜೋ, ಜೋ-ಎಂದು ತೊಟ್ಟಿಲನು
ತೂಗುವೆನು, ಮಲಗೆನ್ನ ತುಂಟ ಮಗುವೆ;

ಮಲಗದಿರುವ ಕಂದನಿಗೆ ಪ್ರೀತಿಯಿಂದ ತಾಯಿ ಚಂದಿರನೂರಿನ ಆಸೆ ತೋರಿಸಿ ಮಗುವನ್ನು ಮಲಗಿಸುವ ಯತ್ನದಲ್ಲಿದ್ದಾಳೆ. ಇದರೊಟ್ಟಿಗೆ ಚಂದಿರನೂರಿನ ಕಲ್ಪನೆ ಅವಳ ಮನಸ್ಸಿನಲ್ಲಿ ಹೇಗೆ ಚಿತ್ರಿತವಾಗಿದೆ ಎಂಬುದನ್ನು ತಿಳಿಯಬಹುದು. ಚಂದಿರನೂರಿನ ಕಲ್ಪನೆಯಿಂದಲಾದರೂ ಮಗು ಮಲಗಬೇಕೆನ್ನುವುದು ಆಕೆಯ ಹಂಬಲವೆನ್ನಬಹುದು. ಒಟ್ಟಿನಲ್ಲಿ ಇದೊಂದು ಅದ್ಭುತ ಕಲ್ಪನೆಯೆಂದರೆ ತಪ್ಪಿಲ್ಲ. ತಾಯಿಯ ಜಗತ್ತಿನಲ್ಲಿ ಮಾತ್ರ ಇದು ಸಾಧ್ಯ.

ಹೀಗೆ ಸುಂದರ ಕಲ್ಪನೆಗಳನ್ನೊಳಗೊಂಡ 'ತೊಟ್ಟಿಲ ಹಾಡು' ಗೀತೆಯನ್ನು ಕುರಿತು 'ಚನ್ನವೀರ ಕಣವಿ'ಯವರು "ಹಗಲೆಲ್ಲ ಓಡಾಡಿ ದಣಿದ ಈ ತುಂಟ ಮಗುವನ್ನು ಸಂಜೆಯಾಗುತ್ತಲೂ ಎಳೆದು ತೊಟ್ಟಿಲಲ್ಲಿ ಮಲಗಿಸಿ ಈ ಮುದ್ದಿನ ಗಿಣಿಗೆ ಮಾತಿನ ಮಣಿಗೆ ಜೋಗುಳ ಹಾಡಿ ತೂಗುವಾಗ ತಾಯಿ ಪ್ರೀತಿಯೆಲ್ಲ ಹಾಡಾಗಿ ಹರಿಯುತ್ತದೆ. ಆ ಹಾಡನ್ನು ಕೇಳುತ್ತ ಮಗು ಮೆಲ್ಲಗೆ ಕಣ್ಣು ಮುಚ್ಚಿ ನಿದ್ರೆಯ ಮಡಿಲಲ್ಲಿ ಕನಸು ಕಾಣುತ್ತದೆ. 'ತೊಟ್ಟಿಲ ಹಾಡು' ತಾಯಿಯ ಇಂಥ ಭಾವ ಸಂಪತ್ತಿಗೆ ಸಾಕ್ಷಿಯಾಗಿದೆ" ಎಂದಿದ್ದಾರೆ.

ಕೆ.ಎಸ್.ನ. ಅವರ **'ಉಂಗುರ '** ಕವನ ಸಂಕಲನದ **"ಕಾಮನಬಿಲ್ಲು"** ಕವನವು ಹಠಮಾರಿ ಸ್ವಭಾವದ ಮಗುವಿನ ಚಿತ್ರಣವನ್ನು ನೀಡುತ್ತಾ ಈ ಹಠವನ್ನು ಬಿಡುವಂತೆ ಮಾಡುವ ತಾಯಿಯ ಚಿತ್ರಣವು ಇದೆ.

ಏಕಮ್ಮ ಅಳುತ್ತಾನೆ ನಿನ ಕಂದ?
ಬೇಕಂತೆ ಅವನಿಗೊಂದು ಪಾರಿವಾಳ
ಕೈಗೆ ಸಿಕ್ಕಿತೇನ ಪಾರಿವಾಳ,
ಚಿನ್ನ ರನ್ನದ ಗರಿಯ ಪಾರಿವಾಳ?

ಮಗುವಿನ ತಾಯಿಯನ್ನು ಏಕೆ ನಿನ್ನ ಮಗು ಅಳುತ್ತಿದ್ದಾನೆ ಎಂದು ಪ್ರಶ್ನಿಸಲಾಗುತ್ತದೆ, ಆಗ ಅವಳು ಅವನಿಗೆ ಪಾರಿವಾಳ ಬೇಕಂತೆ, ಕೈಗೆ ಸಿಕ್ಕುತ್ತದೆಯೇ ಚಿನ್ನದ ಗರಿಯ ಪಾರಿವಾಳ ಎನ್ನುತ್ತಿದ್ದಾರೆ. ಕಾಮನ ಬಿಲ್ಲನ್ನು ಮಗು ಚಿನ್ನ, ರತ್ನದ ಗರಿಯ ಪಾರಿವಾಳವೆಂದು ಭಾವಿಸಿ ಅದು ಬೇಕೆಂದು ಹಠ ಮಾಡುತ್ತಿರುತ್ತದೆ. ಸಂಜೆ ಅಂಜೂರ ಮರದ ಬಳಿ ಆತ ಆಡುತ್ತಿದ್ದಾಗ ಮೂಡಿದ ಕಾಮನಬಿಲ್ಲನ್ನು ಈತ ಈಗ ಬಯಸಿ ಹಠಮಾಡುತ್ತಿದ್ದ, ಸಂಜೆ ಮೂಡಿದ್ದು ಈಗ ಮರೆಯಾಗಿರುವ ಕಾಮನಬಿಲ್ಲನ್ನು ಈತನಿಗೆ ತಂದು ಕೊಡುವುದು ಹೇಗೆ? ಎಂದು ಯೋಚಿಸುತ್ತಿರುವಾಗ ಈ ರೀತಿಯ ಉಪಾಯ ಮಾಡುತ್ತಾರೆ.

ಉಪ್ಪು ತುಪ್ಪವ ಕಲಸಿದನ್ನವುಣಿಸಿ
ಉಗುರು ಬೆಚ್ಚಗೆ ಕಾದ ಹಾಲ ಕುಡಿಸಿ.
ತೂಗು ಮಂಚದ ಮೇಲೆ ತಂದುರುಳಿಸಿ
ಸಣ್ಣ ದನಿಯಲ್ಲಿ ಹಾಡಿ ಕನಸ ಬರಿಸಿ
ತೋರಿಸಿದವನಿಗೆ ಇವನ ಪಾರಿವಾಳ
ಚಿನ್ನ ರನ್ನದ ಗರಿಯ ಪಾರಿವಾಳ.

ಪಾರಿವಾಳದ ಹಠವಿಡಿದಿರುವ ಕಂದನಿಗೆ ತಾಯಿ ಉಪ್ಪು-ತುಪ್ಪ ಬೆರೆಸಿದನ್ನವನ್ನು ತಿನ್ನಿಸಿ, ಉಗುರು ಬೆಚ್ಚಗಿನ ಕಾದ ಹಾಲು ಕುಡಿಸಿ, ಮಲಗಿಸಿ ಸಣ್ಣ ದನಿಯಲ್ಲಿ ಜೋಗುಳ ಹಾಡುತ್ತಾ ಕನಸಿನಲ್ಲಿ ಪಾರಿವಾಳವನ್ನು ತೋರಿಸಿದಳು. ಇದರಿಂದ ಮಗುವು ತನ್ನ ಹಠವನ್ನು ಬಿಟ್ಟು ಸಮಾಧಾನವಾಗುತ್ತದೆ.

ತಾಯಿಯು ಮಗುವನ್ನು ಸಂತೈಸುವ ಅನೇಕ ಬಗೆಯಲ್ಲಿ ಇದು ಒಂದು ಬಗೆ ಎಂದು ತಿಳಿಯಬಹುದು ತಾಯಿಯ ತಾಳ್ಮೆಯ ಪ್ರತೀಕವೂ ಈ ಕವನವೆನ್ನಬಹುದು.

ಕೆ.ಎಸ್.ನ ಅವರ **'ಮೈಸೂರು ಮಲ್ಲಿಗೆ'** ಕವನ ಸಂಕಲನದ **'ರಾಮಬಂಟ'** ಕವನವು ಮಕ್ಕಳನ್ನು ದೇವರೆಂದು ಭಾವಿಸುವ ಹಿನ್ನಲೆಯಲ್ಲಿ ಚಿತ್ರಿಸಿದ್ದಾರೆ.

ಕಿಟಕಿಯೊಳಗೆ ನಿಂದು ನಕ್ಕು,
ಕರೆಯುತ್ತಿಹನು ರಾಮಬಂಟ,
ಮನೆಯೊಳೆಲ್ಲ ಹರಿದು ಹೊಕ್ಕ
ಹರಿಯುತಿಹನು ರಾಮಬಂಟ.

ಮಗುವನ್ನು ಆತನ ತುಂಟಾಟವನ್ನು ಶ್ರೀರಾಮನ ಬಂಟ ಹನುಮನಿಗೆ ಹೋಲಿಸಿದ್ದಾರೆ. ಹಾಗಾಗಿ ಅವನನ್ನು ಕವಿ ರಾಮಬಂಟ ಎಂದು ಕರೆಯುತ್ತಿದ್ದಾರೆ. ಮನೆಯ ಕಿಟಕಿಯೊಳಗೆ ನಿಂತು ನಕ್ಕು ಕರೆಯುತ್ತಾನೆ, ಮನೆಯಲ್ಲೆಲ್ಲ ಓಡುತ್ತಿರುವನು ಈ ರಾಮಬಂಟ ಎನ್ನುತ್ತಾರೆ.

ಜಾಣನವನು, ಬೆಳ್ಳಿಕುಳ್ಳ,
ಬಾಯಲೆರಡು ಪುಟ್ಟಹಲ್ಲು!
ಚೂರು ಮಾತು, ಮುದ್ದು ಕಳ್ಳ,
ಅಲೆಯುತಿಹನು ಇಲ್ಲು, ಅಲ್ಲು!

ಈ ರಾಮಬಂಟ ಮಗು ತುಂಬಾ ಜಾಣ, ಇವನಿಗೆ ಪುಟ್ಟ ಹಲ್ಲು, ತೊದಲು ಮಾತು, ಕುಳ್ಳನಾಗಿದ್ದಾನೆ. ಎಲ್ಲೆಲ್ಲೂ ಓಡಾಡುತ್ತಿದ್ದಾನೆ ಎಂದು ಹೇಳುತ್ತಾ ಮಗು ಇನ್ನು ಬೆಳವಣಿಗೆ ಚಿಕ್ಕದು ಎಂಬುದರ ಪ್ರತೀಕವಾಗಿ ಹೇಳಿದ್ದಾರೆ.

ಪುಟ್ಟ ಅಂಗಿಯೊಂದ ತೊಟ್ಟು
ಹಣೆಗೆ ಕಪ್ಪುಬಟ್ಟನಿಟ್ಟು,
ಹೊಳೆವ ದೊಡ್ಡ ಕಣ್ಣ ಬಿಟ್ಟು
ಪುಟ್ಟ ಪುಟ್ಟ ಹೆಜ್ಜೆಯಿಟ್ಟು
ಬೀದಿಯೊಳಗೆ ಬಳ್ಳಿ ಕಂದ
ಚಂದ್ರನಂತೆ ಬರುವನು.

ರಾಮ ಬಂಟನಂತ ಮಕ್ಕಳು ನೋಡಲು ಬಲು ಚಂದ. ಅದರಲ್ಲೂ ಅವರಿಗೆ ಅಂಗಿಯೊಂದು ತೊಡಿಸಿ ಕಪ್ಪು ಚುಕ್ಕಿ ಹಣೆಗೆ ಇಟ್ಟುಕೊಂಡು ಪುಟ್ಟ ಪುಟ್ಟ ಹೆಜ್ಜೆಯನ್ನಿಟ್ಟುಕೊಂಡು ಬರುತ್ತಿದ್ದರೇ, ಬೀದಿಯಲ್ಲಿ ಆತ ಚಂದ್ರನಂತೆ ಕಾಣುತ್ತಾನೆ ಎಂದು ಕವಿ ವರ್ಣಿಸುತ್ತಾರೆ.

ರಾಮಬಂಟ ಬಹಳ ತುಂಟ,
ಮಕ್ಕಳೆಲ್ಲ ಹಾಗೆಯೆ!
ಅವನು ನನ್ನ ಪುಟ್ಟ ನಂಟ,
ಮಕ್ಕಳೆಲ್ಲ ದೇವರೆ!

ಮಕ್ಕಳೆಲ್ಲರೂ ಚಿಕ್ಕವರಾಗಿರುತ್ತಾರೆ ಅವರ ಮನಸ್ಸು ಹಾಲಿನಂತೆಯೇ ಇರುತ್ತದೆ. ಮನೆಗೆ ದೇವರಂತೆ ಮಗು ಇರುತ್ತದೆ. ಈ ಮಗು ಮನೆಗೆ ಬೆಳಕಿನ ಪ್ರತೀಕವಾಗಿದ್ದಾನೆ. ಇಂತ ಮಕ್ಕಳೆಲ್ಲರೂ ದೇವರ ಪ್ರತೀಕವೇ ಆಗಿದ್ದಾರೆಂದು ಕವಿ ವರ್ಣಿಸಿದ್ದಾರೆ. ಮಕ್ಕಳಲ್ಲಿ ಭೇದವಿಲ್ಲ ಅವು ಶ್ರೀಮಂತರ ಅಥವಾ ಬಡವರ ಮಕ್ಕಳು ಎಂಬ ಭೇದವಿಲ್ಲ. ಅವರ ತುಂಟತನ ಮನಸ್ಸಿನಲ್ಲಿ ಆ ಭಾವನೆಗಳು ಸಂಧಿಸಿರುವುದಿಲ್ಲ, ಹಾಗಾಗಿ ಏನೂ ಅರಿಯದ ಮುಗ್ಧ ಹಾಲಿನಂತ ಮನಸ್ಸಿನ ಮಕ್ಕಳೆಲ್ಲ ದೇವರ ಪ್ರತೀಕವೆಂದು ಕವಿ ಹೇಳಿದ್ದಾರೆ.

ಕೆ.ಎಸ್.ನ. ಅವರ **ದೀಪದ ಮಲ್ಲಿ'** ಕವನ ಸಂಕಲನದ **"ಮಗು ಮಲಗಿದೆ"** ಎಂಬ ಕವನದಲ್ಲಿ ಮಗುವು ಮಲಗಿರುವ ಸಂದರ್ಭದಲ್ಲಿ ಅದರ ದೇಹಚಹರೆಯನ್ನು ಕುರಿತು ಕವಿ ತಿಳಿಸಿದ್ದಾರೆ.

ಮಗು ಮಲಗಿದೆ ಮೆತ್ತಗೆ ಹದ ಮಾಡಿದ
ಬೆತ್ತದ ತೊಟ್ಟಿಲಲ್ಲಿ,
ಬೆಳಗಿನ ಹನಿ ಇದರಂತೆಯೆ ಥಳ ಥಳ
ಗರಿಕೆಯ ಬಟ್ಟಲಲ್ಲಿ!

ಮಗು ಬಿದಿರಿನಿಂದ ಮಾಡಿದ ತೊಟ್ಟಿಲಲ್ಲಿ ಮಲಗಿದೆ. ಅದು ಮುಂಜಾನೆ ಗರಿಕೆಯ ಗಿಡದಲ್ಲಿ ಮಂಜಿನ ಹನಿ ಕೂತಿರುವಂತೆ ಆ ಮಗು ಮಲಗಿದೆ ಎಂದು ವರ್ಣಿಸುತ್ತಿದ್ದಾರೆ.

ಹಾಲನ್ನು ಕುಡಿದು ಅದರ ಹನಿ ತುಟಿಯ ಮೇಲೆ ಕುಳಿತಿದೆ. ಅದು ಮಲಗಿದ್ದರೂ, ಕೆನ್ನೆಯ ಮೇಲೆ ಮುಗ್ಧ ನಗೆ ಬೀರುವಂತೆ ಮಲಗಿದೆ ಎಂದು ಕವಿ ಹೇಳುತ್ತಿದ್ದಾರೆ.

ಬೆಳ್ಳಂಬೆಳಗೂ ಎತ್ತಿ ಇಳಿಸಿ
ಮೈ ಕೈ ಕುಲಕಿ–
ಆಯಾಸವೆ ಆಗಿರಬೇಕು !
ನಕ್ಕು ನಗಿಸಿ, ಅತ್ತು ಅಳಿಸಿ
ತಾಯನೆ ಬೆದರಿಸಿ
ಆಯಾಸವೇ ಆಗಿರಬೇಕು!

ಮಗು ಮಲಗಿರುವ ಸಂದರ್ಭದಲ್ಲಿ ಪದೇ ಪದೇ ಮೈ ಮುರಿಯುತ್ತಿರುತ್ತದೆ. ತೊಟ್ಟಿಲನು ಕಾಲಲ್ಲಿ ಬಡಿಯುತ್ತಲೇ ಇರುತ್ತದೆ. ಇದಕ್ಕೆ ಬೆಳಿಗ್ಗೆಯಿಂದ ಮಗುವನ್ನು ಎತ್ತಿಕೊಳ್ಳುವುದು, ಇಳಿಸುವುದು, ಮಾಡಿ ಆಯಾಸವೇ ಆಗಿರಬೇಕು. ನಕ್ಕು ನಗಿಸುವುದು ಅಳುವುದರಿಂದ ಜೊತೆಗೆ ಹಾಲಿನ ಕೆನೆಯಲ್ಲಿ ಬಾದಮಿ ಸಿಕ್ಕಿಯೋ, ಕಷ್ಟವಾಯಿತೇನೋ ಎಂದು ಕವಿ ಅನೇಕ ಕಾರಣಗಳನ್ನು ಹೇಳುತ್ತಾರೆ. ಮಗುವು ಮಲಗಿರುವ ಸಂದರ್ಭದಲ್ಲಿ ಅದರ ಚಹರೆಗಳನ್ನು ಇಷ್ಟು ಸೂಕ್ಷ್ಮವಾಗಿ ಗಮನಿಸಿ ತಿಳಿದಿರುವುದನ್ನು ಗಮನಿಸಿದರೆ ಮಕ್ಕಳ ಬಗೆಗಿನ ಒಲವು ಕವಿಯಲ್ಲಿ ಅಗಾಧವಾಗಿತ್ತು ಎಂದು ತಿಳಿಸುತ್ತದೆ.

೪.೬ ತವರಿನ ಬಾಂಧವ್ಯ- (ಮಗಳು-ತಂದೆ ತಾಯಿ)

ನಮ್ಮ ಸಂಸ್ಕೃತಿಯಲ್ಲಿ ವಿವಾಹಕ್ಕೆ ಅಗಾಧವಾದ ಗೌರವ ಮತ್ತು ಮಹತ್ವವಿದೆ. ಈ ವಿವಾಹ ಬಾಂಧವ್ಯವೆಂಬುದು ಎರಡು ಮುಗ್ಧ ಮನಸ್ಸುಗಳನ್ನು ಸೇರಿಸುವುದರ ಜೊತೆಗೆ ಆ ಗಂಡು ಮತ್ತು ಹೆಣ್ಣಿನ ಕುಟುಂಬಗಳನ್ನು, ಆ ಎರಡು ಊರುಗಳನ್ನು, ಎರಡು ಸಂಸ್ಕೃತಿಯನ್ನು, ಸಂಪ್ರದಾಯವನ್ನು ಪರಸ್ಪರ ಪ್ರೀತಿಯಿಂದ ಬೆಸೆಯುವ ಕಾರ್ಯವನ್ನು ಮಾಡುತ್ತದೆ. ಇವುಗಳೆಲ್ಲವು ಇಂದು ವಾಸ್ತವದಲ್ಲೂ ಹೆಚ್ಚು ಮಹತ್ವದ ಸ್ಥಾನದಲ್ಲಿರುವುದು. ವಿವಾಹವಾದ ಮಗಳ ಮೇಲೆ ತವರಿನವರ ಪ್ರೀತಿ, ತವರಿನ ಮೇಲೆ ಹೆಣ್ಣಿಗೆ ಇರುವ ಪ್ರೀತಿಯಾಗಿದೆ.

ಈ ಬಾಂಧವ್ಯವನ್ನು ಕುರಿತು ಕೆ.ಎಸ್.ನ.ರಂತ ಕವಿಗಳು ತಮ್ಮ ಕವನದಲ್ಲಿ ತಿಳಿಸುವ ಮೊದಲೇ ನಮ್ಮ ಜನಪದರು ಅನೇಕ ಗಾದೆ, ತ್ರಿಪದಿಗಳ ಮೂಲಕ ತಿಳಿಸಿದ್ದಾರೆ.

> "ನೀರ ಮೇಲಿನ ಎಣ್ಣೆ ನುಣುಪು ತಪ್ಪದು
> ಹೆಣ್ಣಿಗೆ ತೌರು ಮನೆ ಆಸೆ ತಪ್ಪದು"[2]

ಎಂಬ ಗಾದೆಯು ಹೆಣ್ಣಿಗೆ ತವರಿನ ಮೇಲಿನ ಪ್ರೀತಿ ಎಷ್ಟು ಗಟ್ಟಿಯಾಗಿರುತ್ತದೆ ಎಂದು ತಿಳಿಸುತ್ತದೆ. ಹರಳೆಣ್ಣೆಗಾಗಿ ನೀರಿಟ್ಟು ಹರಳು ಬೇಯಿಸುತ್ತಾರೆ ಬೆಂದಾದ ಮೇಲೆ ತೇಲುವ ಎಣ್ಣೆಯನ್ನೆಲ್ಲ ಅಂಗೈಯಲ್ಲಿ ತೆಗೆದು ಕುಡಿಕೆಗೋ ಮಡಿಕೆಗೋ ತುಂಬಿಕೊಳ್ಳುತ್ತಾರೆ. ಎಷ್ಟೇ ತೆಗೆದರೂ, ನೀರಿನ ಮೇಲೆ ಎಣ್ಣೆಯ ನುಣುಪು ಕೊಂಚವೂ ಉಳಿಯದಂತೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಎಷ್ಟೇ ಪ್ರಯತ್ನಿಸಿದರೂ ಹೇಗೆ ನೀರಿನ ಮೇಲಿನ ಎಣ್ಣೆಯ ನುಣುಪು ಹೋಗುವುದಿಲ್ಲವೋ ಹಾಗೆ ಹೆಣ್ಣಿಗೆ ತವರು ಮನೆಯ ಆಸೆ ಹೋಗುವುದಿಲ್ಲ ಎಂಬುದು ಧ್ವನಿತವಾಗಿದೆ. ಇಂತಹ ಅನೇಕ ಉದಾಹರಣೆಗಳು ನಮ್ಮ ಜನಪದ ಸಾಹಿತ್ಯದಲ್ಲಿರುವಂತೆ, ಶಿಷ್ಟ ಸಾಹಿತ್ಯದಲ್ಲಿಯೂ ಇದೆ. ಅದರಲ್ಲಿಯೂ ಕೆ.ಎಸ್.ನ. ಅವರ ಅನೇಕ ಕವನಗಳಲ್ಲಿ ಕಾಣಬಹುದು. ಹೆಣ್ಣುಮಗಳ ಮೇಲಿರುವ ವಾತ್ಸಲ್ಯವು ತವರಿನವರಲ್ಲಿ ಹೇಗಿರುತ್ತದೆಂದು ತಿಳಿಸಿದ್ದಾರೆ.

"ಉಂಗುರ" ಕವನ ಸಂಕಲನದ "ಮನೆಗೆ ಬಂದ ಹೆಣ್ಣು" ಕವನದಲ್ಲಿ ಕವಿ ಅಪರಿಚಿತ ವಾತಾವರಣಕ್ಕೆ ಬಂದ ಹೆಣ್ಣು ಕ್ರಮೇಣ ಆ ಪರಿಸರಕ್ಕೆ ಹೊಂದಿಕೊಳ್ಳುವ ಬಗೆಯನ್ನೂ, ಅವಳ ಸುಪ್ತ ಮನಸ್ಸಿನಲ್ಲಿರುವ ತವರಿನ ಚಿಂತೆಯನ್ನು, ಪ್ರೀತಿಯನ್ನು ತಿಳಿಸುತ್ತದೆ.

ಮೊದಲ ದಿನ ಮೌನ ಅಳುವೇ ತುಟಿಗೆ ಬಂದಂತೆ,
ಚಿಂತೆ ಬಿಡಿ ಹೂವ ಮುಡಿದಂತೆ;
ಹತ್ತು ಕಡೆ ಕಣ್ಣು ಸಣ್ಣಗೆ ದೀಪ ಉರಿದಂತೆ;
ಜೀವದಲ್ಲಿ ಜಾತ್ರೆ ಮುಗಿದಂತೆ

ಮದುವೆ ಮುಗಿಸಿ ಗಂಡನ ಮನೆಗೆ ಬಂದ ಮೊದಲ ದಿನ ಆಕೆ ಮೌನಿ; ಹೊಸ ವಾತಾವರಣದಲ್ಲಿ ಏನು ಮಾತಾಡಿದರೆ ಏನಾಗುತ್ತೋ ಎಂಬ ಅಳುಕಿನಿಂದ ತೌರಿನಲ್ಲಿ ಅರಳು ಹುರಿದಂತೆ ಮಾತಾನಾಡುತ್ತಿದ್ದ ಯಾವುದೇ ಹೆಣ್ಣಾದರೂ ಗಂಡನ ಮನೆಯಲ್ಲಿ ಅಳುವೇ ತುಟಿಗೆ ಬಂದಂತೆ, ತವರು ಮನೆಯವರನ್ನು ಬಿಟ್ಟು ಬಂದ ದುಃಖ, ಆದರೆ ಅದನ್ನು ತಡೆಹಿಡಿದಿದ್ದಾಳೆ. ಯಾವ ಕ್ಷಣದಲ್ಲಾದರೂ ಇದು ತುಳುಕಬಹುದು ಅಂಥಹ ಸ್ಥಿತಿ. ಬಿಡಿ ಹೂವಿನಂತೆ ಇಲ್ಲಿ ಏಕಾಂಗಿಯಂತೆ ಇದ್ದಾಳೆ. ಸಣ್ಣಗೆ ದೀಪ ಉರಿದಂತೆ ಕಾಂತಿ ಹೀನವಾದ ಕಣ್ಣುಗಳು, ಆದರೆ ಹತ್ತುಕಡೆ ಅವು ಆತಂಕದಿಂದ ಗಮನಿಸುತ್ತಿದೆ. ಎಲ್ಲವನ್ನೂ ಪರಿಚಯಿಸಿಕೊಳ್ಳುವ ಕುತೂಹಲದ ಜೊತೆಗೆ ಯಾರು ತನ್ನನ್ನು ಗಮನಿಸುತ್ತಿದ್ದಾರೊ, ಯಾರು ಏನನ್ನುತ್ತಾರೋ ಎಂಬ ಆತಂಕದ ಭಾವವೂ ಇಲ್ಲಿದೆ, ಮದುವೆಯ ಉತ್ಸಾಹ ಮುಗಿದು ಈಗ ತನ್ನವರೆಲ್ಲರನ್ನೂ ಬಿಟ್ಟು ಬಂದಾಗಿನ ಸ್ಥಿತಿ. ಜೊತೆಗೆ ಬಾಲ್ಯದ ಸುಖ ಮುಗಿದು ಹೊಸ ಜವಾಬ್ದಾರಿಯನ್ನು ಹೊರಬೇಕಾದ ಅರಿವಿನ ಸ್ಥಿತಿಯನ್ನು ಜೀವನದಲ್ಲಿ ಜಾತ್ರೆ ಮುಗಿದಂತೆ ಎಂಬ ಸಾಲು ಧ್ವನಿಸುತ್ತದೆ ಎನ್ನಬಹುದು.

ಎರಡನೆಯ ಹಗಲು ಇಳಿಮುಖವಿಲ್ಲ, ಇಷ್ಟು ನಗು–
ಮೂಗುತಿಯ ಮಿಂಚು ಒಳಹೊರಗೆ;
ನೀರೊಳಗೆ ವೀಣೆ ಮಿಡಿದಂತೆ ಆಡಿದ ಮಾತು,
ಬೇಲಿಯಲಿ ಹಾವು ಹರಿದಂತೆ.

ಎರಡನೆಯ ಹಗಲು ಹುಡುಗಿಯ ಮುಖದಲ್ಲಿ ಕೊಂಚ ಗೆಲುವು ಬಂದಿದೆ. ಮೊದಲ ದಿನದ ಇಳಿಮುಖವಿಲ್ಲ. ಒಂದಿಷ್ಟು ನಗು ಮುಖದಲ್ಲಿ ತುಳುಕುತ್ತದೆ. "ಮೂಗುತಿಯ ಮಿಂಚು ಒಳಹೊರಗೆ"

ಎಂಬ ಸಾಲು ಮೊದಲ ದಿನ ಏನೂ ಮಾಡಲು ತೋಚದೆ ಚಿಂತಿತಳಾಗಿ ಇದ್ದ ಹೆಣ್ಣು ಇಂದು ಒಳ ಹೊರಗೆ ಓಡಾಡುತ್ತಾ ಸಡಗರದಿಂದ್ದಾಳೆ ಎನ್ನುವುದನ್ನು ತಿಳಿಸುಸತ್ತದೆ. ಆದರೆ ಸಹಜವಾಗಿ ಸಲೀಸಾಗಿ ಮಾತನಾಡದೆ ತುಟಿವರೆಗ ಬಂದ ಮಾತುಗಳನ್ನು ತಡೆತಡೆದು ಆಡುತ್ತಾಳೆ. ನಿಧಾನವಾಗಿ, ಮೆಲ್ಲಗೆ ಎಚ್ಚರಿಕೆಯಿಂದ ಮಾತಾನಾಡುವ ಅವಳ ಮಾತು ನೀರೊಳಗೆ ವೀಣೆ ಮಿಡಿದಂತೆ ಬೇಲಿಯಲಿ ಹಾವು ಹರಿದಂತೆ ಕಷ್ಟದಾಯಕವಾಗಿದೆ ಎಂದು ಹೇಳಬಹುದು.

"ಮೈಸೂರ ಮಲ್ಲಿಗೆ" ಯ ಕವನ ಸಂಕಲನದಲ್ಲಿ **"ಪ್ರಶ್ನೆಗೆ ಉತ್ತರ"** ಎಂಬ ಕವನದಲ್ಲಿ ಗಂಡ ಕೇಳುವ ಪ್ರಶ್ನೆಗಳಿಗೆ ಅತಿ ಉಪಾಯದಿಂದ ಉತ್ತರಿಸುವ ಹೆಣ್ಣು ಮತ್ತು ಆ ಉತ್ತರದಲ್ಲಡಗಿರುವ ತವರಿನ ಪ್ರೀತಿಯನ್ನು ಕಾಣಬಹುದು.

ಒಂದಿರುಳು ಕನಸಿನಲಿ ನನ್ನವಳ ಕೇಳಿದೆನು
ಚೆಂದ ನಿನಗಾವುದೆಂದು–
ನಮ್ಮೂರು ಹೊನ್ನೂರು, ನಿಮ್ಮೂರು ನವಿಲೂರು
ಚೆಂದ ನಿನಗಾವುದೆಂದು.

ಪತಿ ಒಮ್ಮೆ ತನ್ನ ಸತಿಯನ್ನು ಒಂದು ರಾತ್ರಿ ನಿನಗೆ ನನ್ನ ಹೊನ್ನೂರು ಚೆಂದವೋ? ಅಥವಾ ನಿಮ್ಮ ಊರು ನವಿಲೂರು ಚೆಂದವೋ? ಎಂದು ಕೇಳುತ್ತಾನೆ. ಆಕೆ ನಮ್ಮೂರು ಚೆಂದವೋ ನಿಮ್ಮೂರು ಚೆಂದವೋ ಎಂದು ಹೀಗೇಕೆ ನನ್ನ ಕೇಳುತ್ತಿದ್ದೀರಿ? ನಮ್ಮೂರ ಮಂಚದಲಿ ನಿಮ್ಮೂರ ಕನಸು ಕಾಣುವುದನ್ನು ಬಿಡಿಸಿ ಹೇಳಬೇಕೆ? ಸುಮ್ಮನಿರಿ ಎನ್ನುತ್ತಾಳೆ. ಸಾಮಾನ್ಯವಾಗಿ ಹೆಣ್ಣು ಮಕ್ಕಳಿಗೆ ಗಂಡನ ಮನೆಯಲ್ಲಿ ಎಂತಹದ್ದೇ ಸುಖ ಸಂತೋಷವಿರಲಿ ಆಕೆಗೆ ತವರೂರಿನ ಮೇಲೆ ಮೋಹ ಹೆಚ್ಚಾಗಿರುತ್ತದೆ. ಅದನ್ನು ಮತ್ತೊಮ್ಮೆ ಪ್ರಶ್ನಿಸುವ ಕೆಲಸವನ್ನು ಕವನದ ನಾಯಕ ಮಾಡಿದ್ದಾನೆ ಎನ್ನಬಹುದು.

ತೌರೂರ ದಾರಿಯಲಿ ತೆಂಗುಗಳು ತಲೆದೂಗಿ
ಬಾಳೆಗಳು ತೋಳ ಬೀಸಿ;
ಮಲ್ಲಿಗೆಯ ಮೊಗ್ಗುಗಳು ಮುಳ್ಳುಬೇಲಿಯ ವರಿಸಿ
ಬಳುಕುತಿರೆ ಕಂಪ ಸೂಸಿ;
ನಗುನಗುತ ನಮ್ಮೂರ ಹೆಣ್ಣುಗಳು ಬರುತಿರಲು
ನಿಮ್ಮೂರ ಸಂತೆಗಾಗಿ,

ತವರೂರಿನ ದಾರಿಯಲ್ಲಿ ತೆಂಗುಗಳು ತಲೆದೂಗಿದಂತೆ ಇವೆ, ಬಾಳೆಗಳು ತೋಳ ಬೀಸಿ ಕರೆಯುತ್ತಿವೆ. ಮಲ್ಲಿಗೆಯ ಮೊಗ್ಗುಗಳು ಮುಳ್ಳು ಬೇಲಿಯ ನಡುವೆಯು ಕಂಪ ಸೂಸಿ ಬಳುಕುತ್ತಿವೆ. ಈ ನಡುವೆ ನಗು ನಗುತ ನಮ್ಮೂರ ಹೆಣ್ಣುಗಳು ಹೊನ್ನೂರು ಸಂತೆಗಾಗಿ ಬರುತ್ತಿರುತ್ತಾರೆ. ನಿಮ್ಮ ಪ್ರೇಮ ನನ್ನನ್ನು ಹೊನ್ನೂರಿನಲ್ಲಿ ನಿಲ್ಲುವಂತೆ ಮಾಡಿರುವಾಗ ನನ್ನನ್ನು ನಿಮ್ಮೂರು ಚೆಂದವೋ, ನಮ್ಮೂರು ಚೆಂದವೋ ಎಂದು ಏಕೆ ಕೇಳುವಿರಿ ನನ್ನ ಅರಸ ಎಂದು ಮಡದಿ ಕೇಳುತ್ತಿದ್ದಾಳೆ. ಆಕೆ ಗಂಡನಿಗೆ ನೋವಾಗದಿರುವಂತೆ ಉತ್ತರಿಸುವುದರ ಜೊತೆಗೆ ತಮ್ಮ ತವರಿನ ಸಮೃದ್ಧತೆಯನ್ನು ಹೊಗಳುತ್ತಿದ್ದಾಳೆ. ತೆಂಗುಗಳ ಸಮೃದ್ಧಿಯ ಜೊತೆಗೆ ಬಾಳೆಗಳ ಮತ್ತು ಮಲ್ಲಿಗೆ ಹೂಗಳ ಸೊಬಗಿದೆ. ಹೆಣ್ಣು ಮಕ್ಕಳು ಸೌಂದರ್ಯದ ಸಂಕೇತವಾಗಿ ಇಲ್ಲಿ ವರ್ಣಿತವಾಗಿರುವುದನ್ನು ಗಮನಿಸಬಹುದು.

ಮೈಸೂರ ಮಲ್ಲಿಗೆ ಕವನ ಸಂಕಲನದ "ತೌರ ಹಂಬಲ" ಕವನದಲ್ಲಿ ಗಂಡ ತನ್ನ ಹೆಂಡತಿಗೆ ಇರುವ ತವರಿನ ಹಂಬಲವನ್ನು ಕುರಿತು ಹೇಳುತ್ತಿದ್ದಾರೆ.

ತೌರ ಹಂಬಲ ಹಿಡಿದು ಮಂಕಾದಳೆನ್ನ ಚೆನ್ನೆ;
ಇರುಳೆಲ್ಲ ಕನವರಿಕೆ.
ಹಗಲೆಲ್ಲ ತೂಕಡಿಕೆ,
ಏಳು ತಿಂಗಳ ಬಸುರಿ; ತೌರ ಕಡೆ ಕಣ್ಣು, ಕೆನ್ನೆ.

ತವರಿನ ಮೇಲಿನ ತೀವ್ರವಾದ ಆಸೆಯಿಂದ ಮುಖದಲ್ಲಿ ಕಾಂತಿಹೀನವಾಗಿ ಮಂಕಾಗಿದ್ದಾಳೆ ನನ್ನ ಚೆಲುವೆ, ರಾತ್ರಿಯ ನಿದ್ದೆಯಲ್ಲೂ ತವರಿನದೆ ಕನವರಿಕೆ, ಹಗಲೆಲ್ಲ ಅದನ್ನ ನೆನೆದು ನಿದ್ದೆಯಿಲ್ಲದೆ ತೂಕಡಿಸುತ್ತಾಳೆ. ಏಳು ತಿಂಗಳ ಬಸುರಿ ಇವಳೀಗ ತನ್ನ ಕಣ್ಣುಗಳೆಲ್ಲವನ್ನು ತವರ ಕಡೆ ಇರಿಸಿದ್ದಾಳೆ.

ಹೆಣ್ಣು ಗರ್ಭವತಿಯಾದ ಸಂದರ್ಭದಲ್ಲಿ ಅನೇಕ ರೀತಿಯ ಆಸೆಗಳು ಇರುತ್ತವೆಂದೂ, ಅವುಗಳನ್ನು ಪೂರೈಸದಿದ್ದರೆ, ಮಗುವಿಗೆ ತೊಂದರೆಯಾಗುವುದೆಂಬುದು ವಾಡಿಕೆ. ಅವಳು ತನ್ನ ಪತಿಯನ್ನು ಮರೆತು ಅದನ್ನೆ ಚಿಂತಿಸುತ್ತಿರುವುದನ್ನು ಕವಿ ಇಲ್ಲಿ ವರ್ಣಿಸಿದ್ದಾರೆ.

ಹಳ್ಳಿಯೆರಡರ ಮಧ್ಯೆ ಹೊಳೆ ಹರಿಯುತ್ತಿದೆ ಅದು ತುಂಬುಹೊಳೆ ಅದನ್ನು ದಾಟಿ ಹೋಗಲು ಆಗದೆ ದಡದ ಮೇಲೆ ನಿಂತಿದ್ದಾಳೆ. ತವರು ಮತ್ತು ಗಂಡನ ಮನೆಯ ಮಧ್ಯೆ ಇರುವ ಹೆಣ್ಣು ಅತ್ತ ತವರು ಮನೆಗೆ ಗಂಡನನ್ನು ಬಿಟ್ಟು ಹೋಗಲು ಮನಸ್ಸಿಲ್ಲದೆ ಮತ್ತೆ ತೀರಾ ತವರನ್ನು ಮರೆತು ಇರಲಾರದೆ ದ್ವಂದ್ವ ಮನಸ್ಥಿತಿ ಆಕೆಗಿರುವುದನ್ನು ಕವಿ ಇಲ್ಲಿ ಚಿತ್ರಿಸಿದ್ದಾರೆ.

ಮೈಸೂರ ಮಲ್ಲಿಗೆ ಕವನ ಸಂಕಲನದ 'ಒಬ್ಬಳೇ ಮಗಳು' ಕವನದಲ್ಲಿ ಮದುವೆ, ಮಾಡಿಕೊಟ್ಟ ಹೆಣ್ಣಿನ ತಂದೆ–ತಾಯಿಗೆ ಅಳಿಯ ಸಾಂತ್ವನ ಹೇಳುತ್ತಿರುವುದನ್ನು ಚಿತ್ರಿಸಲಾಗಿದೆ.

ಒಬ್ಬಳೇ ಮಗಳೆಂದು ನೀವೇಕೆ ಕೊರಗುವಿರಿ?
ಒಬ್ಬಳೇ ಮಡದಿಯೆನಗೆ!–
ಹಬ್ಬದೂಟದ ನಡುವೆ ಕಣ್ಣೀರ ಸುರಿಸದಿರಿ;
ಸುಮ್ಮನಿರಿ, ಮಾವನವರೆ.

ಮಗಳಿಗೆ ಮದುವೆ ಮಾಡಿ ಗಂಡನ ಮನೆಗೆ ಕಳಿಸಿಕೊಡುವಾಗ ಆಗುವ ನೋವು ಅಪಾರ. ಅದರಲ್ಲೂ ಒಬ್ಬಳೇ ಮಗಳಾದರಂತೂ ಆ ನೋವು ಇನ್ನೂ ಹೆಚ್ಚು ತೀವ್ರತೆ ಪಡೆದು ಕೊಳ್ಳುತ್ತದೆ. ಆಗ ಸಹಜವಾಗಿ, ತಂದೆ ಒಬ್ಬಳೇ ಮಗಳೆಂದು ಮುದ್ದಾಗಿ ಸಾಕಿರುವೆವು ಎಂದು ಹೇಳುತ್ತಾರೆ. ಆಗ ಅಳಿಯ ಮಾವನಿಗೆ 'ನಿಮಗೆ ಒಬ್ಬಳೇ ಮಗಳು ನಿಜ ಸರಿ, ಆದರೆ ನನಗೇನು ಹತ್ತಾರು ಜನ ಹೆಂಡತಿಯರಿದ್ದಾರೆಯೇ? ನನಗೂ ಒಬ್ಬಳೇ ಮಡದಿ. ನಾನು ಚೆನ್ನಾಗಿ ನೋಡಿಕೊಳ್ಳುತ್ತೇನೆ. ಹಬ್ಬದೂಟದ ಸಂಭ್ರಮದ ಸಂದರ್ಭದಲ್ಲಿ ಕಣ್ಣೀರು ಹಾಕಬೇಡಿ ಎಂದು ಹಾಸ್ಯಭರಿತವಾಗಿ ಹೇಳುತ್ತಿರುವುದನ್ನು ಕಾಣುತ್ತೇವೆ.

ಒಬ್ಬರೆದುರು ನಿಂತು ತಲೆಯೆತ್ತಿ ನೋಡುವಳೆ.
ನುಡಿಯುವಳೆ ನಿಮ್ಮ ಮಗಳು!

ಹಿರಿಯರು, ಸಂಬಂಧಿಕರು ಯಾರ ಬಳಿಯಾದರು ನಿಂತು ತಲೆಯೆತ್ತಿ ಮಾತನಾಡುವುದಿಲ್ಲ ಅವಳು. ಅಷ್ಟು ವಿನಯವಂತಿಕೆಯಿಂದ ಎಲ್ಲರಿಗೂ ಗೌರವ ಕೊಡುವವಳು ನಿಮ್ಮ ಮಗಳು. ಒಂದು ಬೆಟ್ಟದಲ್ಲಿ ಹೊಳೆ ಹುಟ್ಟಿ, ಅದು ಬಯಲಲ್ಲಿ ಹರಿದು ಯಾವ ನಾಡ ಜನರಿಗೋ ಸಂತೋಷ ನೀಡುತ್ತದೆ, ಹಾಗೇಯೇ ನಿಮ್ಮ ಮಗಳು, ನಿಮ್ಮ ಮನೆಯಲ್ಲಿ ಹುಟ್ಟಿ ಬೆಳೆದಿದ್ದಾಳೆ, ಇಂದು ನನ್ನೂರಿಗೆ ವಿವಾಹ ಮಾಡಿದ್ದೀರಿ. ಇನ್ನೆಲ್ಲ ಇವಳಿಗೆ ಸಂಬಂಧಿಸಿದ ವಿಚಾರಗಳು ನನಗಿರಲಿ, ನನ್ನನ್ನು ತುಂಬು ಪ್ರೀತಿಯಿಂದ ಕಾಣುವ ನಿಮ್ಮ ಮಗಳು ಒಂದು ಹೂವಿನಂತೆ, ಆ ಹೂವನ್ನು ನಾನು ಚೆಂದವಾಗಿ ನೋಡಿಕೋಳ್ಳುತ್ತೇನೆ ಎಂದು ಅಳಿಯ ಹೇಳುತ್ತಿದ್ದಾನೆ. ಕವಿ ಇಲ್ಲಿ ಹೆಣ್ಣನ್ನು ಒಂದು ಹೊಳೆಗೆ ಹೋಲಿಸಿ ಹೇಳಿರುವುದು ವಿಶೇಷವಾಗಿ ಕಾಣಬರುತ್ತದೆ.

ಅತ್ತ ನೀವೆಳೆಯುವಿರಿ; ಇತ್ತ ನಾನೆಳೆಯುವೆನು
ನಲುಗುವಳು ನಡುವೆ ಹುಡುಗಿ.
ಒಬ್ಬಳೇ ಸೊಸೆಯೆಂದು–ಸೊಸೆಯಲ್ಲ ಮಗಳೆಂದು
ದುಡಿಯುತಿಹಳೆನ್ನ ತಾಯಿ.

ತವರಿನವರು ತನ್ನ ಮಗಳೆಂದು, ಇತ್ತ ನಾನು ನನ್ನ ಹೆಂಡತಿಯೆಂದು ಇಬ್ಬರು ಅವಳನ್ನು ಅತ್ತ ಇತ್ತ ಎಳೆದಾಡುತ್ತಿರುತ್ತೇವೆ, ಹೀಗೆ ಮಾಡಿದರೆ ನಡುವೆ ಅವಳು ನಲುಗುತ್ತಾಳೆ. ನನ್ನ ತಾಯಿಯು ಅವಳನ್ನು ಸೊಸೆಯಲ್ಲ ಮಗಳೆಂದು ಭಾವಿಸಿ ನೋಡಿಕೊಳ್ಳುತ್ತಾರೆ. ಹೋಗಿ ಬರಲಿ ತಾಯಿ ಮನೆಗೆ ಆ ಮನೆ ಎಂದು ಬೆಳಕಾಗಿರಲಿ ಎಂದು ಅಳಿಯ ಆಶಿಸುತ್ತಿದ್ದಾನೆ.

"ಐರಾವತ" ಕವನ ಸಂಕಲನದ "ತಂದೆ ಬರೆದರು ಮಗಳಿಗೊಂದು ಕಾಗದವ" ಕವನದಲ್ಲಿ ಮಗಳ ಮೇಲಿನ ವಾತ್ಸಲ್ಯ ತಂದೆಗೆ ಹೇಗಿದೆ ಎಂಬುದನ್ನು ಇಲ್ಲಿ ಚಿತ್ರಿಸಿದ್ದಾರೆ.

ಜೊತೆಗೆ ಹೆಂಡತಿಯ ತಂದೆ ಮಗಳನ್ನು ಮಾತ್ರ ತವರಿಗೆ ಕರೆದಿರುವುದು ಅಳಿಯನಿಗೆ ಬೇಸರದ ವಿಷಯವಾಗಿ ವ್ಯಕ್ತವಾಗಿರುವುದನ್ನು ಕಾಣಬಹುದು. ಜೊತೆಗೆ ಗಂಡನನ್ನು ತವರೂರಿನ ಹಬ್ಬಕ್ಕೆ ಕರೆದೊಯ್ಯಲು ಮನವೊಲಿಸುವ ಯತ್ನವನ್ನು ಕಾಣಬಹುದು.

ತಂದೆ ಬರೆದರು ಮಗಳಿಗೊಂದು ಕಾಗದವನು;
ನೊಂದು ಬರೆದರು ಮನದ ಒಳಬಾಗಿಲನು ತೆರೆದು;
ತಂದೆ ಬರೆದರು ಮಗಳಿಗಿಂತು ಕಾಗದವನು.

ತಂದೆ ಮಗಳು ವರ್ಷದಲ್ಲಿ ಒಮ್ಮೆಯೂ ತವರಿಗೆ ಬರದಿರುವುದಕ್ಕೆ ವ್ಯಥೆಪಡುತ್ತಾ ಮನದ ಅಂತರಾಳದಲ್ಲಿ ಮಗಳನ್ನು ತಾಯಿಯ ಸ್ಥಾನದಲ್ಲಿಟ್ಟು ನೋಡಿರುವ ಅವರು ಕಾಗದವನ್ನು ಬರೆದು ನೀನೊಮ್ಮೆ ತವರಿಗೆ ಬರಬೇಕೆಂದು ಹೇಳುತ್ತಾರೆ. ನೀನು ತವರಿಗೆ ಬರುವುದರಿಂದಲೇ ನಮಗೆ ಪುಣ್ಯ ಲಭಿಸುತ್ತದೆ, ಆದ್ದರಿಂದ ನಮ್ಮ ಬದುಕನ್ನು ಸಿಂಗರಿಸಿಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಇಲ್ಲಿ ತಂದೆ ತನ್ನ ಮಗಳನ್ನು ಮನೆಗೆ ಮಹಾಲಕ್ಷ್ಮಿಯೆಂದು ಪರಿಗಣಿಸಿರುವುದನ್ನು ಕಾಣಬಹುದು.

"ಹೊತ್ತವಳು, ಹೆತ್ತವಳು, ತಾಯಿ ಎನ್ನುವ ಜೀವ
ಹತ್ತುಸಲ ನಿನ್ನ ಹೆಸರೆತ್ತದಿಹ ದಿನವಿಲ್ಲ,
ಒಬ್ಬಳನೆ ಕರೆದಿಲ್ಲ ಇಬ್ಬರೂ ಬನ್ನಿ;
ಹಬ್ಬದಲಿ ಬಂದೆಮಗೆ ಹಬ್ಬವನ್ನು ತನ್ನಿ.

ತವರಿಗೆ ಮಗಳು ಬರದಿರುವ ಕುರಿತು ತಂದೆಯಷ್ಟೇ ಬೇಸರವಾಗುವುದಲ್ಲದೆ, ತಾಯಿಯು ಕೂಡ ಕೊರಗುತ್ತಿದ್ದಾರೆ. ಮಗಳ ಮೇಲೆ ತಂದೆಗಿಂತಲೂ ತಾಯಿಗೆ ಪ್ರೀತಿ ಹೆಚ್ಚಾಗಿರುತ್ತದೆ. ವಿವಾಹವಾದ ಹೆಣ್ಣು ಚಿಕ್ಕಂದಿನಿಂದಲೂ ತನ್ನ ತಾಯಿಯ ಜೊತೆಯಲ್ಲಿ ತನ್ನ ಎಲ್ಲಾ ವಿಚಾರವನ್ನು ಹಂಚಿಕೊಳ್ಳುತ್ತಾಳೆ. ಆದರೆ ತಂದೆಯೊಡನೆ ಸಂಕೋಚದಿಂದಲೇ ಕೆಲವು ವಿಚಾರಗಳನ್ನು ಮುಚ್ಚಿಡುತ್ತಾಳೆ. ತಂದೆಯು, ದಿನಕ್ಕೆ ಹತ್ತು ಸಲ ನಿನ್ನ ಹೆಸರು ಹೇಳಿ ನಿನ್ನ ಬಗ್ಗೆ ಮಾತನಾಡದೇ ಇರುವುದಿಲ್ಲ ನಿನ್ನ ಹೊತ್ತು ಹೆತ್ತ ತಾಯಿ ಹಾಗೆಯೇ ನೀನೊಬ್ಬಳೇ ಅಲ್ಲ ನಿನ್ನ ಪತಿಯ ಜೊತೆ ಹಬ್ಬಕ್ಕೆ ಬಾ, ಹಬ್ಬಕ್ಕೆ ನೀವು ಬರುವುದೇ ನಮಗೆ ಮತ್ತೊಂದು ಹಬ್ಬವಾದಂತೆ ಭಾಸವಾಗುತ್ತದೆ. ನೀವಿಬ್ಬರೂ ಬನ್ನಿ ಎನ್ನುತ್ತಿದ್ದಾರೆ. ಅಳಿಯನನ್ನು ನೇರವಾಗಿ ಕರೆಯದೇ ಮಗಳಿಗೆ ಕಾಗದದಲ್ಲಿಯೇ ನೀನೇ ಈ ವಿಚಾರವನ್ನು ನಿನ್ನ ಮಾತಿನಲ್ಲಿ ಆತನ ಅಂತರಂಗವನ್ನು ಅರಿತು ವಿನಯದಿಂದ ಏಕಾಂತದಲ್ಲಿ ತಿಳಿಸು, ತವರಿಗೆ ಬರುವಂತೆ ಒಪ್ಪಿಸು. ಜೋಡಿ ಎತ್ತಿನ ಬಂಡಿ ಬಾಗಿಲ ಬಳಿ ಬಂದು ಕಾದಿರುವುದೆಂದು ತಿಳಿಸು ಎನ್ನುತ್ತಿದ್ದಾರೆ.

ಸಾಮಾನ್ಯವಾಗಿ ಹಿಂದಿನಿಂದಲೂ ನಮ್ಮ ಸಂಪ್ರದಾಯದಲ್ಲಿ ಅಳಿಯನನ್ನು ತವರ ಮನೆಯವರು ಗೌರವದಿಂದ ಕಾಣುತ್ತಾರೆ. ಅವರ ಜೊತೆ ನೇರವಾಗಿ ನಿಂತು ಮಾತನಾಡಲು ಹಿಂಜರಿಯುತ್ತಾರೆ, ಹಾಗಾಗಿ ಮಗಳಿಗೆ ನಿನ್ನ ಪತಿಯನ್ನು ನೀನೆ ಮನವೊಲಿಸಿ ಕರೆದುಕೊಂಡು ಬರಬೇಕೆಂದು ಹೇಳುತ್ತಿದ್ದಾರೆ.

ತಂದೆಯ ಈ ಪ್ರೀತಿ ಒಂದು ಕಡೆಯಾದರೆ, ಮಗಳು, ತನ್ನ ಪತಿಯನ್ನು ಹಬ್ಬಕ್ಕೆ ಕರೆದೊಯ್ಯಲೇಬೇಕೆಂಬ ಆಸೆಯಿಂದ ಮನವೊಲಿಸಿರುವುದನ್ನು ಕವನದ ಇನ್ನೊಂದು ಭಾಗದಲ್ಲಿ ನೋಡಬಹುದು.

ಹಬ್ಬಕ್ಕೆ ಅಳಿಯನನು ಕರೆಯುವುದು ವಾಡಿಕೆ;
ನಿಮ್ಮಿಂದ ನನಗಿಷ್ಟು ಸಿಕ್ಕುವುದು ಹೋಳಿಗೆ;
ಇಬ್ಬರೂ ಬನ್ನಿರೆಂದಿಹುದಿಲ್ಲಿ ಬೇಡಿಕೆ;–
ಇಲ್ಲೆ ಮರುಗವನುಳಿಸಿ ಹೊರಡುವುದೆ ಮಲ್ಲಿಗೆ?–

ಹಬ್ಬಕ್ಕೆ ಅಳಿಯನಾದ ತನ್ನನ್ನು ನೇರವಾಗಿ ಕರೆಯಲಿಲ್ಲವಲ್ಲಾ ಎಂದು ಬೇಸರವಾಗಿರುವ ಪತಿಗೆ, ಹೆಂಡತಿ ತನ್ನ ತವರಿನ ಮೇಲೆ ಒಂದೂ ಅಪವಾದಗಳು ಬರದಂತೆ, ಅವರ ಗೌರವವನ್ನು ಕಡಿಮೆ ಮಾಡದೆ, ಗಂಡನನ್ನು ಉಪಾಯವಾಗಿ ತನ್ನತ್ತ ಸೆಳೆದುಕೊಳ್ಳುವ ಕಾರ್ಯವನ್ನು ಹೆಂಡತಿ ಮಾಡುತ್ತಿದ್ದಾಳೆ. ಹಾಗಾಗಿ ಅವಳು ಹಬ್ಬಕ್ಕೆ ಅಳಿಯನನ್ನು ಕರೆಯುವುದು ಸಂಪ್ರದಾಯ. ಹಾಗಾಗಿ ನಿಮ್ಮನ್ನ ಮುಖ್ಯವಾಗಿ

ಹಬ್ಬಕ್ಕೆ ಕರೆದಿದ್ದಾರೆ. ಅಂತಹ ಹಬ್ಬದ ಸಂಭ್ರಮದಲ್ಲಿ ನಿಮ್ಮಿಂದಾಗಿ ನಾನು ಪಾಲ್ಗೊಂಡು ಹೋಳಿಗೆಯ ಹಬ್ಬದೂಟದ ಸಿಹಿಯನ್ನು ತಿನ್ನುವ ಅವಕಾಶ ಸಿಗುತ್ತದೆ. ಹಾಗಾಗಿ ಹಬ್ಬಕ್ಕೆ ಮರುಗವನ್ನು ಬಿಟ್ಟು ಹೊರಡಬಹುದೇ ಮಲ್ಲಿಗೆ ಎಂದು ಹೇಳುತ್ತಿದ್ದಾಳೆ.

ಇಲ್ಲಿ ಗಂಡನನ್ನು ಸುವಾಸನೆಯ ಎಲೆಗಳಾದ ಮರುಗಕ್ಕೂ, ತನ್ನನ್ನು ಮಲ್ಲಿಗೆಗೂ ಹೋಲಿಸಿದ್ದಾರೆ. ಪರಿಮಳದ ಮರುಗ ಬಿಟ್ಟು ಹೊರಡಬಹುದೇ ಮಲ್ಲಿಗೆ ಎಂಬಲ್ಲಿ ಅಲಂಕಾರವಿದೆಯೆಂದು ಹೇಳಬಹುದು. ಹೆಣ್ಣು ತವರೂರಿನ ರಾಯಭಾರಿಯಾಗಿ ಗಂಡನ ಮತ್ತು ತವರಿನ ನಡುವೆ ಮಧ್ಯಸ್ಥಿಕೆ ವಹಿಸಿ ಆತನ ಮನ ಬದಲಾಯಿಸುತ್ತಿರುವುದನ್ನು ಕಾಣುವುದರ ಜೊತೆಗೆ ಅವಳಿಗೆ ತವರೂರಿಗೆ ಹೋಗುವ ಹಂಬಲವೆಷ್ಟಿದೆಯೆಂದು ತಿಳಿಯಬಹುದು.

೪.೭.ಕನ್ನಡ ಭಾಷಾ ಪ್ರೇಮ

ಕನ್ನಡ ಸಾಹಿತ್ಯ ಚರಿತ್ರೆಯ ಆರಂಭದಿಂದ ಇಂದಿನವರೆಗೆ ಎಲ್ಲಾ ಕವಿಗಳ ಕೃತಿಗಳಲ್ಲಿ ನಾಡು ಮತ್ತು ನುಡಿಯ ಬಗೆಗಿನ ಪ್ರೀತಿ ಅಭಿಮಾನ ವ್ಯಕ್ತವಾಗಿರುವುದನ್ನು ಗಮನಿಸಬಹುದು. ಇದು ನಮಗೆ ಹೆಮ್ಮೆ ಎನ್ನಿಸುತ್ತದೆ. ಓದುಗರಲ್ಲೂ ಪ್ರೀತಿ ಅಭಿಮಾನ ಮೂಡಿಸುತ್ತದೆ. ತನ್ನ ಭಾಷೆಯ ಮಹತ್ವವನ್ನು ಅರಿಯಂದಂತಹ ನಿರಭಿಮಾನಿಗಳು ಕವಿಗಳ ಕಾವ್ಯದಲ್ಲಿ ವ್ಯಕ್ತವಾಗಿರುವ ಭಾಷಾಭಿಮಾನವನ್ನು ಅರಿತು ಪರಿವರ್ತಿತರಾಗಬಹುದು.

ಭಾಷೆಯ ಮಹತ್ವ, ಅನ್ಯಭಾಷೆಯ ಹಾವಳಿಯ ಆತಂಕ, ನಾಡಿನ ಸಿರಿಸಂಪತ್ತು ವೈಭವ, ಅದರ ಪ್ರಾಚೀನತೆ, ಎಲ್ಲವನ್ನು ಸಾಹಿತ್ಯದಲ್ಲಿ ಗುರುತಿಸಬಹುದು."ಭಾಷೆಯೆಂದರೆ ಕೇವಲ ಶಬ್ದಗಳಲ್ಲಿ ಅಕ್ಷರಗಳ-ಪದಗಳ ಮಂದೆಯಾಗಿರುವುದಿಲ್ಲ. ಅದು ಒಂದು ಜೀವಂತ ಸಮುದಾಯದ ಚೈತನ್ಯವಾಗಿರುತ್ತದೆ" ಆ ಬದುಕಿನ ಅನನ್ಯತೆಗಳನ್ನು ಅಭಿವ್ಯಕ್ತಿಗೆ ಗುರಿಮಾಡಿ ಸೃಷ್ಟಿ ಕ್ರಿಯೆಗೆ ಒಳಪಡಿಸುವ ಶಕ್ತಿ ಭಾಷೆಗಿರುತ್ತದೆ.

"ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ" ಎಂಬ ಉಕ್ತಿಯು ಕನ್ನಡ ಭಾಷೆಯ ಮಹತ್ವವನ್ನು ಸಾರುತ್ತದೆ. ಕುವೆಂಪುರವರು

"ಎಲ್ಲಾದರು ಇರು ಎಂತಾದರು ಇರು
ಎಂದೆಂದಿಗೂ ನೀ ಕನ್ನಡವಾಗಿರು
ಕನ್ನಡವೇ ಸತ್ಯ, ಕನ್ನಡವೇ ನಿತ್ಯ"

ಎಂದು ತಮ್ಮ ಕವನ ಭಾಗದಲ್ಲಿ ಹೇಳುತ್ತಾ, ಕನ್ನಡ ಭಾಷೆಯ ಪ್ರೇಮವನ್ನು ತಿಳಿಸಿದ್ದಾರೆ. ಜೊತೆಗೆ 'ಜೈ ಭಾರತ ಜನನಿಯ ತನುಜಾತೆ, ಜಯಯೇ ಕರ್ನಾಟಕ ಮಾತೆ' ಎಂದು ಹೇಳುವ ಮೂಲಕ ಕನ್ನಡಾಂಬೆಯನ್ನು ಭಾರತ ಮಾತೆಯ ಪುತ್ರಿ ಎಂದಿದ್ದಾರೆ.

ಹುಯಿಲಗೊಳ ನಾರಾಯಣರಾಯರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಗೀತೆ ಕೆ.ಎಸ್. ನಿಸಾರ್ ಅಹಮದ್ ಅವರ 'ನಿತ್ಯೋತ್ಸವ' ಕವನಗಳು ನಾಡು ನುಡಿಯ ಹಿರಿಮೆಯನ್ನು ಸಾರುವ ಗೀತೆಗಳೇ ಆಗಿವೆ ಎನ್ನಬಹುದು.

ಕನ್ನಡ ನಾಡು ಮತ್ತು ನುಡಿಯು ವೈಭವಯುತವಾದುದು, ಆದರೆ ಇಂದು ಆ ವೈಭವ ಅನ್ಯರ ಪ್ರಭಾವ ಆಕ್ರಮಣದಿಂದ ಮರೆಯಾಗುತ್ತಿರುವುದು ಆಘಾತಕಾರಿ ವಿಷಯವಾಗಿದ್ದು, ಕನ್ನಡ ಭಾಷೆ ಮತ್ತು ಕನ್ನಡ ನಾಡನ್ನು ಪಾರು ಮಾಡಬೇಕಾದ ಅನಿವಾರ್ಯತೆ ಉಂಟಾಗಿದೆ. ಹೀಗೆ ನಾಡು–ನುಡಿಯ ಬಗೆಗಿನ ಪ್ರೀತಿ ಕಾಳಜಿ ಆತಂಕಗಳು ಕನ್ನಡ ಕಾವ್ಯದಲ್ಲಿ ವ್ಯಕ್ತವಾಗಿರುವುದು ಗಮನಾರ್ಹವಾಗಿದೆ.

ಕೆ.ಎಸ್.ನ. ಅವರ ಕವನಗಳನ್ನು ಅಧ್ಯಯನ ಮಾಡುವಾಗ ಅವುಗಳಲ್ಲಿ ನಾಡು ನುಡಿಗೆ ಸಂಬಂಧಪಟ್ಟ ಕವನಗಳು ಸಹ ಇವೆ. ಅವರ ಕವನಗಳಲ್ಲಿ ನಾಡುನುಡಿಯ ಬಗ್ಗೆ ಪ್ರೀತಿ, ಅಭಿಮಾನ, ಕಾಳಜಿ, ಎಚ್ಚರ, ಆತಂಕ, ಗೌರವ ಮುಂತಾದ ಅಂಶಗಳು ಮೈದೋರಿರುವುದನ್ನು ಗುರುತಿಸಬಹುದಾಗಿದೆ.

೧೯೪೨ ರಲ್ಲಿ ಮೈಸೂರಿನಲ್ಲಿದ್ದ ಕೆ.ಎಸ್.ನ 'ಮೈಸೂರ ಮಲ್ಲಿಗೆ' ಸಂಕಲನವನ್ನು ಪ್ರಕಟಿಸಿದಾಗ ಎಲ್ಲಾ ಕವಿತೆಗಳಿಗೂ ಮುಂಚೆ ಶೀರ್ಷಿಕೆಯಿಲ್ಲದ ಚಿಕ್ಕ ಚಿಕ್ಕ ಎಂಟು ಸಾಲಿನ ಒಂದು ಪದ್ಯವನ್ನು ಇಟ್ಟಿದ್ದರು ಅದು ಹೀಗಿದೆ.

— ಮೈಸೂರೆನ್ನಿ, ಕನ್ನಡವೆನ್ನಿ
ಮಲ್ಲಿಗೆಯೆನ್ನಿ, ಒಂದೆ!
ಒಡೆಯರ ಮಕುಟದ ರತ್ನವಿದೆನ್ನಿ;
ಒಡೆಯರ ಕನ್ನಡವೆನ್ನಿ!
ಇರುಳನು ಕಾಣದ ಕನ್ನಡವೆನ್ನಿ;
ಒಡೆಯದ ಕನ್ನಡವೆನ್ನಿ!
ಕವಿಗಳು ಬಳಸುವ ಭಾಷೆಯಿದೆನ್ನಿ
ಒಳಗಿನ ಹೂರಣ ಒಂದೆ.

ಈ ಸಾಲುಗಳನ್ನು ಬರೆದಾಗ ಭಾರತಕ್ಕೆ ಸ್ವಾತಂತ್ರ್ಯ ಬಂದಿರಲಿಲ್ಲವಾದ್ದರಿಂದ ಮೈಸೂರು ರಾಜ್ಯದ ಒಡೆಯರು ಪ್ರಮುಖ ವ್ಯಕ್ತಿಯಾದ್ದರಿಂದ, ಈ ಎಂಟುಸಾಲುಗಳಲ್ಲಿ ಮೈಸೂರಿನ ಒಡೆಯರ ಪ್ರಸ್ತಾಪವಿದ್ದರೂ ಕನ್ನಡ ಭಾಷೆಯ ಮೇಲೆ ಒತ್ತು ಬಿದ್ದಿರುವುದರಿಂದ ಇಲ್ಲಿ ಬಳಸಿರುವ ಭಾಷೆ ಮೈಸೂರಿನ ಸುತ್ತ ಮುತ್ತಲಿನ ಭಾಷೆ ಎಂದು ಸೂಚಿಸುವುದಕ್ಕಾಗಿ ಕವಿ ಈ ಪದ್ಯ ಹೇಳಿದ್ದಾರೆ ಎನ್ನಬಹುದು.

ಕವಿ ಪದ್ಯದಲ್ಲಿ ಮೈಸೂರು ಪ್ರಾಂತ್ಯವಾಗಲಿ, ಕನ್ನಡವಾಗಲಿ ಅಲ್ಲಿನ ಮಲ್ಲಿಗೆಯಾಗಲಿ ಬೇರೆ ಅಲ್ಲ, ಅವು ಒಂದೆ. ಈ ಕನ್ನಡ ಒಡೆಯರ ಕಿರೀಟದ ರತ್ನವಿದ್ದಂತೆ. ಇದು ಒಡೆಯರ ಕನ್ನಡ, ಇದಕ್ಕೆ ಕತ್ತಲೆ ಇಲ್ಲ,

ಅಂದರೆ ಅಂತ್ಯವೇ ಈ ಭಾಷೆಗೆ ಇಲ್ಲ. ಕವಿಗಳ ಭಾಷೆ ಕನ್ನಡ ಎಂದು ಹೇಳುತ್ತಾ ಎಲ್ಲರೊಳು ಒಂದಾಗಿರುವ ಭಾಷೆಯಿದಾಗಿದೆ. ಕನ್ನಡ ಎಂದು ಭಾಷೆಯ ಪ್ರೇಮವನ್ನು ಆರಂಭದಲ್ಲಿಯೇ ಹೇಳಿದ್ದಾರೆ.

'ಶಿಲಾಲತೆ' ಕವನ ಸಂಕಲನದ 'ಕನ್ನಡ ಮಾಧ್ಯಮ' ಕವನದಲ್ಲಿ, ಕನ್ನಡ ಭಾಷೆಯ ಮಹತ್ವವನ್ನು ಅದ್ಭುತವಾಗಿ, ಕಣ್ ಕಟ್ಟುವಂತೆ ಚಿತ್ರಿಸಿದ್ದಾರೆ. ಈ ಕವನವು ಕನ್ನಡ ಭಾಷೆಯ ಮೇಲೆ ಕವಿಗಿರುವ ಉತ್ಕಟ ಅಭಿಮಾನವನ್ನು ಪ್ರಕಟಿಸುತ್ತದೆ. ಅಷ್ಟೇ ಅಲ್ಲ; ಕನ್ನಡ ತಾಯಿಗೆ ಒದಗುತ್ತಿರುವ ಕುತ್ತನ್ನು ನೆನೆದು, ಆತಂಕಗೊಂಡು, ಅದರ ರಕ್ಷಣೆಗೆ ಪಣ ತೊಡಬೇಕೆಂಬ ಕರೆ ನೀಡಿದ್ದಾರೆ. ಕನ್ನಡದ ಅಭಿಮಾನವನ್ನು ಕವಿಗಳು ಹೇಗೆ ತೋರಿಸಬೇಕೆಂದು ಚಿತ್ರಿಸಿದ್ದಾರೆ.

ಶಿಕ್ಷಣ ಮಾಧ್ಯಮವಾದರೇ ಸಾಲದು
ಕನ್ನಡ ಮಕ್ಕಳಿಗೆ,
ಕನ್ನಡ ಮಾಧ್ಯಮವಾಗಲೇ ಬೇಕು
ಮೊದಲಿದು ಕವಿಗಳಿಗೆ
ಕನ್ನಡ ಕವಿಗಳಿಗೆ!

ಕನ್ನಡ ಭಾಷೆಯನ್ನು ಶಿಕ್ಷಣದಲ್ಲಿ ಮಾತ್ರ ಮಕ್ಕಳಿಗೆ ಕಲಿಸಲು ಬಳಸಿದರೇ ಸಾಲದು. ಅದು ಮಕ್ಕಳಿಗೆ ಪಾಠ ಪ್ರವಚನ ತಿಳಿಸುವ ನಿಟ್ಟಿನಲ್ಲಿ ಉಪಯೋಗವಾದರೆ ಸಾಲದು, ಅದು ಪ್ರತಿಯೊಬ್ಬರಿಗೂ ತಲುಪುವ ಕನ್ನಡ ಮಾಧ್ಯಮವಾಗಬೇಕು. ಎಲ್ಲರಿಗಿಂತ ಮೊದಲು ಕವಿಗಳು ಈ ಭಾಷೆಯ ಬಗ್ಗೆ ತಿಳಿಯಬೇಕು ಅದರಲ್ಲೂ ಕನ್ನಡ ಕವಿಗಳಿಗೆ ಅದು ಒಂದು ಮಾಧ್ಯಮವಾಗಬೇಕು ಎಂದಿದ್ದಾರೆ.

ಕನ್ನಡ ಲಿಪಿಯಲಿ ಏನಿದು ಸಂಸ್ಕೃತ
ಪದಗಳ ಮೆರವಣಿಗೆ
ಕಡೆಯಲಿ ಒಂದೇ ಕನ್ನಡದ ವ್ಯಯ
ತೂಕದ ಬರವಣಿಗೆ
ತೂಕಡಿಸುವ ಕಣ್ಣಿಗೆ

ಕನ್ನಡದಲ್ಲಿ ರಚನೆಯಾಗುವಂತಹ ಕೃತಿಗಳಲ್ಲಿ ಕನ್ನಡ ಭಾಷೆಗಿಂತಲೂ ಹೆಚ್ಚಿನದಾಗಿ ಸಂಸ್ಕೃತ ಪದಗಳು ಬಳಕೆಯಾಗಿವೆ. ಇದರಿಂದ ಕೊನೆಯಲ್ಲಿ ಆಗುವುದೇನೆಂದರೆ, ಕನ್ನಡದ ನಾಶವಾಗುತ್ತದೆ. ಅದು ತೂಕದ ಬರವಣಿಗೆಯಾಗಿ ಕನ್ನಡ ಭಾಷೆ ಭವಿಷ್ಯದಲ್ಲಿ ಅದರ ಬಳಕೆಯು ತೂಕಡಿಸುತ್ತದೆ ಎಂದು ತಿಳಿಸುತ್ತಿದ್ದಾರೆ.

ಹಬ್ಬಿದ ಕುಂಬಳ ಬಳ್ಳಿಯ ಭಾರಕೆ
ಗುಡಿಸಲು ಬೀಳುತಿದೆ;
ಅಳುವೆ ಕೇಳಿಸದಾಚೆಯ ತೀರಕೆ;
ಉಸಿರೆ ಉಡುಗುತಿದೆ
ಗಾಳಿಯೆ ನಡುಗುತಿದೆ!

ಇಲ್ಲಿ ಕುಂಬಳ ಬಳ್ಳಿಗೆ ಸಂಸ್ಕೃತವನ್ನು ಹೋಲಿಸಿದ್ದಾರೆ ಗುಡಿಸಲ ಮೇಲೆ ಹಬ್ಬಿಸಿದ ಕುಂಬಳ ಬಳ್ಳಿ ಸೂರೇ ಕುಸಿದು ಹೋಗುವುಷ್ಟು ಭಾರವಾದುದಾಗಿ ಗುಡಿಸಲ ಅವನತಿಗೆ ಕಾರಣವಾಗುತ್ತದೆ. ಹಾಗೆಯೇ; ಕನ್ನಡ ಕೃತಿಗಳಲ್ಲಿ ಸಂಸ್ಕೃತ ಪದಗಳು ಹೆಚ್ಚಾಗಿ ಬಳಕೆಯಾಗುತ್ತಿದ್ದರೆ, ನಂತರದಲ್ಲಿ ಕನ್ನಡ ಭಾಷೆಯನ್ನು ಅವನತಿಯಾಗುವಂತೆ ಮಾಡುತ್ತದೆ ಎನ್ನುತ್ತಿದ್ದಾರೆ. ಕನ್ನಡ ಭಾಷೆಯೆ, ವ್ಯಥೆಯೇ ಯಾರಿಗೂ ಕೇಳಿಸುತ್ತಿಲ್ಲವಾಗಿದೆ. ಇದರ ಉಸಿರು ನಿಲ್ಲುತ್ತಿದೆ. ಉಸಿರಾಗಬೇಕಾದ ಗಾಳಿಯು ನಡುಗುತ್ತಿದೆ ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಕನ್ನಡದಾಸೆಯ ಕವಿತಾರಚನೆಗೆ
ಒದಗದೆ ನಮ್ಮ ನುಡಿ?
ಹೂವಿಗೆ ಹೂವೆ– ಕಲ್ಲಿಗೆ ಕಲ್ಲೆ
ಕನ್ನಡ ಮುತ್ತು ನುಡಿ
ಜನತೆಯ ಬಳಕೆನುಡಿ

ಕನ್ನಡದಲ್ಲಿ ಕವಿತೆ ರಚನೆ ಮಾಡಲು ಆ ಭಾಷೆಯೂ ಸರಿಯಿಲ್ಲವೆ ಎಂದು ಪ್ರಶ್ನಿಸುತ್ತಿದ್ದಾರೆ. ಜೊತೆಗೆ ನಮ್ಮ ಭಾವನೆಗಳ ಅಭಿವ್ಯಕ್ತಿಗೆ ಕನ್ನಡ ಸಾಕು. ಮೃದುವಾಗಿ ಮಾತಾಡುವವರ ಜೊತೆಗೆ ಮೃದುವಾಗಿಯೂ, ಕಠಣವಾಗಿ ಮಾತಾನಾಡುವವರ ಜೊತೆ ಕಠಣವಾಗಿಯೂ, ಮಾತಾಡಲಿಕ್ಕೆ ಕನ್ನಡ ಭಾಷೆ ಸೂಕ್ತವಾದುದು. ಇದು ಮುತ್ತು ನುಡಿ, ಜನತೆಯ ಬಳಕೆಯ ನುಡಿ, ಇದೇ ಕಾವ್ಯಕ್ಕೆ ಬಳಸುವ ಸರಿಯಾದ ನುಡಿ ಎಂದಿದ್ದಾರೆ.

ಕನ್ನಡ ಗೌಡರು ಕನ್ನಡದಲ್ಲೆ
ಮಕ್ಕಳ ಹರಸುವರು.
ದಾಸರು ಶರಣರು ಕನ್ನಡದಲ್ಲೆನ್ನ
ವೇದವ ನುಡಿಸಿದರು;
ಬೆಳಕನು ಬಿಡಿಸಿದರು.

ಕನ್ನಡ ಭಾಷೆಯನ್ನಾಡುವ ಹಿರಿಯರು, ಗೌರವಾನ್ವಿತರು, ಮಕ್ಕಳಿಗೆ ಆಶೀರ್ವಚನವನ್ನು ಕನ್ನಡದಲ್ಲೇ ನೀಡಿ ಹರಸಿದ್ದಾರೆ. ದಾಸರು, ಶರಣರು, ಸಾಹಿತ್ಯ ರಚನೆಯಲ್ಲಿ ಶ್ರೇಷ್ಠರಾದವರು ಇವರು ಕನ್ನಡದಲ್ಲೇ ವೇದವ ಹೇಳಿದರು, ಬೆಳಕನು ಹರಸಿದರು, ಕನ್ನಡಕ್ಕೆ ಆ ಶಕ್ತಿಯಿದೆ. ಜ್ಞಾನವನ್ನು ಪಡೆಯುವುದಕ್ಕೂ ಕನ್ನಡ ಸಾಕು. ಹೀಗೆ ಕನ್ನಡ ನುಡಿಗೆ ಶಕ್ತಿಯಿರುವುದರಿಂದ ಸಂಸ್ಕೃತದ ಅತಿಯಾದ ಬಳಕೆ ಬೇಡವೆನ್ನುವ ವಾದವನ್ನು ಕೆ.ಎಸ್.ನ.ರವರು ಮಂಡಿಸುತ್ತಾರೆ.

ಮುಗಿಲೂ ಕನ್ನಡ, ಸಿಡಿಲೂ ಕನ್ನಡ
ಮಿಂಚೂ ಕನ್ನಡವೆ!
ಮಗುವೂ ಕನ್ನಡ ಹಾಲೂ ಕನ್ನಡ
ಬದುಕೂ ಕನ್ನಡವೆ
ಸಾವೂ ಕನ್ನಡವೆ!

ಅಭ್ರ ಅಥವಾ ಮೇಘ, ಕುಲಿಶ ಅಥವಾ ಅಶನಿ, ತಟಿತ್ ಅಥವಾ ಸೌದಾಮಿನಿ ಅನ್ನುವ ಶಬ್ದಗಳು ಕನ್ನಡದಲ್ಲಿವೆ. ಬಾಲಕ ಅಥವಾ ಅರ್ಭಕ, ಕ್ಷೀರ ಅಥವಾ ದುಗ್ಧ, ಜೀವಿತ ಅಥವಾ ಅಸಾಧಾರಣ; ಮೃತ್ಯು ಅಥವಾ ಮರಣ ಎನ್ನುವುದಕ್ಕೆ ಪರ್ಯಾಯವಾಗಿ ಮಗು, ಹಾಲು, ಬದುಕು, ಸಾವು ಎನ್ನುವ ಶಬ್ದಗಳು ಕನ್ನಡದಲ್ಲಿವೆ. ಆದ್ದರಿಂದ ಕನ್ನಡದಲ್ಲಿ ಅಭಿವ್ಯಕ್ತಿಗೆ ಬೇಕಾದ ಶಬ್ಧಗಳು ಕನ್ನಡದಲ್ಲೇ ಇರುವುದರಿಂದ ಇವುಗಳಿಗೆ ಬದಲಾಗಿ ಸಂಸ್ಕೃತ ಪಾಂಡಿತ್ಯವನ್ನು ತೋರಿಸುವುದಕ್ಕೋಸ್ಕರ ಸಂಸ್ಕೃತದ ಉಪಯೋಗ ಬೇಕಿಲ್ಲವೆನ್ನುವುದು ನರಸಿಂಹಸ್ವಾಮಿಯವರ ವಾದವಾಗಿದೆ.

ಕನ್ನಡ ತೊಟ್ಟಿಲು, ಕನ್ನಡ ಜೋಗುಳ
ಕನಸೂ ಕನ್ನಡವೆ!
ನಮಗೇತಕೆ ಈ ಸಂಸ್ಕೃತ ಕಳವಳ?
ನಾವು ಕನ್ನಡವೆ,
ನೀವೂ ಕನ್ನಡವೆ!

ಕವಿಗಳಿಗೆ ಅವರನ್ನ ಕುರಿತು, ನಾವು ಬೆಳೆದು ಬಂದಿರುವುದು ಕನ್ನಡದ ಜೊತೆಗೆ ನಾವು ಕನಸನ್ನು ಕನ್ನಡದಲ್ಲೇ ಕಾಣುತ್ತೇವೆ. ಹೀಗಿರುವಾಗ ನಮಗೇತಕೆ ಆ ಸಂಸ್ಕೃತವನ್ನು ಅನುಸರಿಸುವಿಕೆ. ನಾವು

ಕನ್ನಡದವರೇ ನೀವು ಕನ್ನಡದವರೇ ಆಗಿರುವಾಗ ಬೇರೆ ಭಾಷೆಯೊಡನೆ ಪ್ರೀತಿ ಏಕೆ ಎಂದು ಕೆ.ಎಸ್.ನ. ಅವರು ಹೇಳುತ್ತಿದ್ದಾರೆ.

ಕನ್ನಡತನದಭಿಮಾನವ ತೋರಿಸಿ
ಕವಿಗಳೇ, ಕಾರ್ಯದಲ್ಲಿ!
ಕನ್ನಡ ನುಡಿಯೇ ಕವಿತೆಯನಾಳಲಿ!
ಸಂಸ್ಕೃತ ಮಿತವಾಗಿ
ಬೆರೆಯಲಿ ಹಿತವಾಗಿ!

ಕನ್ನಡದ ಅಭಿಮಾನವನ್ನು ಆ ಭಾಷೆಯ ಪದಗಳನ್ನೇ ಹೆಚ್ಚಾಗಿ ಬಳಸುವುದರ ಮೂಲಕ ಕವಿಗಳು ಕೃತಿಯನ್ನು ರಚಿಸಿ ತೋರಿಸಬೇಕು. ಕನ್ನಡ ನುಡಿಯು ಅವರ ಕಾವ್ಯದುದ್ದಕ್ಕೂ ಇರಬೇಕು, ಹಾಗೆಂದು ಸಂಸ್ಕೃತ ಬೇಡವೆಂದಲ್ಲ, ಅದು ಮಿತವಾಗಿ, ಹಿತವಾಗಿ ಸೇರಿರಲಿ ಎನ್ನುವುದು ಕೆ.ಎಸ್.ನ ಅವರ ಅಭಿಪ್ರಾಯ. ಮುದ್ದಣನು ಇದೇ ಅಭಿಪ್ರಾಯವನ್ನು 'ಕರ್ಮಣಿ ಸರದೊಳ್ ಚೆಂಬವಳಮಂ ಪೋದಂತೆ' ಎನ್ನುತ್ತಾನೆ. ನಮ್ಮದು ಕನ್ನಡದ ಮನೆ ಅಲ್ಲಿ ಕನ್ನಡವೇ ಯಜಮಾನನಾಗಿರಬೇಕು, ಬಂಧುಗಳ ಹಾಗೆ ಸಂಸ್ಕೃತ ಬಂದು ಹೋಗಲಿ, ಆದರೆ ಸಂಸ್ಕೃತಕ್ಕೆ ಯಜಮಾನಿಕೆಯನ್ನು ಬಿಟ್ಟು ಕೊಡಬಾರದೆನ್ನುವುದು ಕೆ.ಎಸ್.ನ. ಅವರ ನಿರ್ಧಾರವಾಗಿದೆ. ಆದರೆ ಈಗ ಇಂಗ್ಲೀಷ್ ಸಂಸ್ಕೃತದ ಜಾಗವನ್ನು ಆವರಿಸಿಕೊಂಡಿದೆ.

ಸಂಸ್ಕೃತವೊಂದರ ಭಾಗ್ಯವೆ ಸಾಲದು,
ಸೃಷ್ಟಿಯೆ ಗುರು ನಮಗೆ,
ಕನ್ನಡ ಮಾಧ್ಯಮವಾದರೆ ಸಾಲದು
ಕೇವಲ ಮಕ್ಕಳಿಗೆ,
ಮೊದಲಾಗಲಿ ಕವಿಗಳಿಗೆ!

ಕೊನೆಯ ಸಾಲಿನಲ್ಲಿಯೂ, ಸಂಸ್ಕೃತದ ಮಿತವಾದ ಸ್ವೀಕಾರದ ಮಾತಿದೆ, ಸೃಷ್ಟಿ ನಮಗೆ ಕನ್ನಡ ನಾಡಿನಲ್ಲಿ ಜನ್ಮಕೊಟ್ಟು ಕನ್ನಡವನ್ನು ಕೊಟ್ಟಿದೆ, ಆದ್ದರಿಂದ ಆ ಗುರುವಿನ ಮಾತಿನಂತೆ ನಾವು ನಡೆಯುತ್ತ ನಮ್ಮ ಮಕ್ಕಳಿಗೆ ಕನ್ನಡ ಮಾಧ್ಯಮವನ್ನು ಕೊಡಬೇಕು. ಅದಕ್ಕಿಂತ ಮೊದಲು ನಮ್ಮ ಕವಿಗಳಿಗೆ ಕನ್ನಡವನ್ನು ಕಲಿಸಬೇಕೆಂದು ಕೆ.ಎಸ್.ನ. ಅವರು ಹೇಳುತ್ತಾರೆ. ಈ ಕವಿತೆಯುದ್ದಕ್ಕೂ ಕನ್ನಡದ ಮಹತ್ವವನ್ನು ಕುರಿತು, ಇತರ ಕವಿಗಳಿಗೆ ತಿಳಿಸಿದ್ದಾರೆ.

ಕನ್ನಡಾಭಿಮಾನವು ಆ ಭಾಷೆಯ ಜನರಲ್ಲಿ ಕಡಿಮೆಯಾದರೆ ಅವರಿಗೆ ಜ್ಞಾನದ ಕೊರತೆ ಎಂದು ಪರಿಗಣಿಸಬಹುದು. ಎಲ್ಲವನ್ನು ತಿಳಿದು ಆ ಭಾಷೆಯಲ್ಲಿಯೇ ಕೃತಿ ರಚನೆ ಮಾಡುವವರಲ್ಲಿಯೇ ಅದು ಇಲ್ಲವಾದರೆ ನಿಜವಾಗಿಯೂ ವಿಪರ್ಯಾಸವೇ ಸರಿ ಎಂಬುದು ಕೆ.ಎಸ್.ನ.ಅವರ ಅಭಿಪ್ರಾಯ. ಕವಿಯ ಕೃತಿಯಲ್ಲಿ ಕನ್ನಡ ಭಾಷೆಯು ಚೆನ್ನಾಗಿ ಕಲೆತರೆ ಅದನ್ನು ಗ್ರಹಿಸುವ ಸಹೃದಯದಲ್ಲಿ ಮತ್ತಷ್ಟು ಬೆಳೆಯುತ್ತದೆ ಎನ್ನುವ ದೃಷ್ಟಿಯಿಂದ ಕೆ.ಎಸ್.ನ. ಅವರು ಕನ್ನಡ ಭಾಷೆ ಕುರಿತು ಈ ಕವನದಲ್ಲಿ ಹೇಳಿದ್ದಾರೆ.

'ಐರಾವತ' ಕವನ ಸಂಕಲನದ 'ಭೂಮಿ ಗುಂಡಾಗಿರುವುದು' ಕವನದಲ್ಲಿ ಕನ್ನಡಾಭಿಮಾನ ತಮ್ಮಲ್ಲಿ ಹೇಗೆ ಉದಯಿಸಿತು ಎಂದು ತಿಳಿಸಿದ್ದಾರೆ.

ಕನ್ನಡದಲೇನೆಂದು ಇಂಗ್ಲೀಷ್ ನೋದಿದೆವು;
ಹಡಗನೇನೂ ನಾವು ಹತ್ತಲಿಲ್ಲ.
ಸಂಸ್ಕೃತವೆ ನಮ್ಮದೆಂದು ಭಕ್ತಿಯಲಿ ಭಜಿಸಿದೆವು;
ವೇದ ಪುರುಷನು ಕಣ್ಣ ತೆರೆಸಲಿಲ್ಲ;
ಕಟ್ಟ ಕಡೆಗುಕ್ಕಿಹುದು ಕನ್ನಡದ ಅಭಿಮಾನ;
ಕನ್ನಡವೆ ಪ್ರಾಣ ಪದಕ
ಇಂತಾದುದೇಕೆಂದು ಕೇಳುವುದು ತಪ್ಪಲ್ಲ;
ಚಿಂತೆ ಇದರೊಳಗೆ ಅವಕಾಶವೇ ಇಲ್ಲ.
ಶತಮಾನಗಳ ಹಿಂದೆ ಸಿದ್ಧಾಂತವಾಗಿಹುದು
ಭೂಮಿ ಗುಂಡಾಗಿರುವುದೆಂದು.

ಕೆ.ಎಸ್.ನ. ಅವರು ಪ್ರೌಢಶಾಲೆಯಲ್ಲಿದ್ದಾಗ ಮೊದಲು ಇಂಗ್ಲೀಷಿನಲ್ಲೊಂದು ಕವಿತೆಯನ್ನು ಬರೆದಿದ್ದರು. ಅದನ್ನು ಅವರ ಮೇಷ್ಟ್ರು ಪಟ್ಟಾಭಿರಾಮನ್ ಅವರಿಗೆ ತೋರಿಸಿದಾಗ ಅವರು ಕನ್ನಡದಲ್ಲಿ ಬರೆಯಲಿಕ್ಕೆ ಹೇಳಿ ಬಿ.ಎಂ.ಶ್ರೀಯವರ 'ಇಂಗ್ಲೀಷ್ ಗೀತೆಗಳು' ಪುಸ್ತಕವನ್ನು ತಂದುಕೊಟ್ಟು "ಇದನ್ನು ಓದಿ ನೋಡು" ಅಂತ ಹೇಳಿದರಂತೆ. ಕೆ.ಎಸ್.ನ. ಅವರ ಶಾಲೆಯ ದಿನಗಳಲ್ಲಿ ಅವರ ಮನೆಯ ಹತ್ತಿರ ಸೀತಾರಾಮ ಶಾಸ್ತ್ರಿಗಳಂಥ ಒಬ್ಬ ಸಂಸ್ಕೃತ ಅಧ್ಯಾಪಕರಿದ್ದರಂತೆ,. ಅವರು ತುಳಸಿ ತೋಟದಲ್ಲಿ ಹೂ ಬಿಡಿಸುವಾಗ ಬೇರೆ ಹುಡುಗರ ಜೊತೆಗೆ ನರಸಿಂಹಸ್ವಾಮಿಯವರೂ ಹೋಗಿ ಹೂ ಬಿಡಿಸಲಿಕ್ಕೆ ಸಹಾಯ ಮಾಡುತ್ತಿದ್ದರಂತೆ. ಹೂ ಬಿಡಿಸಿ ಮುಗಿಯುವವರೆಗೆ ಸೀತಾರಾಮಶಾಸ್ತ್ರಿಗಳು ಅಮರಕೋಶವನ್ನು ಹೇಳಿಕೊಡುತ್ತಿದ್ದರಂತೆ. ಶಾಲೆಯಲ್ಲೂ ಕೆ.ಎಸ್.ನ. ಸಂಸ್ಕೃತ ವಿದ್ಯಾರ್ಥಿಯಾಗಿದ್ದರಂತೆ ಆದರೆ

ಕನ್ನಡದಲ್ಲೇನಿದೆ, ಅದಕ್ಕಿಂತ ಮಹತ್ವದ್ದು ಇಂಗ್ಲೀಷ್ ಭಾಷೆಯೆಂದು ಇಂಗ್ಲೀಷನ್ನು ಓದಿದೆವು. ಆದರೆ ಅದಕ್ಕೆಂದು ಬೇರೆ ದೇಶಕ್ಕೆ ಹೋಗಿರಲಿಲ್ಲ. ಸಂಸ್ಕೃತ ಭಾಷೆಯನ್ನು ನಮ್ಮದೆಂದು ಭಕ್ತಿಯಿಂದ ಭಜಿಸಿದೆವು. ಆದರೆ ಆ ಸಂಸ್ಕೃತ ಕಲಿತಿದ್ದರಿಂದ ದೇವರ ದರ್ಶನವೇನು ಆಗಲಿಲ್ಲ. ಇವುಗಳೆಲ್ಲದ್ದರಿಂದ ಕೊನೆಗೆ ಕನ್ನಡದ ಅಭಿಮಾನ ಬಂತು. ಇದಕ್ಕಾಗಿ ಚಿಂತಿಸುವ ಅಗತ್ಯವೇನು ಇಲ್ಲವೆಂದು ಹೇಳುತ್ತಾ, ಭೂಮಿ ಗುಂಡಾಗಿದೆ ನಾವು ಎಲ್ಲಿಂದ ನಮ್ಮ ಪ್ರಯಾಣ ಆರಂಭಿಸುತ್ತೇವೆಯೋ ಅಲ್ಲಿಗೆ ಬಂದು ನಿಲ್ಲಬಹುದು ಹಾಗಾಗಿ ನಮಗೆ ಕನ್ನಡವೇ ಪ್ರಾಣಪದಕವಾಯಿತು ಎನ್ನುತ್ತಾರೆ.

'ಐರಾವತ' ಕವನ ಸಂಕಲನದ 'ಕಾಮನ ಕಥೆ' ಕವನದಲ್ಲಿ ಕೆ.ಎಸ್.ನ. ಅವರು ಪೌರಾಣಿಕ ಚಿತ್ರಣವನ್ನು ನೀಡುತ್ತಾ ಪಾರ್ವತಿ ಪರಮೇಶ್ವರ ದೈವಗಳ ಹಿನ್ನಲೆಯಲ್ಲಿ ಕನ್ನಡಾಭಿಮಾನವನ್ನು ತಿಳಿಸಿದ್ದಾರೆ.

ಕಾಡು ಜನರನ್ನು ಹಿಡಿದು ಕಲಿತರು
ಕನ್ನಡದ ಹೊನ್ನುಡಿಯನು.
ಕಾಡಿನಲ್ಲಿ ಮನೆ ಮಾಡಿ ನಿಂತರು,
ನೋಡಿ ಮಕ್ಕಳ, ತಣಿದರು.

ಕೈಲಾಸದಿಂದ ಧರೆಗೆ ಗಂಗೆಯು ಹರಿದ ರೀತಿಯನ್ನು ವಿವರಿಸುತ್ತಾ ಶಿವ ಪಾರ್ವತಿಯರು ಧರೆಗೆ ಬಂದರು. ಹಳ್ಳಿಯ ಪ್ರಕೃತಿಯ ಮಡಿಲಲ್ಲಿ ಸಮಯ ಕಳೆದರು, ಶಿವನು ತುಂಗಾ ನದಿಯ ತೀರದ ಒಂದು ಹಳ್ಳಿಗೆ ಬಂದು ಕಾಢು ಜನರಿಂದ ಕನ್ನಡವನ್ನು ಕಲಿತನೆಂದು ಹೇಳುತ್ತಾರೆ.

ರತಿಮದನರೇಕಾಂತದಲಿ ಸಂ
ಚರಿತ ಸುಖಿಸುವ ನಾಡಿದು;
ಪ್ರೇಮಿಗಳ ಜೇನಿರುಳ ಸಂಪ
ತ್ಸುಖದ ಕನ್ನಡ ನಾಡಿದು.

ದೇವತೆಗಳಾದ ರತಿ ಮನ್ಮಥರು ಏಕಾಂತದಲ್ಲಿ ಸಂಚರಿಸಿ ಸುಖಿಸಿದ ನಾಡು ಇದು. ಪ್ರೇಮಿಗಳು ತಮ್ಮ ಜೇನಿನ ಸಿಹಿಯಂಥ ಬದುಕನ್ನು ಸುಖಿಸಿದ ನಾಡು ಕನ್ನಡ ನಾಡು ಎಂದಿದ್ದಾರೆ. ಈ ಕಾವ್ಯದಲ್ಲಿ ಕನ್ನಡ ನಾಡು–ನುಡಿ ಎಂಬುದು ನಮ್ಮ ನಾಡಿನ ಜನರ ದೈವಗಳೆಂದು ಪರಿಗಣಿತವಾಗಿರುವ ಈಶ್ವರ, ಪಾರ್ವತಿಯರಂತವರಿಗೆ ಮೆಚ್ಚುಗೆಯ ನಾಡಾಗಿತ್ತು ಎಂದು ಹೇಳುತ್ತಿದ್ದಾರೆ.

"ಶಿಲಾಲತೆ"ಯಲ್ಲಿ ನಿನಗೆ ಕನ್ನಡದೊಳಗೆ ಹೆಸರಿಲ್ಲವೆ? ಎನ್ನುವ ಕವಿತೆಯೊಂದಿದೆ. ಹೆಂಡತಿಯನ್ನು "ಎಲೌ" "ಲೇ" "ಎಲೆ" ಎಂದು ಕರೆಯುವುದು ಆಕೆಯ ವ್ಯಕ್ತಿತ್ವಕ್ಕೆ ಗೌರವ ಕೊಡದ ರೀತಿಯೆಂದು ನರಸಿಂಹಸ್ವಾಮಿ ಆಕ್ಷೇಪಿಸುತ್ತಾರೆ. ಅವರ ಕೆಲವು ಕವಿತೆಗಳಲ್ಲಿ ಹೆಂಡತಿಯನ್ನು 'ಅರ್ಧಾಂಗಿ' ಎಂದು ಸಂಭೋದಿಸಿದ್ದನ್ನು ನೋಡಿ ಹಾಗೆ ಕರೆಯುವುದು "ಅರ್ಧಕವಿ ಅನಾಹುತಶೈಲಿ" ಎನ್ನುತ್ತಾರೆ. "ದೇವಿ" ಎಂದು ಕರೆಯುವ ಕವಿಗಳು ಹೆಂಡತಿಯನ್ನು ಗೋಳುಹೊಯ್ದುಕೊಳ್ಳುವವರು ಅಂತ ಕೆ.ಎಸ್.ನ.ಅವರಿಗೆ ಅನ್ನಿಸುತ್ತದೆ. ಅವರ ಪ್ರಕಾರ ನಮ್ಮ ಜಾನಪದ ಕಾವ್ಯದಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ "ಚನ್ನಿ" ಎನ್ನುವ ಸಂಭೋಧನೆಯೆ ಅತ್ಯುತ್ತಮವಾದದ್ದು ಅನಿಸುತ್ತದೆ.

ಕನ್ನಡದ ಹಳ್ಳಿಗರ ಕಿವಿಗೆ ಪಾವನವಾದ
"ಚೆನ್ನಿ" ಎಂದರೆ ನಿನಗೆ ಹಿತವಲ್ಲವೆ?

ಮುದ್ದಣನನ್ನು ಬಿಟ್ಟರೆ ಹೆಂಡತಿಯನ್ನು ಹೆಸರು ಹಿಡಿದು ಕರೆಯುವ ಪಾತ್ರಗಳನ್ನು ಸೃಷ್ಟಿ ಮಾಡಿದವರು ನರಸಿಂಹಸ್ವಾಮಿಯವರೊಬ್ಬರೆ ಎಂದು ಹೇಳಬ್ರಹುದು.

ಕೆ.ಎಸ್.ನರಸಿಂಹಸ್ವಾಮಿಯವರ ಕವನಗಳಲ್ಲಿ ನಾಡು-ನುಡಿಯನ್ನು ಕುರಿತ ಚಿಂತನೆಗಳ ಅನಾವರಣವಾಗಿದೆ. ಎಲ್ಲರಲ್ಲೂ ತಮ್ಮ ದೇಶ, ಭಾಷೆ, ನೆಲದ ಬಗ್ಗೆ ಅಭಿಮಾನ ಗೌರವಗಳು ಸಹಜವಾಗಿರುತ್ತವೆ. ಅದನ್ನು ಒಬ್ಬೊಬ್ಬರು ಒಂದೊಂದು ತರಹ ಕನ್ನಡಕ್ಕಾಗಿ ಸೇವೆಯನ್ನು ಮಾಡುವುದರ ಮೂಲಕ ತೋರಿಸುತ್ತಾರೆ. ಕನ್ನಡ ಭಾಷೆಯನ್ನೇ ಮಾತನಾಡುವುದು, ಬೇರೆ ಭಾಷೆಯನ್ನು ಬಳಸದೇ ಇರುವುದು, ಕನ್ನಡ ಪರ ಹೋರಾಟಗಳಲ್ಲಿ ಪಾಲ್ಗೊಳ್ಳುವುದು ಆಗಿರುತ್ತದೆ. ಆದರೆ ಕವಿಗಳು ತಮ್ಮ ಕವನಗಳಲ್ಲಿ ಕನ್ನಡದ ಪ್ರಾಚೀನತೆ, ಮಹತ್ವ, ಅಭಿಮಾನ, ಪ್ರೀತಿ, ಕಾಳಜಿ ಎಲ್ಲವನ್ನು ಬಿಂಬಿಸುವುದರ ಮೂಲಕ ಇತರರಿಗೂ ನಾಡು ನುಡಿ ಅಭಿಮಾನ ಮೂಡುವಂತೆ ಮಾಡುತ್ತಾರೆ. ಕೆ.ಎಸ್.ನ ಅವರ ಕವನಗಳಲ್ಲಿಯೂ, ಈ ಅಂಶಗಳನ್ನು ಗಮನಿಸಬಹುದು.

ಅಡಿ ಟಿಪ್ಪಣಿಗಳು:-

೧. ಇಹದ ಪರಿಮಳದ ಹಾದಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಪು.ಸಂ.೪
ಅಂಕಿತ ಪ್ರಕಾಶನ ಬೆಂಗಳೂರು-೨೦೦೦

೨. ಇಹದ ಪರಿಮಳದ ಹಾದಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಪು.ಸಂ.೧೮
ಅಂಕಿತ ಪ್ರಕಾಶನ ಬೆಂಗಳೂರು-೨೦೦೦

೩. ಇಹದ ಪರಿಮಳದ ಹಾದಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಪು.ಸಂ.೨೩
ಅಂಕಿತ ಪ್ರಕಾಶನ ಬೆಂಗಳೂರು-೨೦೦೦

೪. ಇಹದ ಪರಿಮಳದ ಹಾದಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಪು.ಸಂ.೪೬
ಅಂಕಿತ ಪ್ರಕಾಶನ ಬೆಂಗಳೂರು-೨೦೦೦

೫. ಇಹದ ಪರಿಮಳದ ಹಾದಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ ಪು.ಸಂ.೮೧
ಅಂಕಿತ ಪ್ರಕಾಶನ ಬೆಂಗಳೂರು-೨೦೦೦

೬. ನಮ್ಮ ಸುತ್ತಿನ ಗಾದೆಗಳು-ಸಂಪಾದಕರು-ಪ್ರೊ.ಸುಧಾಕರ
ಪು.ಸಂ.೨೯ ತನುಮನು ಪ್ರಕಾಶನ, ಮೈಸೂರು-೨೦೧೫

೭.-ಮೌನದಾಚೆಯ ಮಾತು - ಸುಮತೀಂದ್ರನಾಡಿಗ
ಪು.ಸಂ.೫೩, ಸ್ವಪ್ನಬುಕ್ ಹೌಸ್ ಬೆಂಗಳೂರು-೨೦೧೨

ಅಧ್ಯಾಯ–೫ ಕೆ.ಎಸ್.ನ ಅವರ ಕಾವ್ಯಕಲೆಗಾರಿಕೆ

ಕೆ.ಎಸ್.ನರಸಿಂಹಸ್ವಾಮಿಯವರ ಕಲೆಗಾರಿಕೆ ಅದ್ಭುತವಾದದ್ದು. ಈ ಕಲೆಗಾರಿಕೆ ಅವರ ಕಾವ್ಯ ರಚನಾ ಸಾಮರ್ಥ್ಯದಲ್ಲಿ, ಲಯದ ಮತ್ತು ಧಾಟಿಯ ನಿರ್ವಹಣೆಯಲ್ಲಿ, ವಸ್ತುವಿನ ಸ್ವರೂಪ ದರ್ಶನದಲ್ಲಿ ಅದಕ್ಕೆ ಬೇಕಾದ ಶಬ್ದಗಳ ಆಯ್ಕೆಯಲ್ಲಿ, ಎಷ್ಟು ಬೇಕೋ ಅಷ್ಟು ವಿವರಗಳನ್ನು ಕೊಡುವುದರಲ್ಲಿ, ಪ್ರತಿಭಾ ವಿಶೇಷವಾದ ರೂಪಕ ಸಂಕೇತಗಳ ಆವಿಷ್ಕಾರದಲ್ಲಿ, ಒಟ್ಟಿನಲ್ಲಿ ಸಾವಯವ ಶಿಲ್ಪವನ್ನು ಸೃಷ್ಟಿಸಿರುವುದು ಕಂಡುಬರುತ್ತದೆ.

ಈ ಕಲೆಗಾರಿಕೆಯಲ್ಲಿ ವ್ಯುತ್ಪತ್ತಿ, ವಿಮರ್ಶಾ ಪ್ರಜ್ಞೆ ಮತ್ತು ಪ್ರತಿಭೆ ಮೇಳೈಸುತ್ತದೆ. ಈ ಕಲೆಗಾರಿಕೆ ಸಾಧಿಸುವುದು ಸರಳ ಸುಂದರ ಹಾಡುಗಳಾಗಬಹುದು, ಕವಿತೆಗಳಾಗಬಹುದು, ಇವುಗಳಲ್ಲಿ ಕವಿಯ ಸ್ವಾನುಭವದ ಒಂದು ತಳಹದಿ ಇದ್ದೇ ಇರುತ್ತದೆ ಎಂದು ಹೇಳಬಹುದು.

ಕೆ.ಎಸ್.ನ ರವರು ನವೋದಯ ಕಾಲಘಟ್ಟದಲ್ಲಿ ತಮ್ಮ ಕಾವ್ಯ ರಚನೆ ಮಾಡುತ್ತಿದ್ದರು. ಈ ಕಾಲಘಟ್ಟದ ಕೃತಿ ರಚನೆಯ ಲಕ್ಷಣಗಳೇ ಬೇರೆ ಆಗಿದ್ದವು. 'ರಾಜರಿಗೇ ಆಗಲಿ, ಪಂಡಿತರಿಗೇ ಆಗಲಿ, ಬರೆಯುತಕ್ಕ ಕಾಲ ಹೋಯಿತು, ಈಗ ಹೆಂಗಸರು, ಗಂಡಸರು, ಚಿಕ್ಕವರು, ದೊಡ್ಡವರು, ಬ್ರಾಹ್ಮಣರು, ಒಕ್ಕಲಿಗರು ಓದುವಂತೆ ಬರೆಯಬೇಕು' ಎಂದು ಹೇಳಿದ ಶ್ರೀ ಅವರು ಇಂಗ್ಲೀಷ್ ರೊಮ್ಯಾಂಟಿಕ್ ಕಾವ್ಯದ ಮೊದಲನೆಯ ಧಾರೆಯನ್ನು ಆರಿಸಿಕೊಂಡಿದ್ದನ್ನು ಗಮನಿಸಬಹುದು. ಇದು ಕೆ.ಎಸ್.ನ ಅವರ ಮೇಲೆ ತೀವ್ರ ಪ್ರಭಾವ ಬೀರಿತು. ಹಾಗಾಗಿಯೇ ಅವರು ತಮ್ಮ ಕವನಗಳಲ್ಲಿ ಸರಳವಾಗಿ ಭಾಷೆಯನ್ನು ಬಳಸಿದರು. ಜನಸಾಮಾನ್ಯರ ದಿನನಿತ್ಯದ ಅನುಭವಗಳನ್ನು ಕಾವ್ಯದ ವಸ್ತುಗಳನ್ನಾಗಿ ಮಾಡಿಕೊಂಡರು.

ಕೆ.ಎಸ್.ನ ಅವರ ಹಲವು ಕವಿತೆಗಳು ಒಂದು ರೀತಿಯಲ್ಲಿ ಜಾನಪದ ಸಂಪ್ರಾದಾಯಕ್ಕೆ ಸೇರುತ್ತವೆ. ಇದು ಅವರು ಕಾವ್ಯಕ್ಕೆ ಬಳಸುವ ಭಾಷೆಯಲ್ಲಿ ಕಾಣುವುದಿಲ್ಲ. ಅವರ ಕವಿತೆಯ ವಸ್ತುಗಳಲ್ಲಿ ಕಾಣುತ್ತದೆ. ಅವರ ಭಾಷೆ ಆಡುಮಾತಿಗೆ ಸಮೀಪವಾದ ಶಿಷ್ಟ ಭಾಷೆಯಂತೆ ತೋರಿದರೂ ಅವರ ಅನುಭವ ಸಾಮಗ್ರಿ ಕೆಲವು ಕವನ ಸಂಗ್ರಹಗಳಲ್ಲಿ ಗಮನಿಸಿದಾಗ ನಗರ ಪರಿಸರದ್ದಲ್ಲ; ಗ್ರಾಮೀಣ ಪರಿಸರದ್ದು ಎಂದು ತಿಳಿಯಬಹುದು. ಅವರ ಕವಿತೆಯಲ್ಲಿ ಬರುವ ಹೆಣ್ಣು ಮಕ್ಕಳ ಹೆಸರುಗಳು, ಪದುಮ, ಗೌರಿ, ತುಂಗಭದ್ರೆ, ಮೀನಾಕ್ಷಿ ಚಂದಮ್ಮ, ಸೀತಾದೇವಿ ಇವರೆಲ್ಲ

ಹಳ್ಳಿಯ ಬಾವಿಯಿಂದ ನೀರು ಸೇದಿ ತರುವ, ಬೆಳಗೆದ್ದು ತುಳಸಿ ಕಟ್ಟೆಗೆ ಕುಂಕುಮವಿರಿಸುವ, ಹಸಿರು ಕುಪ್ಪಸದ, ತಲೆ ತುಂಬ ಹೂವು ಮುಡಿಯುವ, ಬಳೆಗಾರ ಚನ್ನಯ್ಯನಿಂದ ಒಪ್ಪುವ ಬಳೆ ತೊಡುವ ಚೆಲುವೆಯರು. ಇವರ ಊರುಗಳ ಹೆಸರುಗಳು ಹೊನ್ನೂರು, ನವಿಲೂರು, ತಾವರೆಗೆರೆ ಇತ್ಯಾದಿ. ಈ ತೌರೂರ ದಾರಿ 'ತೆಂಗುಗಳು ತಲೆದೂಗಿ ಬಾಳೆಗಳು ತೋಳ ಬೀಸಿ' ಕರೆಯುವ ಬಂಡಿಯ ದಾರಿ. 'ತೆಂಗು ಗರಿಗಳ ನಡುವೆ ತುಂಬು ಚೆಂದಿರ ಬಂದು ಬೆಳ್ಳಿ ಹಸುಗಳ ಹಾಲನ್ನು ಕರೆಯುವ ಇರುಳಿನ ಪರಿಸರ. ಈ ಪರಿಸರದಲ್ಲಿ ಬಳೆಗಾರ ಚನ್ನಯ್ಯ, ಹೂವಾಡಗಿತ್ತಿ, ಸಂತೆಗೆ ಹೋಗಿ ಬರುವ ಹೆಣ್ಣು ಮಕ್ಕಳು ನಡೆದಾಡುವುದು. ಎಲ್ಲವೂ ಇರುವುದು ಹಳ್ಳಿಯಲ್ಲೇ ಆಗಿದೆ. ಇವೆಲ್ಲವೂ ಕೂಡಾ ಜಾನಪದ ಚಿತ್ರಣವೇ ಆಗಿದೆ ಎನ್ನಬಹುದು.

ಕೆ.ಎಸ್.ನ ರವರ ಒಂದೊಂದು ಕವನಗಳು ಕಥಾ ರೂಪದಲ್ಲಿ ಇರುತ್ತವೆ. ಕಾವ್ಯದ ಹಾದಿಯಲ್ಲಿ ಕಥೆಯೊಂದು ನಿರೂಪಣೆಗೊಂಡಿರುವಂತೆ ಕವಿತೆ ಇರುತ್ತದೆ. 'ಬಳೆಗಾರ ಚೆನ್ನಯ್ಯ ' , 'ಮಾವನ ಮನೆಯಲ್ಲಿ' ಕವನಗಳು ಇದಕ್ಕೆ ಉದಾಹರಣೆಯಾಗುತ್ತವೆ ಎನ್ನಬಹುದು.

ಕೆ.ಎಸ್.ನ ಅವರು ಕಾವ್ಯ ರಚನೆಯಲ್ಲಿ ಭಾಷೆ, ರೂಪಕ, ಅಲಂಕಾರಗಳು ಸಹ ತೀರಾ ಸರಳವಾಗಿ, ಸಹಜವಾಗಿ ಮೂಡಿ ಬಂದಂತೆ ಇದೆ, ತನ್ನ ಚೆಲುವೆಯನ್ನು ಆಕೆಯ ಸೌಂದರ್ಯವನ್ನು ಹೊಗಳುವ ಸಂದರ್ಭದಲ್ಲಿ ಉಟ್ಟ ರೇಸಿಮೆಗಿಂತ ನಿನ್ನ ಮೈ ನುಣುಪು. ಬೆಟ್ಟದರಗಿಲಿಯಂತ ದನಿ ಬೇಟೆಗಾರನ ಬಿಲ್ಲಿನಂತೆ ಇರುವೆ ನೀನು ಎಂದು ಕೆಲವು ವಸ್ತುಗಳ ಜೊತೆ ಹೋಲಿಸಿದ್ದಾರೆ. ಇವುಗಳನ್ನು ಸಹ ಜನಸಮಾನ್ಯರಿಗೆ ತೀರಾ ಅರ್ಥವಾಗದ ವಸ್ತುಗಳನ್ನು ಬಳಸದೆ ಅವರಿಗೆ ಚಿರಪರಿಚಿತವಾದ ವಸ್ತುಗಳ ಹಿನ್ನೆಲೆಯಲ್ಲಿ ಅಲಂಕಾರಗಳನ್ನು ತಂದಿದ್ದಾರೆ.

ಕೆ.ಎಸ್.ನ ಅವರಿಗೆ ೧೯೯೭ ನೇ ಇಸವಿಯ ಹೊತ್ತಿಗೆ ಕಣ್ಣು ಕಾಣಿಸದಾದ ಮೇಲೆ ಅವರನ್ನು ಹಚ್ಚಿಕೊಂಡಿದ್ದ ಸಾಹಿತ್ಯಾಸಕ್ತ ಎಂ.ವಿ.ವೆಂಕಟೇಶಮೂರ್ತಿಯವರಿಗೆ ತಾವು ಮನಸ್ಸಿನಲ್ಲಿ ಕಟ್ಟಿಕೊಂಡಿದ್ದ ಕವಿತೆಗಳನ್ನು ಹೇಳಿ ಬರೆಸುತ್ತಿದ್ದರು. ವಾರವಿಡೀ ಆ ಗೀತೆಗಳ ಬಗೆಗೆ ಚಿಂತಿಸುತ್ತಾ ಪದೌಚಿತ್ಯ, ಪದಲಾಲಿತ್ಯ, ಪ್ರಾಸ ಇವುಗಳ ಬಗೆಗೆ ಮತ್ತೆ ವಿಶ್ಲೇಷಿಸಿ ಪರಿಷ್ಕರಿಸುತ್ತಿದ್ದರು. ಒದೊಂದು ಸಲ ಹೊಸದಾಗಿ ಹೇಳಿ ಬರೆಸಿದಾಗಲೂ ಒಂದೊಂದು ಸಾಲನ್ನೋ, ಪದವನ್ನೋ ಸೇರಿಸುತ್ತಿದ್ದರು. ಆದರೂ ಅವರಿಗೆ ಸಂಪೂರ್ಣ ತೃಪ್ತಿ ಕೊಟ್ಟಂತಿರಲಿಲ್ಲವಾಗಿ ಏಳೆಂಟು ದಿನ ಸತತವಾಗಿ ಅವನ್ನು

ಪರಿಷ್ಕರಿಸುತ್ತಲೇ ಇದ್ದರು.("ಚಿರಸ್ಮರಣೀಯರು".ಎಂ.ವಿ.ವೆಂಕಟೇಶ ಮೂರ್ತಿ;೨೦೦೫;ಪುಟಃ೧೩೬) ರಲ್ಲಿ ತಿಳಿಸಿರುವುದನ್ನು ಕಾಣಬಹುದು.

"ಕೆ.ಎಸ್.ನ.ಅವರು ಬರೆದ ಕೂಡಲೆ ಪ್ರಕಟಣೆಗೆ ಕಳಿಸುವ ಆತುರಗಾರರಾಗಿರಲಿಲ್ಲ. ಬರೆದದ್ದರ ಯೋಗ್ಯತೆಯನ್ನು ನಿರ್ಧರಿಸುವವರೆಗೆ ಅವರು ಕಾಯುತ್ತಿದ್ದರು. ಈ ಪುನರವಲೋಕನದ ಬಗ್ಗೆ, ಮೌಲ್ಯಮಾಪನದ ಪ್ರಜ್ಞೆ ಹೊಸತಾಗಿ ಬರೆಯುವವರಿಗೆ ಇರುವುದಿಲ್ಲ. ಅವರು ತಮ್ಮ ಕೃತಿಗಳು ಕರ್ಣನ ಹಾಗೆ ಸದ್ಯೋಜಾತ ಕೃತಿಗಳು ಅಂತ ತಿಳಿದಿರುತ್ತಾರೆ. ದಿಢೀರ್ ಕವಿತೆ, ದಿಢೀರ್ ಪ್ರಕಟಣೆ, ದಿಢೀರ್ ಸ್ವಪ್ರಚಾರಕ್ಕೆ ನುಗ್ಗುತ್ತಾರೆ. ಆದರೆ ನರಸಿಂಹಸ್ವಾಮಿಯವರು ತಾವು ಬರೆದದ್ದನ್ನು ಕುವೆಂಪು, ಎ.ಆರ್.ಕೃಷ್ಣಶಾಸ್ತ್ರಿ, ತೀ.ನಂ.ಶ್ರೀ, ವಿ.ಸೀ. ಮೊದಲಾದ ಹಿರಿಯರಿಗೆ ತೋರಿಸಿ, ಆಮೇಲೆ ಪ್ರಕಟಿಸುತ್ತಿದ್ದರು. ತಾವು ಬರೆದದ್ದನ್ನು ಮತ್ತೆ ನೋಡಿ, ತಿದ್ದಿ ತೀಡಿ ತಮಗೆ ಸಮಾಧಾನವಾದ ಮೇಲೆ, ತಿಂಗಳುಗಟ್ಟಲೆ ಕಾಲ ಕಳೆದ ಮೇಲೆ ಪ್ರಕಟಿಸುವುದು ಅವರ ರೂಢಿಯಾಗಿತ್ತು"೧

ಹೀಗೆ ಕೆ.ಎಸ್.ನ ರವರ ಕಾವ್ಯ ರಚನಾ ಕಲೆಗಾರಿಕೆಯನ್ನು ರೂಢಿಸಿಕೊಂಡರು. ಅತ್ಯದ್ಭುತ ಅನುಭವವುಳ್ಳ ರಸಪಾಕ ತುಂಬಿದ ಸಿಹಿಯಾದ ಕವನಗಳನ್ನು ಸಹೃದಯರಿಗೆ ನೀಡಿದರು ಎನ್ನಬಹುದು.

ಉಪಸಂಹಾರ

'ಕೆ.ಎಸ್. ನರಸಿಂಹಸ್ವಾಮಿ ಅವರ ಕವನಗಳಲ್ಲಿ ದಾಂಪತ್ಯ ಬದುಕಿನ ಚಿತ್ರಣ' ಎಂಬ ವಿಷಯದಲ್ಲಿ ಕೆ.ಎಸ್.ನ ಅವರ ಕಾವ್ಯಗಳಲ್ಲಿ ದಾಂಪತ್ಯ ಪ್ರೇಮ, ದಾಂಪತ್ಯ ವಿರಹ, ದಾಂಪತ್ಯ ಸಮಸ್ಯೆಗಳು, ಮಾತೃಪ್ರೇಮ, ತವರಿನ ಬಾಂದವ್ಯ, ನಾಡು-ನುಡಿ-ಈ ಎಲ್ಲ ಅಂಶಗಳು ಹೇಗೆ ಮೂಡಿ ಬಂದಿವೆ ಎಂದು ವಿಶ್ಲೇಷಣೆ ಮಾಡಲಾಗಿದೆ. ನವೋದಯ ಕಾಲಘಟ್ಟದಲ್ಲಿ ಆರಂಭಗೊಂಡ ಕೆ.ಎಸ್.ನ ಅವರ ಕಾವ್ಯ ಸೃಷ್ಟಿ ನವ್ಯ ಕಾಲಘಟ್ಟದ ಸಂವೇದನೆಗಳನ್ನು ಪಡೆದುಕೊಂಡಿತು. ಇವರು ಯಾವುದೇ ಪಂಥ, ಸಿದ್ಧಾಂತ, ತತ್ವಗಳಿಗೆ ಅಂಟಿಕೊಳ್ಳದೆ ಎಲ್ಲೆಲ್ಲಿ ಒಳ್ಳೆಯ ಅಂಶಗಳಿವೆಯೋ, ಜೀವನದ ಚೆಲುವು ಎಲ್ಲೆಲ್ಲಿ ಹರಡಿದೆಯೊ ಅದನ್ನೆಲ್ಲ ಕಾವ್ಯವಾಗಿಸುತ್ತಾ ಬಂದಿದ್ದಾರೆನ್ನಬಹುದು.

ಜೀವನದಲ್ಲಿ ತಮಗಾದ ಕೆಲವೊಂದು ಅನುಭವಗಳು, ಕಷ್ಟ ಸುಖಗಳು, ಸಮಾಜದ ವೈಚಿತ್ರ್ಯಗಳು, ಎಲ್ಲವನ್ನು ತಮ್ಮ ಕಾವ್ಯದಲ್ಲಿ ಅಭಿವ್ಯಕ್ತಗೊಳಿಸಿ ಕನ್ನಡ ಸಾಹಿತ್ಯಕ್ಕೆ ಉತ್ಕೃಷ್ಟ ಕವನಗಳನ್ನು ನೀಡಿದರು. ಸಮಾಜದ ಜಡ ಚೇತನ ವಸ್ತುಗಳೆಲ್ಲವನ್ನು ತಮ್ಮದೇ ಆದ ವಿಭಿನ್ನ, ವಿಶಿಷ್ಟ ದೃಷ್ಟಿಕೋನಗಳಿಂದ ನೋಡಿ, ಹಿರಿಯ ಸಾಹಿತಿಗಳಿಂದ ಪ್ರೇರಣೆಗೊಂಡು ಹೊಸ ಹೊಸ ಚಿಂತನೆಗಳನ್ನು ಮೂಡಿಸಿರುವುದನ್ನು ಈ ಅಧ್ಯಯನದಲ್ಲಿ ಅನಾವರಣಗೊಳಿಸಲಾಗಿದೆ.

ಮನುಷ್ಯ ಜೀವನದಲ್ಲಿ ಅದರಲ್ಲಿಯೂ ದಾಂಪತ್ಯ ಬದುಕಿನಲ್ಲಿ ಸೋಲು-ಗೆಲುವು, ನೋವು-ನಲಿವು, ಆಸೆ-ನಿರಾಸೆ, ಹಮ್ಮು-ಬಿಮ್ಮು, ಸ್ವಾರ್ಥ, ಅಹಂಕಾರ, ದ್ವಂದ್ವ, ಗೊಂದಲ, ಬೇಡಿಕೆ, ಬಯಕೆ, ದೈನ್ಯತೆ, ಭಯ, ಆತಂಕ, ಮುಂತಾದ ಅನೇಕ ಅಂಶಗಳು ಜೀವನದಲ್ಲಿ ಹೇಗೆ ಎದುರಾಗುತ್ತವೆ ಎಂಬುದನ್ನು, ಅವುಗಳನ್ನು ಮನುಷ್ಯ ಎದುರಿಸುವ ಬಗೆಯನ್ನು ತಿಳಿಸಿದ್ದಾರೆ. ಇವರ ಜೊತೆಗೆ, ದಾಂಪತ್ಯ ಜೀವನದಲ್ಲಿ ಪ್ರೀತಿ-ಪ್ರೇಮದ ಮಹತ್ವವನ್ನು ತಿಳಿಸಿದ್ದಾರೆ. ದಾಂಪತ್ಯದಲ್ಲಿ ಬದುಕಷ್ಟೇ ಮುಖ್ಯವಾಗಿ ಇಟ್ಟುಕೊಳ್ಳದೆ, ಹೆಣ್ಣು ಮಕ್ಕಳಿಗಿರುವ ತವರಿನ ಪ್ರೀತಿಯನ್ನು, ಮಾತೃಪ್ರೇಮ, ಮಕ್ಕಳ ಮೇಲಿನ ಪ್ರೀತಿ ಹೇಗೆ ಇದೆ ಎಂಬುದನ್ನು ಕಾಣಬಹುದು.

ಜನಪದರಲ್ಲಿ ಇದ್ದಂತಹ ತಂದೆ-ತಾಯಿ ಸೇರಿದಂತೆ ಹಿರಿಯರಿಗೆ ಗೌರವ ಸೂಚಿಸುವ ಮನಸ್ಥಿತಿ ಇಂದು ಬದಲಾಗಿದೆ. ಓದಿ ವಿದ್ಯಾವಂತರಾಗಿರುವವರೇ ಹಿರಿಯರಿಗೆ ಗೌರವ ಕೊಡದೆ ಇರುವ, ಮತ್ತು ತಂದೆ ತಾಯಿಗಳನ್ನು ವೃದ್ಧಾಶ್ರಮಕ್ಕೆ ಸೇರಿಸುವ ಅಭ್ಯಾಸ ಆರಂಭವಾಗಿದೆ. ಇಂತಹ ವ್ಯಕ್ತಿಗಳಿಗೆ ಕೆ.ಎಸ್.ನ

ಅವರ ಕವನಗಳಲ್ಲಿ ಮೂಡಿರುವ ತಾಯಿ ಮಗುವಿನ ಮೇಲೆ ತೋರಿಸುವ ಪ್ರೀತಿ ಅವರ ಚಿಕ್ಕ ಚಿಕ್ಕ ತುಂಟಾಟಗಳನ್ನು ನೋಡಿ ಆನಂದಿಸುವ ಮನಸ್ಸು, ಎಷ್ಟು ಮಹತ್ವ ಪೂರ್ಣವಾದುದೆಂದು ತಿಳಿಸುತ್ತದೆ.

ಸಮಾಜದಲ್ಲಿ ಹೆಣ್ಣು ಮತ್ತು ಗಂಡನ್ನು ಅನೇಕ ವಿಚಾರಗಳ ಹಿನ್ನೆಲೆಯಲ್ಲಿ, ಮೇಲು-ಕೀಳು, ಎಂದು ಅಸಮಾನತೆಯಿಂದ ನೋಡುವ ಸಂದರ್ಭವಿದೆ. ಹೆಣ್ಣು ಕೇವಲ ಮನೆಯ ಅಡಿಗೆ ಮನೆಗೆ ಸೀಮಿತವಾದವಳು, ಇವಳಿಗೆ ಯಾವುದೇ ರೀತಿಯ ಭಾವನೆಗಳು ಉತ್ಸಾಹ, ಚೈತನ್ಯ ಅಭಿವ್ಯಕ್ತಿ, ಸ್ವಾತಂತ್ರ್ಯವೇ ಇಲ್ಲವೆಂದು ಪರಿಗಣಿಸುತ್ತಾರೆ. ಆದರೆ ಕೆ.ಎಸ್.ನ ಕವನಗಳಲ್ಲಿ ಹೆಣ್ಣಿಗೊಂದು ಉತ್ತಮ ಸ್ಥಾನ ನೀಡಿದ್ದಾರೆ. ತಾಯಿಯಾಗಿ, ಪ್ರೇಮಿಯಾಗಿ, ಹೆಂಡತಿಯಾಗಿ, ಮಹತ್ವ ಪೂರ್ಣವಾದ ಸ್ಥಾನ ನೀಡಿದ್ದಾರೆ. ಅವಳ ತವರಿನ ಮೇಲಿನ ಪ್ರೇಮವನ್ನು ಕುರಿತಂತೆ ವಿವಾಹವಾಗಿ, ತಂದೆ-ತಾಯಿ ಎಲ್ಲರನ್ನು ತೊರೆದು ಬರುವ ಆಕೆಯ ಮನಸ್ಸು ಎಲ್ಲವನ್ನು ಅರಿತಂತೆ ಕವಿ ಕವನದಲ್ಲಿ ಹೇಳಿದ್ದಾರೆ. ಕುಟುಂಬ ನಿರ್ವಹಣೆಯಲ್ಲಿ "ಹೆಣ್ಣು ಸಂಸಾರದ ಕಣ್ಣಾಗಿ ಹೇಗೆ ದುಡಿಯುತ್ತಾಳೆ" ತನ್ನ ಸಂಸಾರದ ಹೊರೆಯನ್ನು ಹೊರಲು ಗಂಡನಿಗೆ ಹೆಗಲು ಕೊಡುವ ಬಗೆ ಹೇಗಿರುತ್ತದೆ ಎಂಬುದನ್ನು ಇವರ ಕವನಗಳಲ್ಲಿ ಕಾಣಬಹುದು.

ಪ್ರೀತಿಯೆಂದರೆ ಹಣ, ನೆಮ್ಮದಿ ಸಿಗುತ್ತದೆ ಎಂದರೆ ಅದು ಹಣದಿಂದ ಮಾತ್ರ ಎಂದು ತಿಳಿದಿರುವ ತಾಳ್ಮೆ, ಸಹನೆ, ತ್ಯಾಗ, ಪ್ರೀತಿ, ಔದಾರ್ಯ, ಕರುಣೆಯೆಂಬ ಗುಣಗಳನ್ನು ತೂರಿ ದಾಂಪತ್ಯದಲ್ಲಿ ತುಂಬು ಜೀವನ ನಡೆಸದೆ ವಿಚ್ಛೇದನ ಪಡೆಯುವವರ ಸಂಖ್ಯೆ ಇಂದು ಹೆಚ್ಚಾಗಿದೆ. ಅಂತಹವರಿಗೆ ಈ ಕವನಗಳು ಪ್ರೀತಿಯ ಪಾಠವನ್ನು ಹೇಳುತ್ತವೆ.

ಪ್ರತಿಯೊಬ್ಬರೂ ತಾವೂ ಇರುವ ನೆಲ, ಆಡುವ ಭಾಷೆಯ ಬಗ್ಗೆ ಪ್ರೀತಿ ಅಭಿಮಾನ ಹೊಂದಿರುತ್ತಾರೆ. ಅದು ಕೆ.ಎಸ್.ನ ಅವರ ಕಾವ್ಯಗಳಲ್ಲೂ ವ್ಯಕ್ತವಾಗಿದೆ. ಭಾರತ ಮಾತೆ, ಆ ಮಾತೆಯ ಮಗಳಾದ ಕನ್ನಡ ತಾಯಿ. ಆ ತಾಯಿಯ ಕನ್ನಡ ನುಡಿ ಇವುಗಳ ಮೆಲೆ ಅಪಾರ ಅಭಿಮಾನ ಕಾಣಿಸಿಕೊಂಡಿದೆ. ಜೊತೆಗೆ ಇಂದು ಕನ್ನಡಕ್ಕೊದಗಿರುವ ಕುತ್ತು, ಅದಕ್ಕಾಗಿ ಆತಂಕ ಮತ್ತು ಆ ಆತಂಕವನ್ನು ದೂರ ಮಾಡಿಕೊಳ್ಳಲೇ ಬೇಕಾದ ಅನಿವಾರ್ಯತೆ ಎಲ್ಲವೂ ಅವರ ಕವಿತೆಗಳಲ್ಲಿ ಕಾಣಿಸಿಕೊಂಡಿವೆ .

ಒಟ್ಟಾರೆಯಾಗಿ ಕೆ.ಎಸ್.ನ ಅವರ ಕವನಗಳು ನಮ್ಮ ಸುತ್ತಲಿನ ಎಲ್ಲ ವಿಚಾರಗಳನ್ನು ಬಿತ್ತರಿಸುವ ಪ್ರತಿನಿಧಿಗಳಂತಿದ್ದು ಅವುಗಳ ಅರಿವಿನಿಂದ ಬದಲಾವಣೆಯ ಪಥದಲ್ಲಿ ಸಾಗುವ ಕೆಲಸ ಮಾಡಬೇಕಾಗಿದೆ . ಎಲ್ಲ ಸಹೃದಯರು ಓದಿ ತಿಳಿಯಬೇಕಾದ ವಿಚಾರಗಳಿದ್ದು ಜೀವನದ ದಾರಿದೀಪಗಳಾಗಿ ಅವರ ಕಾವ್ಯಗಳು ಬೆಳಗುತ್ತಿವೆ.

ಅಡಿ ಟಿಪ್ಪಣಿಗಳು

೧. ಮೌನದಾಚೆಯ ಮಾತು–ಸುಮತೀಂದ್ರ ನಾಡಿಗ, ಪು.ಸಂ. ೨೭೬, ಸಪ್ನ ಬುಕ್ ಹೌಸ್,ಬೆಂಗಳೂರು–೨೦೧೨

ಆಕರ ಗ್ರಂಥ

೧. ಕೆ.ಎಸ್.ನರಸಿಂಹಸ್ವಾಮಿ ಸಮಗ್ರ ವಾಙ್ಮಯ

ಸಂಪುಟ ಒಂದು : ಕಾವ್ಯ-೧ -ಸಂಪಾದಕರು ಡಾ.ಸಿ.ಎನ್.ರಾಮಚಂದ್ರನ್

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-೨೦೦೯

ಪರಾಮರ್ಶನ ಗ್ರಂಥಗಳು

೧. ಇಹದ ಪರಿಮಳದ ಹಾದಿ–ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಅಂಕಿತ ಪ್ರಕಾಶನ, ಬೆಂಗಳೂರು–೨೦೦೦
೨. ಕನ್ನಡದ ಹಾಡುಪಾಡು–ಡಾ.ಕೆ.ಸಿ.ಶಿವಾರೆಡ್ಡಿ
ಅಧ್ಯಯನ ಮಂಡಲ
೩. ಕೆ.ಎಸ್.ನರಸಿಂಹಸ್ವಾಮಿ ಸಮಗ್ರ ವಾಙ್ಮಯ, ಸಂಪುಟ ಎರಡು: ಕಾವ್ಯ–೨, ಸಂಪಾದಕರು ಡಾ. ಸಿ.ಎನ್. ರಾಮಚಂದ್ರನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು– ೨೦೦೯
೪. ಜಿ.ಎಸ್.ಶಿವರುದ್ರಪ್ಪ ಸಾಹಿತ್ಯ ಮಾಲೆ–೩, ಸಮಗ್ರ ಗದ್ಯ–೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
೫. ಪ್ರೇಮ ಕಾಶ್ಮೀರ– ಕುವೆಂಪು, ಉದಯರವಿ ಪ್ರಕಾಶನ–೨೦೧೧
೬. ಮೌನದಾಚೆಯ ಮಾತು–ಸುಮತೀಂದ್ರ ನಾಡಿಗ, ಸಪ್ನ ಬುಕ್ ಹೌಸ್,ಬೆಂಗಳೂರು–೨೦೧೨
೭. ಯುಗಧರ್ಮ ಹಾಗೂ ಸಾಹಿತ್ಯ ದರ್ಶನ– ಕೀರ್ತಿನಾಥ
೮. ಕುರ್ತಕೋಟಿ–ಕುರ್ತಕೋಟಿ ಮೆಮೊರಿಯಲ್ ಟ್ರಸ್ಟ್ – ೨೦೦೭
೯. ಶಕ್ತಿ ಶಾರದೆಯ ಮೇಳ– ಡಿ.ಆರ್. ನಾಗರಾಜ್, ಅಕ್ಷರ ಪ್ರಕಾಶನ, ಹೆಗ್ಗೋಡು–೨೦೦೮
೧೦. ಸಾಲು ದೀಪಗಳು–ಸಂಪಾದಕರು ಪ್ರೊ.ಜಿ.ಎಸ್.ಸಿದ್ಧಲಿಂಗಯ್ಯ, ಪ್ರೊ.ಎಂ.ಎಚ್.ಕೃಷ್ಣಯ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು–೨೦೧೬
೧೧. ಸಿಪಿಕೆ ಅವರ ಕಾವ್ಯ ಒಂದು ಅಧ್ಯಯನ (ಎಂ.ಫಿಲ್. ಸಂಶೋಧನ ಗ್ರಂಥ) ಹಂಪಿ ವಿಶ್ವವಿದ್ಯಾನಿಲಯ–ಚಂದ್ರ.ಎಂ.ಇ.–೨೦೧೨
೧೨. ಸೌಂದರ್ಯ ಸಮೀಕ್ಷೆ–ಜಿ.ಎಸ್.ಎಸ್.–ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ – ೧೯೬೫
೧೩. ಯುಗಧರ್ಮ ಹಾಗೂ ಸಾಹಿತ್ಯ ದರ್ಶನ– ಕೀರ್ತಿನಾಥ

ಕುರ್ತಕೋಟಿ–ಕುರ್ತಕೋಟಿ ಮೆಮೊರಿಯಲ್ ಟ್ರಸ್ಟ್ – ೨೦೦೭

೧೪. ಹೊಸಗನ್ನಡದ ಅರುಣೋದಯ– ಡಾ. ಶ್ರೀನಿವಾಸ ಹಾವನೂರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು–೨೦೧೧
೧೫. ಹೊಸಗನ್ನಡ ಸಾಹಿತ್ಯ ಚರಿತ್ರೆ – ಪ್ರೊ. ಎಲ್.ಎಸ್.ಶೇಷಗಿರಿರಾವ್, ಅಂಕಿತ ಪ್ರಕಾಶನ– ೨೦೦೫